ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜೂನ್ 9 ಭಾನುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 54 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೋದಿ ಸಂಪುಟಕ್ಕೆ ಪ್ರಹ್ಲಾದ್ ಜೋಷಿ, ಹೆಚ್.ಡಿ.ಕುಮಾರಸ್ವಾಮಿ ಸೇರ್ಪಡೆ ಖಚಿತ

ಮತ್ತೊಂದು ಸ್ಥಾನಕ್ಕೆ ಶೆಟ್ಟರ್, ಬೊಮ್ಮಾಯಿ, ಸೋಮಣ್ಣ, ರಾಘವೇಂದ್ರ, ಗದ್ದಿಗೌಡರ್ ಲಾಬಿ


ಪ್ರಹ್ಲಾದ್ ಜೋಷಿ


ಎಚ್.ಡಿ.ಕುಮಾರಸ್ವಾಮಿ


ಜಗದೀಶ್‌ಶೆಟ್ಟರ್


ಬೊಮ್ಮಾಯಿ


ರಾಘವೇಂದ್ರ


ಸೋಮಣ್ಣ

ಬೆಂಗಳೂರು, ಜೂ.8 (ಕೆಎಂಶಿ)– ನರೇಂದ್ರ ಮೋದಿ ಸಂಪುಟಕ್ಕೆ ಕರ್ನಾಟಕದಿಂದ ಪ್ರಹ್ಲಾದ್ ಜೋಷಿ ಹಾಗೂ ಎಚ್.ಡಿ.ಕುಮಾರಸ್ವಾಮಿ ಸೇರ್ಪಡೆ ಖಚಿತವಾಗಿದೆ. ಮತ್ತೊಂದು ಸಚಿವ ಸ್ಥಾನ ವೀರಶೈವ ಲಿಂಗಾಯತ ಸಮುದಾಯಕ್ಕೆ ದೊರೆಯುವ ಸಾಧ್ಯತೆ ಇದೆ. ಈ ಸ್ಥಾನಕ್ಕೆ ರಾಜ್ಯದಿಂದ ಆಯ್ಕೆಗೊಂಡಿರುವ ಸಮುದಾಯದ ಆರು ಮಂದಿಯೂ ಪ್ರಬಲ ಪೈಪೋಟಿ ನಡೆಸಿದ್ದಾರೆ.

ಮಾಜಿ ಮುಖ್ಯಮಂತ್ರಿಗಳಾದ ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ, ಮಾಜಿ ಸಚಿವ ವಿ.ಸೋಮಣ್ಣ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪುತ್ರ ಬಿ.ವೈ.ರಾಘವೇಂದ್ರ, ಪಿ.ಸಿ.ಗದ್ದಿಗೌಡರ್ ಈ ಸಮುದಾಯದಿಂದ ಕೇಂದ್ರದಲ್ಲಿ ಸ್ಥಾನ ಪಡೆಯಲು ತಮ್ಮದೇ ಆದ ಪ್ರಭಾವದಿಂದ ತೆರೆಮರೆಯಲ್ಲಿ ಕಸರತ್ತು ನಡೆಸಿದ್ದಾರೆ. ರಾಘವೇಂದ್ರ ಮತ್ತು ಗದ್ದಿಗೌಡರ್ ಅನುಕ್ರಮವಾಗಿ 4 ಮತ್ತು 5ನೇ ಬಾರಿ ಲೋಕಸಭೆ ಪ್ರವೇಶಿಸಿದ್ದಾರೆ. ಉಳಿದ ಮೂವರು ಕರ್ನಾಟಕದಲ್ಲಿ ಬಿಜೆಪಿ ● 9ನೇ ಪುಟಕ್ಕೆ

ಇಂದು 3ನೇ ಬಾರಿ ಪ್ರಧಾನಿಯಾಗಿ ಮೋದಿ ಪ್ರಮಾಣ

● ರಾತ್ರಿ 7.15ಕ್ಕೆ ರಾಷ್ಟ್ರಪತಿ ಭವನದಲ್ಲಿ ಪ್ರಮಾಣ ವಚನ ಸ್ವೀಕಾರ ಸಮಾರಂಭ ● ದೇಶ–ವಿದೇಶದ 8 ಸಾವಿರ ಗಣ್ಯಾತಿಗಣ್ಯರ ಸಮಕ್ಷಮ ● ಮಿತ್ರ ಪಕ್ಷಗಳ ಸಂಸದರು ಸೇರಿದಂತೆ ಹಲವು ಸಚಿವರು ಇದೇ ವೇಳೆ ಶಪಥ



ನವದೆಹಲಿ: ಸತತ ಮೂರನೇ ಅವಧಿಗೆ ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದ (ಎನ್‌ಡಿಎ) ಸಂಸದೀಯ ನಾಯಕರಾಗಿ ಆಯ್ಕೆಯಾಗಿರುವ ನರೇಂದ್ರ ಮೋದಿ, ಭಾನುವಾರ ರಾತ್ರಿ ಮೂರನೇ ಬಾರಿ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ರಾಷ್ಟ್ರಪತಿ ಭವನದಲ್ಲಿ ಏರ್ಪಡಿಸಲಾಗಿರುವ ಸಮಾರಂಭದಲ್ಲಿ ರಾತ್ರಿ 7.15ಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನರೇಂದ್ರ ಮೋದಿ ಮತ್ತು ಅವರ ಸಂಪುಟದ ಕೆಲವು ಸಚಿವರಿಗೆ ಪ್ರಮಾಣ ವಚನ ಬೋಧಿಸಲಿದ್ದಾರೆ. ಬಿಜೆಪಿ ಸಂಸದೀಯ ಪಕ್ಷದ ನಾಯಕರಾಗಿ ಮೋದಿಯವರು ಆಯ್ಕೆಯಾದ ಪತ್ರವನ್ನು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ರಾಷ್ಟ್ರಪತಿಗಳಿಗೆ ಸಲ್ಲಿಸಿದ್ದರು. ಅಂತೆಯೇ ಎನ್‌ಡಿಎ ನಾಯಕರು ತಮ್ಮ ಬೆಂಬಲ ಪತ್ರವನ್ನು ಸಲ್ಲಿಸಿದ್ದರು. ನಂತರ ರಾಷ್ಟ್ರಪತಿಗಳು ನೂತನ ಸರ್ಕಾರ ರಚನೆಗೆ ಮೋದಿ ಅವರಿಗೆ ಆಹ್ವಾನ ನೀಡಿದ್ದರು.

ಬಿಜೆಪಿಯ ಎಲ್ಲಾ ಪ್ರಮುಖ ಮಿತ್ರ ಪಕ್ಷಗಳಾದ ತೆಲುಗು ದೇಶಂ ಪಕ್ಷ, ಜನತಾ ದಳ–ಯುನೈಟೆಡ್, ಶಿವಸೇನೆ ಮತ್ತು ಲೋಕ ಜನಶಕ್ತಿ ಪಕ್ಷ(ರಾಮ್ ವಿಲಾಸ್)ದ ಸಂಸದರು ಮೋದಿ ಜೊತೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ 240 ಸ್ಥಾನಗಳನ್ನು ಗಳಿಸಿದ್ದು, 543 ಸದಸ್ಯ ಬಲದ ● 6ನೇ ಪುಟಕ್ಕೆ

ಬಿಜೆಪಿಯ ಹಿಂದಿನ ಸಚಿವರ ಮುಂದುವರಿಕೆ

ಎನ್‌ಡಿಎ ಸರ್ಕಾರದ ಹಿಂದಿನ ಅವಧಿಯಲ್ಲಿ ಹಂಚಿಕೆ ಮಾಡಲಾಗಿದ್ದ ಕೆಲವು ಖಾತೆಗಳು ಈಗಲೂ ಮುಂದುವರಿಯಲಿವೆ ಎನ್ನಲಾಗುತ್ತಿದೆ. ಲಖನೌದಿಂದ ಗೆಲುವು ಕಂಡಿರುವ ಹಿಂದಿನ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಅದೇ ಖಾತೆಯಲ್ಲಿ ಮುಂದುವರಿಯುವ ಸಾಧ್ಯತೆ ಇದೆ. ರಾಜ್ಯಸಭೆ ಸಂಸದ ಎಸ್.ಜೈಶಂಕರ್ ಅವರಿಗೆ ಮತ್ತೆ ವಿದೇಶಾಂಗ ವ್ಯವಹಾರಗಳ ಖಾತೆ, ನಿತಿನ್ ಗಡ್ಕರಿ ಅವರಿಗೆ ಅದೇ ರಸ್ತೆ ಸಾರಿಗೆ ಖಾತೆಯೂ ಮುಂದುವರಿಯಲಿದೆ ಎಂದು ನಿರೀಕ್ಷಿಸಲಾಗಿದೆ. ಗೃಹ, ಹಣಕಾಸು, ರಕ್ಷಣೆ, ವಿದೇಶಾಂಗ ವ್ಯವಹಾರಗಳು, ರಸ್ತೆ ಸಾರಿಗೆ, ರೈಲ್ವೆ, ಐಟಿ ಹಾಗೂ ಶಿಕ್ಷಣದಂತಹ ಪ್ರಮುಖ ಖಾತೆಗಳನ್ನು ಬಿಜೆಪಿ ಉಳಿಸಿಕೊಳ್ಳುವ ಸಾಧ್ಯತೆ ಹೆಚ್ಚಿದೆ. ಸ್ಮೃತಿ ಇರಾನಿ, ಅರ್ಜುನ್ ಮುಂಡಾ, ರಾಜೀವ್ ಚಂದ್ರಶೇಖರ್ ಸೇರಿದಂತೆ ಹಿಂದಿನ ಸಂಪುಟದಲ್ಲಿದ್ದ 19 ಸಚಿವರು ಈ ಚುನಾವಣೆಯಲ್ಲಿ ಸೋಲು ಕಂಡಿದ್ದಾರೆ. ಅವರನ್ನು ರಾಜ್ಯಸಭೆಗೆ ಆಯ್ಕೆ ಮಾಡುವುದರೊಂದಿಗೆ ಮತ್ತೆ ಸಂಪುಟಕ್ಕೆ ಸೇರಿಸಿಕೊಳ್ಳುವ ಸಾಧ್ಯತೆ ಕಡಿಮೆ ಎಂದು ಹೇಳಲಾಗುತ್ತಿದೆ. ಬಂಡಕಟ್ಟು ವ್ಯವಹಾರಗಳ ಸಚಿವಾಲಯವು ಟಿಡಿಪಿ ಅಥವಾ ಜೆಡಿಯು ಪಾಲಾಗುವ ನಿರೀಕ್ಷೆ ಇದೆ. ರೈಲ್ವೆ ಖಾತೆ ಬಿಜೆಪಿ ಬಳಿಯೇ ಇರಲಿದೆ. ಈ ಬಾರಿ ಸರ್ಕಾರ ರಚಿಸಲು ಹಾಗೂ ಉಳಿಸಿಕೊಳ್ಳಲು ಎನ್‌ಡಿಎ ಮೈತ್ರಿಕೂಟದ ಪಕ್ಷಗಳ ಬೆಂಬಲ ಅನಿವಾರ್ಯವಾಗಿರುವುದರಿಂದ ಅವುಗಳ ವಿಶ್ವಾಸ ಪಡೆಯಲು ಗರಿಷ್ಠ ಸಂಖ್ಯೆಯಲ್ಲಿ ಸಚಿವ ಸ್ಥಾನಗಳನ್ನು ಬಿಟ್ಟುಕೊಡಬೇಕಾದ ಅನಿವಾರ್ಯತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಇದೆ.

ರಾಹುಲ್ ಗಾಂಧಿ ವಿಪಕ್ಷ ನಾಯಕ

ಸಿಡಬ್ಲ್ಯುಸಿಯಲ್ಲಿ ನಿರ್ಣಯ ಅಂಗೀಕಾರ



ನವದೆಹಲಿ: ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ರಚನೆಯಾಗುತ್ತಿರುವ ಬೆನ್ನಲ್ಲೇ ವಿಪಕ್ಷ ನಾಯಕನ ಆಯ್ಕೆಗೆ ಕಾಂಗ್ರೆಸ್‌ನಲ್ಲಿ ಬಿರುಸಿನ ಚರ್ಚೆಗಳು ಆರಂಭವಾಗಿವೆ.

ವಿಪಕ್ಷ ನಾಯಕನ ಆಯ್ಕೆ ಬಗ್ಗೆ ಚರ್ಚೆ ನಡೆಸಲು ಆಯೋಜಿಸಲಾಗಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ರಾಹುಲ್ ಗಾಂಧಿ ವಿಪಕ್ಷ ನಾಯಕನಾಗಬೇಕು ● 6ನೇ ಪುಟಕ್ಕೆ

ಹಳೇ ಕೆಸರೆ ಬಳಿಯ ಗುಜರಿಯಲ್ಲಿ ಕ್ಲೋರಿನ್ ಗ್ಯಾಸ್ ಸೋರಿಕೆ ಪ್ರಕರಣ

37 ಮಂದಿ ಅಸ್ವಸ್ಥ; 26 ಮಂದಿ ಗುಣಮುಖ; ವಿವಿಧ ಆಸ್ಪತ್ರೆಗಳಲ್ಲಿ 11 ಮಂದಿ ಚಿಕಿತ್ಸೆ


ಕ್ಲೋರಿನ್ ಸೋರಿಕೆಯಿಂದ ಅಸ್ವಸ್ಥನಾದ ಬಾಲಕನನ್ನು ಮೈಸೂರಿನ ಪ್ರಜ್ವಲ್ ಆಸ್ಪತ್ರೆಯಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಭೇಟಿ ಮಾಡಿ, ಆರೋಗ್ಯ ವಿಚಾರಿಸಿದರು.

ಮೈಸೂರು, ಜೂ.8(ಆರ್‌ಕೆ)– ಮೈಸೂರಿನ ಹಳೇ ಕೆಸರೆ ಬಳಿ ಗುಜರಿಯಲ್ಲಿ ಕ್ಲೋರಿನ್ ಗ್ಯಾಸ್ ಸೋರಿಕೆಯಾಗಿ ಅಸ್ವಸ್ಥರಾಗಿದ್ದ 37 ಮಂದಿ ಪೈಕಿ 26 ಜನ ಚಿಕಿತ್ಸೆ ಪಡೆದು ಗುಣಮುಖರಾಗಿದ್ದಾರೆ.

ಉಳಿದ 11 ಮಂದಿಯನ್ನು ಮೈಸೂರಿನ ಪ್ರಜ್ವಲ್ ಆಸ್ಪತ್ರೆ, ಆಲನಹಳ್ಳಿಯ ನಾಗರಾಜೇಗೌಡ ಆಸ್ಪತ್ರೆ, ಕೆ.ಆರ್.ಆಸ್ಪತ್ರೆ ಹಾಗೂ ಮೇಟಗಳ್ಳಿ ಬಳಿಯ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಶುಕ್ರವಾರ ಸಂಜೆ ಗುಜರಿಯ ರಿದಾ ಸ್ಟೀಲ್ ಟ್ರೇಡರ್ಸ್‌ನಲ್ಲಿದ್ದ ● 9ನೇ ಪುಟಕ್ಕೆ

ಸುರಕ್ಷತಾ ದೃಷ್ಟಿ; ತಜ್ಞರ ಸಲಹೆಯಂತೆ ಇಂದು 6 ಕ್ಲೋರಿನ್ ಗ್ಯಾಸ್ ಸಿಲಿಂಡರ್‌ಗಳು ಕಾರವಾರಕ್ಕೆ ಸ್ಥಳಾಂತರ



ಮೈಸೂರು, ಜೂ. 8(ಆರ್‌ಕೆ)– ಶುಕ್ರವಾರ ಸಂಜೆ ಕ್ಲೋರಿನ್ ಅನಿಲ ಸೋರಿಕೆಯಿಂದ ಅವಾಂತರ ಸೃಷ್ಟಿಸಿರುವ ಮೈಸೂರಿನ ಹಳೇ ಕೆಸರೆ ಬಳಿಯ 6 ಸಿಲಿಂಡರ್‌ಗಳನ್ನು ನಿಷ್ಕ್ರಿಯಗೊಳಿಸಲು ನಾಳೆ (ಜೂ. 9) ಕಾರವಾರ ಜಿಲ್ಲಾ ಕೇಂದ್ರಕ್ಕೆ ಸ್ಥಳಾಂತರಿಸಲು ಜಿಲ್ಲಾಡಳಿತ ಸಿದ್ಧತೆ ನಡೆಸುತ್ತಿದೆ. ಘಟನೆ ಸಂಭವಿಸುತ್ತಿದ್ದಂತೆಯೇ ಮತ್ತಷ್ಟು ಅಪಾಯ ತಪ್ಪಿಸಲು ಶುಕ್ರವಾರ ರಾತ್ರಿ ಕ್ರೇನ್ ಮೂಲಕ ಕ್ಲೋರಿನ್ ಅನಿಲ ತುಂಬಿದ ಭಾರಿ ಗಾತ್ರದ 6 ಸಿಲಿಂಡರ್‌ಗಳನ್ನು ಗುಜರಿಯಿಂದ 150 ಮೀಟರ್ ದೂರದ ನಿರ್ಜನ ಪ್ರದೇಶಕ್ಕೆ ಸ್ಥಳಾಂತರಿಸಲಾಗಿದ್ದು, ಅಲ್ಲಿಗೆ ಯಾರೂ ತೆರಳದಂತೆ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿ ಎಚ್ಚರ ವಹಿಸಲಾಗಿದೆ.

ಸ್ಥಳಕ್ಕೆ ಧಾವಿಸಿದ್ದ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ನಗರ ಪೊಲೀಸ್ ಆಯುಕ್ತ ಬಿ. ರಮೇಶ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಹಾಗೂ ಇತರ ಅಧಿಕಾರಿಗಳು, ಗುಜರಿಯಲ್ಲಿದ್ದ ಸಿಲಿಂಡರ್‌ಗಳನ್ನು ಪರಿಶೀಲಿಸಿ, ಅವುಗಳಲ್ಲಿರುವ ರಾಸಾಯನಿಕದಿಂದ ಮತ್ತಷ್ಟು ತೊಂದರೆಯಾಗುವ ಸಂಭವವಿರುವುದರಿಂದ ಸಿಲಿಂಡರ್‌ನಲ್ಲಿರುವ ಕ್ಲೋರಿನ್ ● 9ನೇ ಪುಟಕ್ಕೆ

ವರದಕ್ಷಿಣೆ ಕಿರುಕುಳ: ತಂಗಿಯ ನೆರವಿಗೆ ಧಾವಿಸಿದ ಅಣ್ಣನ ಇರಿದು ಕೊಂದ ಭಾವ

● ಅದಕ್ಕೆ ಸಹೋದರ, ತಾಯಿ, ಚಿಕ್ಕಮ್ಮ, ಆಕೆಯ ಮಗನೂ ಸಾಥ್ ● ಸ್ನೇಹಿತನ ರಕ್ಷಣೆಗೆ ಹೋದವನ ಮೇಲೂ ಮಾರಣಾಂತಿಕ ಹಲ್ಲೆ ● ರಾಮಕೃಷ್ಣನಗರದಲ್ಲಿ ಹಾಡಹಗಲೇ ಘೋರ ಘಟನೆ


ಹತ್ಯೆಗೀಡಾದ ಅಭಿಷೇಕ್


ಆರೋಪಿ ರವಿಚಂದ್ರ

ಮೈಸೂರು, ಜೂ.8(ಎಸ್‌ಬಿಡಿ)–ಗಂಡನ ಮನೆಯವರ ವರದಕ್ಷಿಣೆ ಕಿರುಕುಳದಿಂದ ತೀವ್ರವಾಗಿ ನೊಂದಿದ್ದ ತಂಗಿಯನ್ನು ತವರಿಗೆ ಕರೆದೊಯ್ಯಲು ಬಂದಿದ್ದ ಯುವಕನನ್ನು ಆತನ ಭಾವ ಹಾಗೂ ಅವನ ಮನೆಯವರೇ ಹತ್ಯೆ ಮಾಡಿರುವ ಘಟನೆ ಮೈಸೂರಿನಲ್ಲಿ ಶನಿವಾರ ಹಾಡಹಗಲೇ ನಡೆದಿದೆ.

ರಾಮಕೃಷ್ಣನಗರ ಐ ಬ್ಲಾಕ್‌ನಲ್ಲಿ ಶನಿವಾರ ಮಧ್ಯಾಹ್ನ ಈ ಘಟನೆ ನಡೆದಿದ್ದು, ಕೂರ್ಗಳ್ಳಿ ಗ್ರಾಮದ ಸ್ವಾಮಿಗೌಡ ಅವರ ಪುತ್ರ ಅಭಿಷೇಕ್(26) ಹತ್ಯೆಯಾಗಿದ್ದು, ಆತನೊಂದಿಗೆ ತೆರಳಿದ್ದ ಸ್ನೇಹಿತ ಗೌತಮ್ ಮೇಲೂ ಮಾರಣಾಂತಿಕ ಹಲ್ಲೆ ನಡೆಸಲಾಗಿದೆ. ಅಭಿಷೇಕ್ ತಂಗಿ(ವಿದ್ಯಾ)ಯ ಪತಿ ರವಿಚಂದ್ರ, ಆತನ ಸೋದರ ಕುಮಾರ್, ತಾಯಿ ಶಾರದಾ, ಆತನ ಚಿಕ್ಕಮ್ಮ ಪದ್ಮಾ ಹಾಗೂ ಆಕೆಯ ಪುತ್ರ ಕಾರ್ತಿಕ್ ಆರೋಪಿಗಳು. ಮಾರಣಾಂತಿಕವಾಗಿ ಹಲ್ಲೆಗೊಳಗಾದ ಗೌತಮ್‌ನನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಪ್ರಕರಣದ ಮೊದಲ ಆರೋಪಿ ರವಿಚಂದ್ರನಿಗೂ ಗಾಯವಾಗಿದೆ ಎನ್ನಲಾಗಿದ್ದು ಆತನೂ ಅದೇ ಆಸ್ಪತ್ರೆಯಲ್ಲಿದ್ದಾನೆ. ಉಳಿದ ಆರೋಪಿಗಳಾದ ಕುಮಾರ, ಶಾರದಾ, ಪದ್ಮಾ ಹಾಗೂ ಕಾರ್ತಿಕ್ ತಲೆಮರೆಸಿಕೊಂಡಿದ್ದಾರೆ.

ಪ್ರಕರಣದ ವಿವರ: ಕೂರ್ಗಳ್ಳಿ ಸ್ವಾಮಿಗೌಡರ ಪುತ್ರಿ ಎಸ್.ವಿದ್ಯಾ ● 9ನೇ ಪುಟಕ್ಕೆ

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ಭೀಕರ ಅಪಘಾತ

ಫಿಲ್ಮಿ ಸ್ಟೈಲ್‌ನಲ್ಲಿ ಕೆರೆಗೆ ಹಾರಿದ ಕಾರು



ಮೈಸೂರು, ಜೂ.8(ಬಿಎಲ್‌ಯು)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ಇಂದು ಭೀಕರ ಅಪಘಾತ ಸಂಭವಿಸಿದ್ದು, ಹೆದ್ದಾರಿಯಲ್ಲಿ ವೇಗವಾಗಿ ಚಲಿಸುತ್ತಿದ್ದ ಕಾರೊಂದು ಚಾಲಕನ ನಿಯಂತ್ರಣ ತಪ್ಪಿ ಫಿಲ್ಮಿ ಸ್ಟೈಲ್‌ನಲ್ಲಿ ಕೆರೆಗೆ ಹಾರಿದೆ. ಚನ್ನಪಟ್ಟಣ ತಾಲೂಕು ಸಂಕಲಗೆರೆ ಗೇಟ್ ಬಳಿ ಬೆಂಗಳೂರಿನಿಂದ ಮೈಸೂರು ಕಡೆಗೆ ಬರುತ್ತಿದ್ದ ಸ್ಕೋಡಾ ಕಾರು, ಮುಂದೆ ಹೋಗುತ್ತಿದ್ದ ಮತ್ತೊಂದು ಕಾರನ್ನು ಓವರ್‌ಟೇಕ್ ಮಾಡುವ ವೇಳೆ ಡಿವೈಡರ್‌ಗೆ ಡಿಕ್ಕಿ ಹೊಡೆದಿದೆ.

ಈ ವೇಳೆ ಚಾಲಕನ ನಿಯಂತ್ರಣ ತಪ್ಪಿದ ಕಾರು ಸರ್ವಿಸ್ ರೋಡ್ ಪಕ್ಕದಲ್ಲಿದ್ದ ಕೆರೆಗೆ ಹಾರಿದೆ. ಕಾರಿನಲ್ಲಿದ್ದ ನಾಲ್ವರಿಗೆ ಗಂಭೀರ ಗಾಯಗಳಾಗಿದ್ದು, ಸ್ಥಳೀಯ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಈ ಸಂಬಂಧ ಚನ್ನಪಟ್ಟಣ ಸಂಚಾರಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಅಪಘಾತಗಳಿಗೆ ಕಡಿವಾಣ ಹಾಕಲು ಪೊಲೀಸ್ ಇಲಾಖೆ ದಂಡಾಸ್ತ್ರ ಪ್ರಯೋಗಿಸುತ್ತಿದೆ. ಅದರಂತೆ 80 ಕಿಲೋ ಮೀಟರ್ ಮೀರಿ ಚಾಲನೆ ಮಾಡುವ ಚಾಲಕರಿಗೆ ದಂಡ ವಿಧಿಸಲಾಗುತ್ತಿದೆ. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಅಳವಡಿಸಿರುವ ಎಐ ಕ್ಯಾಮರಾಗಳ ಮೂಲಕ ವೇಗದ ಮಿತಿ ಮೀರುವ ವಾಹನಗಳ ಸೆರೆ ಹಿಡಿದು ದಂಡ ವಿಧಿಸಲಾಗುತ್ತಿದ್ದು, ಕೇವಲ ಎರಡು ದಿನಕ್ಕೆ 43 ಲಕ್ಷ ದಂಡ ವಿಧಿಸಲಾಗಿದೆ. ಆದರೂ ಬಹಳಷ್ಟು ವಾಹನ ಚಾಲಕರು ವೇಗವಾಗಿ ವಾಹನ ಚಾಲನೆ ಮಾಡುತ್ತಿದ್ದು, ಆಗಾಗೆ ಅಪ ಘಾತಗಳು ಸಂಭವಿಸುತ್ತಿವೆ.

ಐಸಿಸಿ ಟಿ20 ವಿಶ್ವಕಪ್ ಪಂದ್ಯಾವಳಿ

ಇಂದು ಭಾರತ–ಪಾಕಿಸ್ತಾನ ಹೈವೋಲ್ಟೇಜ್ ಪಂದ್ಯ

ರಾತ್ರಿ 8 ಗಂಟೆಯಿಂದ ಪಂದ್ಯ ಆರಂಭ



ನ್ಯೂಯಾರ್ಕ್, ಜೂ.8– ಇಡೀ ವಿಶ್ವವೇ ಕಾತುರದಿಂದ ಕಾಯುತ್ತಿರುವ ಸಾಂಪ್ರದಾಯಿಕ ಎದುರಾಳಿಗಳಾದ ಭಾರತ–ಪಾಕಿಸ್ತಾನ ನಡುವಿನ ಹೈವೋಲ್ಟೇಜ್ ಪಂದ್ಯಕ್ಕೆ ಕ್ಷಣಗಣನೆ ಆರಂಭವಾಗಿದೆ.

ಐಸಿಸಿ ಟಿ20 ವಿಶ್ವಕಪ್ ಪಂದ್ಯಾವಳಿಯ 19ನೇ ಪಂದ್ಯದಲ್ಲಿ ಭಾರತ ಪಾಕಿಸ್ತಾನ ತಂಡಗಳು ಮುಖಾಮುಖಿಯಾಗುತ್ತಿದ್ದು, ಪಂದ್ಯ ಕಣ್ತುಂಬಿಕೊಳ್ಳಲು ಅಭಿಮಾನಿಗಳು ತುದಿಗಾಲಲ್ಲಿ ನಿಂತಿದ್ದಾರೆ.

ಭಾನುವಾರ (ಜೂ.9) ಭಾರತೀಯ ಕಾಲಮಾನ ರಾತ್ರಿ 8 ಗಂಟೆಗೆ ಪಂದ್ಯ ಆರಂಭವಾಗಲಿದ್ದು, ನ್ಯೂಯಾರ್ಕ್‌ನ ನಸ್ಸೌ ಕೌಂಟಿ ಇಂಟರ್ ನ್ಯಾಷನಲ್ ಸ್ಟೇಡಿಯಂನಲ್ಲಿ ವೇದಿಕೆ ಸಿದ್ಧವಾಗಿದೆ.

ಭಾರತ ಪಂದ್ಯ ಗೆಲ್ಲುವ ಫೇವರೇಟ್ ಎನಿಸಿದ್ದರೂ, ಪಾಕಿಸ್ತಾನ ಟೀಂ ಇಂಡಿಯಾಗೆ ಶಾಕ್ ನೀಡಲು ಎದುರು ನೋಡುತ್ತಿದೆ. ಈಗಾಗಲೇ ಟೂರ್ನಿಯಲ್ಲಿ ಉಭಯ ತಂಡಗಳು ತಲಾ ಒಂದೊಂದು ಪಂದ್ಯ ವಾಡಿದ್ದು, ಭಾರತ ಐರ್ಲೆಂಡ್ ವಿರುದ್ಧ ಭರ್ಜರಿ ಗೆಲುವು ಸಾಧಿಸಿ ಟೂರ್ನಿಯಲ್ಲಿ ಶುಬಾರಂಭ ಮಾಡಿ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿದ್ದರೇ, ಅತ್ತ ಪಾಕಿಸ್ತಾನ ತಾನಾಡಿದ ಮೊದಲ ಪಂದ್ಯದಲ್ಲಿ ಕ್ರಿಕೆಟ್ ಶಿಶು ಆತಿಥೇಯ ಅಮೆರಿಕಾ ವಿರುದ್ಧ ಸೂಪರ್ ಓವರ್‌ನಲ್ಲಿ ಮುಗ್ಗರಿಸಿದ್ದು ತಂಡದ ನೈತಿಕ ಸ್ಥೈರ್ಯ ಕುಗ್ಗಿದೆ. ಹೀಗಾಗಿ ಪಾಕ್ ಮುಂದಿನ ಹಂತ ಪ್ರವೇಶಿಸಲು ಭಾರತದ ವಿರುದ್ಧದ ಪಂದ್ಯ ಗೆಲ್ಲಲೇಬೇಕಾದ ಒತ್ತಡದಲ್ಲಿದೆ. ಈ ಪಂದ್ಯ ಗೆದ್ದರೆ ಭಾರತ ಸೂಪರ್ 8ಗೆ ಹಾದಿ ಸುಗಮಗೊಳ್ಳಲಿದೆ.

ವಿಶ್ವಕಪ್‌ನಲ್ಲಿ ಭಾರತದ ಮೇಲುಗೈ: ಕಳೆದ 8 ವಿಶ್ವಕಪ್ ಪಂದ್ಯಾವಳಿಗಳಲ್ಲಿ ಭಾರತ ಹಾಗೂ ಪಾಕಿಸ್ತಾನ ತಂಡಗಳು ಒಟ್ಟು 7 ಬಾರಿ ಮುಖಾಮುಖಿಯಾಗಿದ್ದು ಭಾರತ 6 ಬಾರಿ ಜಯಿಸಿದ್ದರೆ, ಒಮ್ಮೆ ಮಾತ್ರ ಗೆಲುವು ಪಾಕಿಸ್ತಾನದ ಪಾಲಾಗಿದೆ.

ಐರ್ಲೆಂಡ್ ವಿರುದ್ಧದ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಹಾಗೂ ರೋಹಿತ್ ಶರ್ಮಾ ಇನಿಂಗ್ಸ್ ಆರಂಭಿಸಿದ್ದರು. ಹೀಗಾಗಿ ಪಾಕ್ ವಿರುದ್ಧ ಪಂದ್ಯದಲ್ಲೂ ಇದೇ ಜೋಡಿ ಆರಂಭಿಕರಾಗಿ ಕಣಕ್ಕಿಳಿಯಲಿದ್ದಾರೆ. ಇನ್ನು 3ನೇ ಕ್ರಮಾಂಕದಲ್ಲಿ ರಿಷಭ್ ಪಂತ್, ನಾಲ್ಕನೇ ಕ್ರಮಾಂಕದಲ್ಲಿ ಸೂರ್ಯಕುಮಾರ್ ಯಾದವ್ ಬ್ಯಾಟ್ ಬೀಸಿದರೆ, 5ನೇ ಕ್ರಮಾಂಕದಲ್ಲಿ ಶಿವಂ ದುಬೆ ಕಣಕ್ಕಿಳಿಯಲಿದ್ದಾರೆ. ಹಾಗೆಯೇ ಹಾರ್ದಿಕ್ ಪಾಂಡ್ಯ 6ನೇ ಕ್ರಮಾಂಕದಲ್ಲಿ ಆಡಿದರೆ, ಫಿನಿಶರ್ ಪಾತ್ರಗಳಲ್ಲಿ ರವೀಂದ್ರ ಜಡೇಜಾ ಹಾಗೂ ಅಕ್ಷರ್ ಪಟೇಲ್ ಕಾಣಿಸಿಕೊಳ್ಳಲಿದ್ದಾರೆ. ವೇಗಿಗಳಾಗಿ ಜಸ್‌ಪ್ರೀತ್ ಬುಮ್ರಾ, ಮೊಹಮ್ಮದ್ ಸಿರಾಜ್ ಮತ್ತು ಅರ್ಷದೀಪ್ ಸಿಂಗ್ ಕಣಕ್ಕಿಳಿಯುವುದು ಖಚಿತ. ಟೀಮ್ ಇಂಡಿಯಾದಲ್ಲಿ ಹೆಚ್ಚುವರಿ ವೇಗಿಗಳಾಗಿ ಹಾರ್ದಿಕ್ ಪಾಂಡ್ಯ ಹಾಗೂ ಶಿವಂ ದುಬೆಯನ್ನು ಬಳಸಿಕೊಳ್ಳಬಹುದು. ಹಾಗೆಯೇ ಸ್ಪಿನ್ನರ್‌ಗಳಾಗಿ ರವೀಂದ್ರ ಜಡೇಜಾ ಹಾಗೂ ಅಕ್ಷರ್ ಪಟೇಲ್ ಆಯ್ಕೆಗಳಿವೆ. ಹೀಗಾಗಿ ಟೀಮ್ ಇಂಡಿಯಾ 7 ಬೌಲರ್‌ಗಳೊಂದಿಗೆ ರಣತಂತ್ರ ರೂಪಿಸಬಹುದು.

ಭಾರತದ ಸಂಭಾವ್ಯ ತಂಡ: ರೋಹಿತ್ ಶರ್ಮಾ (ನಾಯಕ), ಹಾರ್ದಿಕ್ ಪಾಂಡ್ಯ (ಉಪನಾಯಕ), ಯಶಸ್ವಿ ಜೈಸ್ವಾಲ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ರಿಷಭ್ ಪಂತ್, ಸಂಜು ಸ್ಯಾಮ್ಸನ್, ಶಿವಂ ದುಬೆ, ರವೀಂದ್ರ ಜಡೇಜಾ, ಅಕ್ಷರ್ ಪಟೇಲ್, ಕುಲ್ದೀಪ್ ಯಾದವ್, ಯುಜ್ವೇಂದ್ರ ಚಹಲ್, ಅರ್ಷದೀಪ್ ಸಿಂಗ್, ಮೊಹಮ್ಮದ್ ಸಿರಾಜ್, ಜಸ್‌ಪ್ರೀತ್ ಬುಮ್ರಾ, ಶುಭ್‌ಮನ್ ಗಿಲ್, ಅವೇಶ್ ಖಾನ್, ರಿಂಕು ಸಿಂಗ್, ಖಲೀಲ್ ಅಹ್ಮದ್.

ಒಟ್ಟಾರೆ ನಾಳಿನ ಹೈವೋಲ್ಟೇಜ್ ಪಂದ್ಯ ಉಭಯ ತಂಡಗಳಿಗೂ ಪ್ರಮುಖವಾಗಿದ್ದು, ವಿಜಯಲಕ್ಷ್ಮಿ ಯಾರಿಗೆ ಒಲಿಯಲಿದ್ದಾಳೆ ಎಂದು ಕಾದು ನೋಡಬೇಕಿದೆ.

ಪ್ರಶಸ್ತಿ–ಪುರಸ್ಕಾರಕ್ಕೆ ಸಾಧನೆಯೇ ಮಾನದಂಡವಾಗಬೇಕು

● ಸಾಹಿತಿ ಬನ್ನೂರು ಕೆ.ರಾಜು ಅಭಿಮತ ● ಎಸ್‌ಎಸ್‌ಎಲ್‌ಸಿ, ಪಿಯುಸಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನ



ಕನ್ನಡಾಂಬೆ ರಕ್ಷಣ ವೇದಿಕೆಯಿಂದ ಏರ್ಪಡಿಸಿದ್ದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳು ಹಾಗೂ ಜಾದು ಕಲಾವಿದೆ ಸುಮಾ ರಾಜಕುಮಾರ್ ಅವರನ್ನು ಸನ್ಮಾನಿಸಿ ಶುಭ ಹಾರೈಸಿದರು.

ಮೈಸೂರು, ಜೂ.8(ಎಸ್‌ಪಿಎನ್)– ಸಮಾಜದಲ್ಲಿ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ, ಅನೇಕರು ನಿಸ್ವಾರ್ಥ ಸೇವೆ ಸಲ್ಲಿಸುತ್ತಿದ್ದಾರೆ. ಇಂತಹ ಸಾಧಕರನ್ನು ಗುರುತಿಸಿ ಗೌರವಿಸುವುದಕ್ಕೆ ಸಾಧನೆಯೇ ಮಾನದಂಡವಾಗಬೇಕು ಎಂದು ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಆಗ್ರಹಿಸಿದರು.

ಮೈಸೂರು ಕೃಷ್ಣಮೂರ್ತಿಪುರಂ ನಮನ ಕಲಾ ಮಂಟಪದಲ್ಲಿ ಕನ್ನಡಾಂಬೆ ರಕ್ಷಣ ವೇದಿಕೆಯಿಂದ ಏರ್ಪಡಿಸಿದ್ದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳ ಸನ್ಮಾನಿಸಿ ಮಾತನಾಡಿದರು.


ಕಲೆ, ಸಾಹಿತ್ಯ, ಸಂಗೀತ, ನೃತ್ಯ, ವಿಜ್ಞಾನ, ಕ್ರೀಡೆ, ಶಿಕ್ಷಣ, ಜನಪದ, ವೈದ್ಯಕೀಯ, ರಾಜಕೀಯ, ಹೋರಾಟ, ಕೃಷಿ, ಸಮಾಜ ಸೇವೆ ಸೇರಿದಂತೆ ಯಾವುದೇ ಕ್ಷೇತ್ರದಲ್ಲಿ ಗುರುತಿಸಿಕೊಂಡು ಸಾಧನೆ ಮಾಡಿದ್ದರೆ, ಅಂತಹವರಿಗೆ ಪ್ರಶಸ್ತಿಗಳನ್ನು ನೀಡಿ ಗೌರವಿಸಬೇಕು. ಈ ಪ್ರಶಸ್ತಿಗಳ ಆಯ್ಕೆ ಮಾನದಂಡವೇ ಸಾಧನೆ ಆಗಿರಬೇಕು ಎಂದು ಹೇಳಿದರು. ಈ ವೇದಿಕೆಯಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳು ಹಾಗೂ ಜಾದು ಕಲಾವಿದೆ ಸುಮಾ ರಾಜಕುಮಾರ್ ಅವರ ಸಾಧನೆಯನ್ನು ಗುರುತಿಸಿ ಸನ್ಮಾನಿಸುತ್ತಿರುವುದು ಸಂತೋಷದ ಸಂಗತಿ. ಸಾಧನೆಗೆ ಯಾವುದೇ ರಂಗವಿರಲಿ, ಪ್ರತಿಫಲಾಪೇಕ್ಷೆ ಇಲ್ಲದೆ ನಿಸ್ವಾರ್ಥವಾಗಿ ಸೇವೆ ಮಾಡುತ್ತಿರುವ ಸಾಧಕರನ್ನು ಪ್ರಶಸ್ತಿ ಪುರಸ್ಕಾರಗಳು ಹುಡುಕಿಕೊಂಡು ಹೋದಾಗಲೇ ಆ ಪುರಸ್ಕಾರಗಳಿಗೆ ನೈಜ ಗೌರವ ಸಲ್ಲುತ್ತವೆ ಎಂದರು.

ರಾಜ್ಯಮಟ್ಟದ 'ಕನ್ನಡಾಂಬೆ ರತ್ನ ಪ್ರಶಸ್ತಿ'ಗೆ ಭಾಜನರಾಗಿರುವ ಜಾದು ಕಲಾವಿದೆ ಸುಮಾ ರಾಜಕುಮಾರ್, ಜಾದು ಕಲೆ ಮೂಲಕ ಕನ್ನಡ ಕಲಾ ಜಗತ್ತನ್ನು ಶ್ರೀಮಂತಗೊಳಿಸುತ್ತಿದ್ದಾರೆ ಹಾಗೂ ಇಂತಹ ಕಲಾವಿದರು ಮೈಸೂರಿನಲ್ಲಿ ಇದ್ದಾರೆಂಬುದೇ ಹೆಮ್ಮೆಯ ಸಂಗತಿ. ಇಂತಹ ಸಾಧಕರನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಗುರುತಿಸಿ ಪ್ರಶಸ್ತಿ–ಪುರಸ್ಕಾರಗಳ ನೀಡಬೇಕು ಎಂದು ತಿಳಿಸಿದರು.

ಖಾಸಗಿ ಶಾಲಾ ವಿದ್ಯಾರ್ಥಿಗಳು ಹೆಚ್ಚು ಅಂಕ ಗಳಿಸುವುದು ದೊಡ್ಡದಲ್ಲ. ಆದರೆ ಸರ್ಕಾರಿ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳು ಹೆಚ್ಚು ಅಂಕ ಗಳಿಸುವುದೇ ಬಹು ದೊಡ್ಡ ವಿಷಯ. ಹಾಗಾಗಿ ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ಪ್ರತಿಭಾವಂತ ಮಕ್ಕಳನ್ನು ಗುರುತಿಸಿ ಅಭಿನಂದಿಸುವುದು ಸಂಘ–ಸಂಸ್ಥೆಗಳ ಆದ್ಯ ಕರ್ತವ್ಯವಾಗಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಕನ್ನಡಾಂಬೆ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಬಿ.ಬಿ.ರಾಜಶೇಖರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಹಿರಿಯ ಸಾಹಿತಿ ಡಾ.ಕೆ ಲೀಲಾ ಪ್ರಕಾಶ್, ಜಿ.ಪಂ ಮಾಜಿ ಅಧ್ಯಕ್ಷ ಕೂರ್ಗಳ್ಳಿ ಎಂ. ಮಹದೇವ್, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಸಮಿತಿ ಅಧ್ಯಕ್ಷೆ ಸುಶೀಲಮ್ಮ, ಕಾರ್ಯಾಧ್ಯಕ್ಷೆ ರೂಪ, ಉಪ ಪ್ರಾಂಶುಪಾಲೆ ಪ್ರಭಾ, ಮುಖಂಡ ಮೆಲ್ಲಹಳ್ಳಿ ಮಹದೇವ ಸ್ವಾಮಿ, ಶಿಕ್ಷಕಿ ಸಂಗೀತಾ, ವಕೀಲ ದಿನೇಶ್, ಡಿಪಿಕೆ ಪರಮೇಶ್, ಸುರೇಶ್ ಗೋಲ್ಡ್, ಕರೀಗೌಡ, ಬಸವರಾಜೇಂದ್ರ ಸ್ವಾಮಿ, ಅಜಯ್ ಶೆಟ್ಟಿ ಮುಂತಾದವರಿದ್ದರು.

ನಿಧನ



ಗೋಪಿ

ಮೈಸೂರು, ಜೂ.8–ನಗರದ ಲಕ್ಷ್ಮೀಪುರಂ ನಿವಾಸಿ ಗೋಪಿ(45) ಎಂಬುವರು ಅನಾರೋಗ್ಯದಿಂದ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ. ದಿವಂಗತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಭಾನುವಾರ ಬೆಳಗ್ಗೆ 11 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಬ್ಬರು ಮೂರ್ಖರು ಸೇರಿ ಓರ್ವ ಸಮರ್ಥ ಅಭ್ಯರ್ಥಿಯನ್ನು ಸೋಲಿಸುವುದೇ ಪ್ರಜಾಪ್ರಭುತ್ವ ಮಾತು ನನಗೂ ಅನ್ವಯಿಸುತ್ತದೆ

ತಮ್ಮ ಸೋಲನ್ನು ವ್ಯಾಖ್ಯಾನಿಸಿದ ದಕ್ಷಿಣ ಶಿಕ್ಷಕರ ಕ್ಷೇತ್ರದ ಪರಾಜಿತ ಅಭ್ಯರ್ಥಿ ಮರಿತಿಬ್ಬೇಗೌಡ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮರಿತಿಬ್ಬೇಗೌಡ ಮಾತನಾಡಿದರು.

ಮೈಸೂರು, ಜೂ.8(ಜಿಎ)–ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಇಬ್ಬರು ಮೂರ್ಖರು ಸೇರಿ ಓರ್ವ ಸಮರ್ಥ ಅಭ್ಯರ್ಥಿಯನ್ನು ಸೋಲಿಸುವುದೇ ಪ್ರಜಾಪ್ರಭುತ್ವ ಎಂಬ ಮಾತು ನನಗೂ ಅನ್ವಯವಾಗುತ್ತದೆ ಎಂದು ವಿಧಾನಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರದ ಪರಾಜಿತ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ನನಗೆ ಸೋಲಾಗಿದೆ. ಆದರೆ, ಈ ರೀತಿಯ ಫಲಿತಾಂಶವನ್ನು ನಾನು ನಿರೀಕ್ಷೆ ಮಾಡಿರಲಿಲ್ಲ. ಚುನಾವಣೆ ಸೋಲಿನ ನೈತಿಕ ಹೊಣೆಯನ್ನು ನಾನೇ ಹೊರುತ್ತೇನೆ. ಚುನಾವಣೆಯಲ್ಲಾದ ಸೋಲಿಗೆ ನಮ್ಮ ನಾಯಕರ ಬಳಿ ಕ್ಷಮೆಯಾಚಿಸುತ್ತೇನೆ ಎಂದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ನನ್ನನ್ನ ಅಭ್ಯರ್ಥಿಯಾಗಿ ಆಯ್ಕೆ ಮಾಡಿದ್ದರು. ನಿರಂತರವಾಗಿ ಶಿಕ್ಷಕರ ಸಮಸ್ಯೆಗಳ ಬಗ್ಗೆ ಹೋರಾಟ ಮಾಡಿದ್ದೇನೆ. ಪ್ರಸ್ತುತ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದು, ಸಮಸ್ಯೆಗಳನ್ನು ಬಗೆಹರಿಸಲು ಸಹಕಾರಿಯಾಗುತ್ತಿತ್ತು. ಆದರೆ ನನ್ನೆಲ್ಲಾ ಶಿಕ್ಷಕರು ಯಾವುದೋ ಕಾರಣಕ್ಕಾಗಿ ಅನಿರೀಕ್ಷಿತ ಸೋಲನ್ನು ನೀಡಿದ್ದಾರೆ. ಈ ಸೋಲಿನಿಂದ ನಾನು ಧೃತಿಗೆಡುವುದಿಲ್ಲ ಎಂದು ಅವರು ಹೇಳಿದರು.

ಈ ಸೋಲು ಶಿಕ್ಷಕರ ಸೋಲು. ಶಿಕ್ಷಕರು ಕಳಂಕಿತ ಮತದಾರರು ಎಂದು ಸಾಮಾಜಿಕ ಜಾಲತಾಣದಲ್ಲಿ ಮಾತನಾಡುತ್ತಿದ್ದಾರೆ ಎಂದು ಬೇಸರಿಸಿ, ಸೋತಿದ್ದೇನೆ ಎಂದು ಮನೆಯಲ್ಲಿ ಕೂರಲ್ಲ. ಮುಂದಿನ ದಿನಗಳಲ್ಲಿಯು ಶಿಕ್ಷಕರ ಪರವಾಗಿ ಕೆಲಸ ಮಾಡುತ್ತೇನೆ. ಮುಂಬರುವ ಎಲ್ಲಾ ಚುನಾವಣೆಗಳಲ್ಲೂ ಕಾಂಗ್ರೆಸ್ ಪಕ್ಷ ಸಂಘಟನೆಗೆ ಮುಂದಾಗುತ್ತೇನೆ ಎಂದು ತಿಳಿಸಿದರು.

ಮರಿತಿಬ್ಬೇಗೌಡ ಅವಕಾಶವಾದಿ ರಾಜಕಾರಣಿ ಎಂಬ ಜೆಡಿಎಸ್ ನಾಯಕರ ಆರೋಪಕ್ಕೆ ಪ್ರತಿಕ್ರಿಯಿಸಿ, ಪಕ್ಷ ಉಳಿಸಿಕೊಳ್ಳಲಿಕ್ಕೆ ಜೆಡಿಎಸ್‌ನವರು ಮುಂದಾಗಿದ್ದಾರೆ. ತಮ್ಮ ಉಳಿವಿಗೋಸ್ಕರ ಪಕ್ಷವನ್ನು ಬಿಜೆಪಿಯವರ ಬಳಿ ಅಡವಿಟ್ಟಿದ್ದಾರೆ. ನಾನು ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಪಕ್ಷ ಸೇರ್ಪಡೆಯಾಗಿಲ್ಲ. ಪದವೀಧರ ಕ್ಷೇತ್ರದ ಚುನಾವಣೆ ವೇಳೆಯೇ ಜೆಡಿಎಸ್‌ನಿಂದ ಅಂತರ ಕಾಯ್ದುಕೊಂಡಿದ್ದೆ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುತ್ತೆ ಅಂತ ನಿರೀಕ್ಷೆ ಸಹ ಮಾಡಿರಲಿಲ್ಲ. ಕಾಂಗ್ರೆಸ್ ಪಕ್ಷ ಸೇರುವಾಗಲು ನಾನು ಯಾವುದೇ ಷರತ್ತು ಹಾಕಿಲ್ಲ. ಪಕ್ಷ ಏನೇ ಜವಾಬ್ದಾರಿ ನೀಡಿದರೂ ಮಾಡುತ್ತೇನೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಗ್ರಾಮಾಂತರ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಕಾಂಗ್ರೆಸ್ ಮುಖಂಡರಾದ ಹೆಚ್.ಎ.ವೆಂಕಟೇಶ್, ಕೆ.ವಿ.ಮಲ್ಲೇಶ್ ಉಪಸ್ಥಿತರಿದ್ದರು.

ಜೂ.12 ರವರೆಗೆ ರಾಜ್ಯದಲ್ಲಿ ಭಾರೀ ಮಳೆ

ಬೆಂಗಳೂರು: ದಿನದಿಂದ ದಿನಕ್ಕೆ ರಾಜ್ಯಾದ್ಯಂತ ಮುಂಗಾರು ಚುರುಕು ಪಡೆಯುತ್ತಿದ್ದು, ಇಂದಿನಿಂದ ಜೂನ್ 12ರ ವರೆಗೆ ರಾಜ್ಯದಲ್ಲಿ ಭಾರೀ ಮಳೆಯ ಎಚ್ಚರಿಕೆಯನ್ನು ಹವಾಮಾನ ಇಲಾಖೆ ನೀಡಿದೆ.

ಕಳೆದೊಂದು ವಾರದಿಂದ ರಾಜ್ಯದ ಎಲ್ಲಾ ಭಾಗದಲ್ಲೂ ಅಬ್ಬರದ ಮಳೆಯಾಗುತ್ತಿದೆ. ಇದೀಗ ಇಲಾಖೆ ನೀಡಿರುವ ಎಚ್ಚರಿಕೆಯ ಹಿನ್ನೆಲೆಯಲ್ಲಿ ರಾಜ್ಯದ ಕೆಲವು ಜಿಲ್ಲೆಗಳಿಗೆ ಅಲರ್ಟ್‌ಗಳನ್ನು ಘೋಷಣೆ ಮಾಡಲಾಗಿದೆ. ರಾಜ್ಯದ 7 ಜಿಲ್ಲೆಗಳಿಗೆ ಹವಾಮಾನ ಇಲಾಖೆ ಇಂದು ಆರೆಂಜ್ ಅಲರ್ಟ್ ಘೋಷಿಸಿದೆ. ಒಟ್ಟು 12 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ನೀಡಿ ಎಚ್ಚರಿಕೆ ವಹಿಸಲು ಸೂಚನೆ ನೀಡಲಾಗಿದೆ.

ಇಂದು ಎಲ್ಲೆಲ್ಲಿ ಆರೆಂಜ್, ಯೆಲ್ಲೋ ಅಲರ್ಟ್?

ಆರೆಂಜ್ ಅಲರ್ಟ್: ಉಡುಪಿ, ಉತ್ತರ ಕನ್ನಡ, ಬಾಗಲಕೋಟೆ, ಬೆಳಗಾವಿ, ಧಾರವಾಡ, ಹಾವೇರಿ, ವಿಜಯಪುರ ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಣೆ ಮಾಡಲಾಗಿದೆ. ಉಡುಪಿ, ಉತ್ತರಕನ್ನಡ ಜಿಲ್ಲೆಗಳಿಗೆ ಭಾರೀ ಮಳೆಯ ಮುನ್ಸೂಚನೆಯನ್ನು ಹವಾಮಾನ ಇಲಾಖೆ ಕೊಟ್ಟಿದೆ. ಮುಂದಿನ 3 ಗಂಟೆಗಳ ಕಾಲ 30–40 ಕಿಮೀ ವೇಗದಲ್ಲಿ ಗಾಳಿ, ಮಳೆಯಾಗುವ ಸಾಧ್ಯತೆಗಳಿವೆ.

ಯೆಲ್ಲೋ ಅಲರ್ಟ್: ದಕ್ಷಿಣ ಕನ್ನಡ, ಗದಗ, ಕಲಬುರಗಿ, ರಾಯಚೂರು, ಯಾದಗಿರಿ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಶಿವಮೊಗ್ಗ, ತುಮಕೂರು ಜಿಲ್ಲೆಗಳಲ್ಲಿ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಮೈಸೂರು ಜಿಲ್ಲಾ ಅಮರಶಿಲ್ಪಿ ವೇದಿಕೆಗೆ ಕೆಂಪರಾಜು ಅಧ್ಯಕ್ಷ



ಮೈಸೂರು, ಜೂ. 8– ಮೈಸೂರು ಜಿಲ್ಲಾ ಅಮರಶಿಲ್ಪಿ ವೇದಿಕೆಯ ನೂತನ ಅಧ್ಯಕ್ಷರಾಗಿ ಯರಗನಹಳ್ಳಿ ನಿವಾಸಿಯಾದ ಕೆಂಪರಾಜು ವಿಶ್ವಕರ್ಮ ಅವರನ್ನು ವೇದಿಕೆಯ ಪದಾಧಿಕಾರಿಗಳು ಆಯ್ಕೆ ಮಾಡಲಾಗಿದೆ. ವೇದಿಕೆ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿ ಶಾಂತಮ್ಮ, ಈಶ್ವರಾಚಾರ್, ಎಂ ಮಂಜು ಅವರನ್ನು ನೇಮಕ ಮಾಡಲಾಗಿದೆ ಎಂದು ಮೈಸೂರು ಜಿಲ್ಲಾ ಅಮರಶಿಲ್ಪಿ ವೇದಿಕೆ ಗೌರವಾಧ್ಯಕ್ಷ ಪುಟ್ಟಸ್ವಾಮಾಚಾರ್ ತಿಳಿಸಿದ್ದಾರೆ.

ಶಿಕ್ಷಣ ಇಲಾಖೆಯಿಂದಲೇ ಪ್ರತಿಭಾವಂತ ವಿದ್ಯಾರ್ಥಿನಿಗೆ ಅನ್ಯಾಯ

■ ಮೌಲ್ಯಮಾಪನದಲ್ಲಿ ಲೋಪ ■ ಅದನ್ನು ಸರಿಪಡಿಸಿಕೊಂಡು ಬಂದರೆ ಪ್ರವೇಶವೇ ಇಲ್ಲ ■ ವಿದ್ಯಾರ್ಥಿನಿಯ ಪೋಷಕರ ಅಳಲು

ಮೈಸೂರು, ಜೂ.8(ಜಿಎ)– ಮೌಲ್ಯಮಾಪಕರ ಯಡವಟ್ಟಿನಿಂದ ವಿದ್ಯಾರ್ಥಿನಿಯೊಬ್ಬರ ಪಿಯುಸಿ ವಿದ್ಯಾಭ್ಯಾಸಕ್ಕೆ ಆತಂಕ ಎದುರಾಗಿದ್ದು, ಈ ಬಗ್ಗೆ ಆಕೆಯ ತಾಯಿ ಅಳಲು ತೋಡಿಕೊಂಡಿದ್ದಾರೆ.


ಕಳೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮರು ಮೌಲ್ಯಮಾಪನದ ನಂತರ ಹೆಚ್ಚು ಅಂಕ ಗಳಿಸಿದರೂ ಕಾಲೇಜಿನಲ್ಲಿ ಸೀಟು ಸಿಗದೆ ಪರದಾಡುತ್ತಿರುವ ಬನ್ನೂರು ಹೋಬಳಿ, ಕೊಡಗಳ್ಳಿ ಗ್ರಾಮದ ಕೆ.ಎಸ್. ಶ್ರಾವ್ಯ ಅವರ ತಾಯಿ ಸುಮಾ ಚಂದ್ರಶೇಖರ್, ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ವಿವರಣೆ ನೀಡಿದರು.

ಫಲಿತಾಂಶದಲ್ಲಿ ತಮ್ಮ ಪುತ್ರಿ ಶ್ರಾವ್ಯಗೆ 545(ಶೇ.87) ಅಂಕ ಬಂದಿತ್ತು. ಪರೀಕ್ಷೆಯಲ್ಲಿ ಉತ್ತಮವಾಗಿ ಬರೆದಿದ್ದರೂ ಕಡಿಮೆ ಅಂಕ ಬಂದಿದ್ದರಿಂದ ಬೇಸರವಾಗಿತ್ತು. ಆ ವೇಳೆ ಅರಕೆರೆ ಜೀವೋದಯ ಶಾಲೆ ಪ್ರಾಚಾರ್ಯರು ಧೈರ್ಯ ತುಂಬಿದರು. ಚೆನ್ನಾಗಿ ಬರೆದಿದ್ದರೂ ಕಡಿಮೆ ಅಂಕ ಬಂದಿದೆ ಎಂದು ಆತಂಕಕ್ಕೆ ಒಳಗಾಗುವುದು ಬೇಡ, ಧೈರ್ಯದಿಂದ ಮರು ಮೌಲ್ಯಮಾಪನಕ್ಕೆ ಹಾಕಿ ಎಂದು ಸಲಹೆ ನೀಡಿದ್ದರಿಂದ ನಾವು ಹಾಗೆಯೇ ಮಾಡಿದೆವು. ಮರು ಮೌಲ್ಯಮಾಪನದಲ್ಲಿ ನಿರೀಕ್ಷೆಯಂತೆ 606(ಶೇ.97) ಅಂಕಗಳು ಬಂದವು. ಶೇ.10ರಷ್ಟು ಫಲಿತಾಂಶ ಹೆಚ್ಚಾಯಿತು. ಗಣಿತದಲ್ಲಿ 53ರಿಂದ 94 ಹಾಗೂ ವಿಜ್ಞಾನದಲ್ಲಿ 75ರಿಂದ 95ಕ್ಕೆ ಅಂಕ ಹೆಚ್ಚಿತು ಎಂದು ತಿಳಿಸಿದರು.

ಕಡಿಮೆ ಅಂಕ ಬಂದಿದ್ದರಿಂದ ಮರು ಮೌಲ್ಯಮಾಪನದ ಬಳಿಕ ಪಿಯುಸಿ ಪ್ರವೇಶಾತಿಗೆ ಅರ್ಜಿ ಹಾಕೋಣವೆಂದು ಸುಮ್ಮನಿದ್ದೆವು. ಆದರೆ ಮರು ಮೌಲ್ಯಮಾಪನದ ಫಲಿತಾಂಶ ಬರುವಷ್ಟರಲ್ಲಿ ಪಿಯುಸಿ ದಾಖಲಾತಿ ಅವಧಿ ಮುಗಿದಿದೆ ಎಂದು ಯಾವ ಕಾಲೇಜಿನಲ್ಲೂ ಸೀಟು ನೀಡುತ್ತಿಲ್ಲ. ನನ್ನ ಮಗಳಿಗಾದ ಅನ್ಯಾಯಕ್ಕೆ ಯಾರು ಹೊಣೆ. ಮೌಲ್ಯಮಾಪಕರ ಯಡವಟ್ಟು, ಶಾಲಾ ಶಿಕ್ಷಣ ಇಲಾಖೆ ನಿರ್ಲಕ್ಷ್ಯದಿಂದ ಮಕ್ಕಳ ಭವಿಷ್ಯಕ್ಕೆ ತೊಂದರೆಯಾಗಿದೆ. ಕಡಿಮೆ ಅಂಕ ಬಂದಾಗ ಹಾಗೂ ಪಿಯುಸಿ ಸೀಟಿಗೆ ಹೆಣಗಾಡುತ್ತಿರುವ ನಮ್ಮ ಯಾತನೆ ಯಾರಿಗೂ ಬೇಡ. ನನ್ನ ಮಗಳಂತೆ ಅದೆಷ್ಟೋ ವಿದ್ಯಾರ್ಥಿಗಳು ನೋವಿನಲ್ಲಿದ್ದಾರೆ. ಶಿಕ್ಷಣ ಇಲಾಖೆ ನಮಗೆ ನ್ಯಾಯ ಒದಗಿಸಬೇಕು ಎಂದು ಸುಮಾ ಅವರು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ವಿದ್ಯಾರ್ಥಿನಿ ಶ್ರಾವ್ಯ, ಈಕೆಯ ತಂದೆ ಕೆ.ಎನ್.ಶ್ರೀನಿವಾಸ್, ದೊಡ್ಡಪ್ಪ ರಾಜೇಂದ್ರ ಪ್ರಸಾದ್ ಹೊನ್ನಲಗೆರೆ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

9.06.2024 ಭಾನುವಾರ, ಮಳೆ ನಕ್ಷತ್ರ: ಮೃಗಶಿರ, 08.06.2024 ರಿಂದ 21.06.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ಪುನರ್ವಸು, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಹೈಪೋಥೈರಾಯ್ಡಿಸಮ್ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ.

■ **ಯದುವೀರ್ ಒಡೆಯರ್ ಸೇನೆ ಹಾಗೂ ನರೇಂದ್ರ ಮೋದಿ ಅಭಿಮಾನಿಗಳ ಬಳಗ :** ನರೇಂದ್ರ ಮೋದಿ 3ನೇ ಬಾರಿಗೆ ಪ್ರಧಾನಿ ಪಟ್ಟಕ್ಕೆ ಏರುತ್ತಿರುವ ಹಿನ್ನೆಲೆಯಲ್ಲಿ ವಿಶೇಷ ಪೂಜೆ, ಸಿಹಿ ವಿತರಣೆ, ಮುಖ್ಯ ಅತಿಥಿಗಳು: ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಮಾಜಿ ಮೇಯರ್ ಶಿವಕುಮಾರ್, ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್ ಕುಮಾರ್‌ಗೌಡ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಪಾಲಿಕೆ ಮಾಜಿ ಸದಸ್ಯರಾದ ಸೌಮ್ಯ ಉಮೇಶ್, ಮಾ.ವಿ.ರಾಮಪ್ರಸಾದ್, ಎಂ.ಡಿ. ಪಾರ್ಥಸಾರಥಿ, ಸ್ಥಳ: 101 ಗಣಪತಿ ದೇವಸ್ಥಾನ, ಬೆಳಗ್ಗೆ 9 ಗಂಟೆಗೆ.

■ **ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್:** ಮಹಾದ್ವಾರ ಉದ್ಘಾಟನೆ ಮತ್ತು ಕುಂಭಾಭಿಷೇಕ, ಬೆಳಗ್ಗೆ 6.30 ರಿಂದ ಗಣಪತಿ ಪೂಜೆ, ಕರ್ಮಣ ಪುಣ್ಯಾಹ, ಕಳಶ ಸ್ಥಾಪನೆ, ಕುಂಭಾಭಿಷೇಕ, ಅಭಿಷೇಕ, ಅಲಂಕಾರ, ದೇವತಾ ಕಾರ್ಯಗಳು, ಮಹಾಮಂಗಳಾರತಿ ಮತ್ತು ತೀರ್ಥಪ್ರಸಾದ, ಸ್ಥಳ: ಟ್ರಸ್ಟ್ ಆವರಣ, ಬಿ.ಎಂ.ಶ್ರೀನಗರ.

■ **ಮೈ ರಿಯಾಲ್ಟಿ 2024 :** ಮೈಸೂರಿನ ಅತೀ ದೊಡ್ಡ ಪ್ರಾಪರ್ಟಿ ಎಕ್ಸ್‌ಪೋ, ಸ್ಥಳ: ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ, ಬೆಳಗ್ಗೆ 10 ರಿಂದ.

■ **ಶ್ರೀರಾಮ ಪಟ್ಟಾಭಿಷೇಕ ಸೇವಾ ಸಮಿತಿ:** ಶ್ರೀರಾಮ ಪಟ್ಟಾಭಿಷೇಕ ಮತ್ತು ಸೀತಾ ಕಲ್ಯಾಣ ಮಹೋತ್ಸವ, ಬೆಳಗ್ಗೆ 7ಕ್ಕೆ ಗಣಪತಿ ಪೂಜೆ, ಪಂಚಾಮೃತ ಅಭಿಷೇಕ, ರುದ್ರಾಭಿಷೇಕ, ಅರ್ಚನೆ, ಬೆಳಗ್ಗೆ 9ಕ್ಕೆ ಕಾಶಿಯಾತ್ರೆ–ಗೌರಿಪೂಜೆ, ಮಧ್ಯಾಹ್ನ 12.30ಕ್ಕೆ ಶ್ರೀರಾಮ ಪಟ್ಟಾಭಿಷೇಕ ಅಷ್ಟಾವದಾನ ಸೇವೆ, ಮಹಾಮಂಗಳಾರತಿ, ಉಯ್ಯಾಲೆ ಸೇವೆ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಶ್ರೀ ಚಿದಾನಂದ ಸ್ವಾಮಿಗಳು, ಶ್ರೀ ಯೋಗನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕ ಡಾ. ಭಾಷ್ಯಂ ಸ್ವಾಮೀಜಿ, ಸ್ಥಳ: ನಟರಾಜ ಕಲ್ಯಾಣ ಮಂಟಪ.

■ **ಸಾಹಿತ್ಯ ಲೋಕ :** ಬೆಳಗ್ಗೆ 11.30ಕ್ಕೆ ವಾಗ್ಮಿ, ಲೇಖಕ, ನಿರೂಪಕ ಎಡೆಯೂರು ಸಮೀಉಲ್ಲಾ ಅವರ ನೆನಪಿನ ಚಿತ್ತಾರಗಳು ಹಾಗೂ ನೆನಪಿನ ಮಳೆಬಿಲ್ಲು ಕೃತಿಗಳ ಲೋಕಾರ್ಪಣೆ ಸಮಾರಂಭ, ಕೃತಿ ಬಿಡುಗಡೆ: ನಾದಬ್ರಹ್ಮ ಡಾ.ಹಂಸಲೇಖ, ಉಪಸ್ಥಿತರು: ಅಂಕಣಕಾರ ಡಾ.ಗುಬ್ಬಿಗೂಡು ರಮೇಶ್, ಅಧ್ಯಕ್ಷತೆ: ಸಾಹಿತ್ಯ ಲೋಕ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಬೆಳಗ್ಗೆ 10 ಗಂಟೆಯಿಂದ ಗಾನಗಾರುಡಿಗ ಸಿ. ಅಶ್ವಥ್ ನೆನಪಿನಲ್ಲಿ ಭಾವಗೀತೆಗಳ ಗಾನಯಾನ ಕಾರ್ಯಕ್ರಮ, ಗಾಯಕರು: ರಾಜೇಶ್ ಪಡಿಯಾರ್, ರಶ್ಮಿ, ಇಂದ್ರಾಣಿ, ವಿದ್ವಾನ್ ಗಣೇಶ್ ಭಟ್–ಕೀಬೋರ್ಡ್, ರಘುನಾಥ್–ತಬಲ, ಆಂಡ್ರೋಸ್ –ರಿದಂ ಪ್ಯಾಡ್, ವಿಲ್ಸನ್–ಗಿಟಾರ್, ವಿಶ್ವನಾಥ್–ಮ್ಯಾಂಡೋಲಿನ್, ಕಿರಣ್–ಡೋಲಕ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ.

■ **ಅಖಿಲ ಭಾರತೀಯ ಸಾಹಿತ್ಯ ಪರಿಷತ್, ಜಿಲ್ಲಾ ಸಮಿತಿ:** ವ್ಯಾಸ ಜಯಂತಿ, ಮುಖ್ಯ ಭಾಷಣಕಾರರು : ನಿವೃತ್ತ ಆರೋಗ್ಯಾಧಿಕಾರಿ ಜಿ.ಕೆ. ಕುಲಕರ್ಣಿ ಅವರಿಂದ ಬೇಂದ್ರೆ–ಬದುಕು–ಬರಹ ಕುರಿತು ಉಪನ್ಯಾಸ, ಸಂಸ್ಕೃತ ಅಧ್ಯಾಪಕ ವಿದ್ವಾನ್ ನಾರಾಯಣ ದೇಸಾಯಿ ಅವರಿಂದ ಮಹರ್ಷಿ ವೇದವ್ಯಾಸ ಕುರಿತು ಉಪನ್ಯಾಸ, ಯೋಗೇಶ್ ತೀರ್ಥಪುರ ಅವರ 'ಕನ್ನಡದ ಕಲ್ಪವೃಕ್ಷ–ತಿ.ನಂ. ಶ್ರೀಕಂಠಯ್ಯ' ಪುಸ್ತಕ ಲೋಕಾರ್ಪಣೆ, ಪ್ರಾಸ್ತಾವಿಕ ನುಡಿ : ವಲಯ ಪ್ರಮುಖ ಡಾ.ವಿ.ರಂಗನಾಥ್, ಮುಖ್ಯ ಅತಿಥಿಗಳು: ಡಾ.ರಾಘವೇಂದ್ರ ಶೆಟ್ಟಿ, ಸ್ಥಳ: ಬಿ.ಎಸ್.ಎಸ್. ವಿದ್ಯೋದಯ ಶಾಲಾ ಸಭಾಂಗಣ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.

■ **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್ :** ಅರಳು ಪ್ರತಿಭೆ, ಪ್ರತಿಭಾಂಕುರ, ಸಂಗೀತ ಮಾಲಿಕೆ 11ನೇ ಕಾರ್ಯಕ್ರಮ, ಪಂಚಲಿಂಗದರ್ಶನ–ಒಂದು ಪ್ರದಕ್ಷಿಣೆ, ಮುತ್ತುಸ್ವಾಮಿ ದೀಕ್ಷಿತರ ಪಂಚಲಿಂಗ ಕೃತಿಗಳನ್ನು ಕುರಿತ ಪ್ರಾತ್ಯಕ್ಷಿಕೆ, ನಿರ್ದೇಶನ : ವಿದುಷಿ ಡಾ. ಸುಕನ್ಯಾ ಪ್ರಭಾಕರ್, ವಿದುಷಿ ಆರ್. ನಿತ್ಯಶ್ರೀ ಮತ್ತು ವಿದುಷಿ ಅಕ್ಷತಾ ಭಟ್ ಅವರಿಂದ ಗಾಯನ, ವಿದ್ವಾನ್ ಪಿ.ಎಸ್. ಶ್ರೀಧರ್–ಮೃದಂಗ, ಸ್ಥಳ: ರಾಸವೃಂದ, ಚಾಮರಾಜಪುರಂ, ಬೆಳಗ್ಗೆ 10.30ಕ್ಕೆ.

■ **ಲಯನ್ಸ್ ಕ್ಲಬ್ ಆಫ್ ಮೈಸೂರು ಮಿಲೇನಿಯಂ, ಕನ್ನಡ ನುಡಿಮುತ್ತು ಸಾಹಿತ್ಯ ವೇದಿಕೆ, ನಿಸರ್ಗ ಸಂಗೀತ ವಿದ್ಯಾಲಯ ಸಂಘ, ಸಂಜನಾ ಬಳಗ ಪ್ರತಿಷ್ಠಾನ:** ಮುತ್ತು ಯ ವಡ್ಡರ ಕೃತಿ ಎಲೆಮರೆ ಕಾಯಿಗಳು ಮತ್ತು ಡಾ.ನ.ಗಂಗಾಧರಪ್ಪ ನಾರಣಾಪುರ ಅವರ ಎರೆನಾಡ ಅಂಕುರ ಕೃತಿಗಳ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ: ಶ್ರೀ ಹೊಸ ಮಠದ ಶ್ರೀ ಚಿದಾನಂದ ಸ್ವಾಮೀಜಿ, ಅಧ್ಯಕ್ಷತೆ : ಲಯನ್ಸ್ ಕ್ಲಬ್ ಮಿಲೇನಿಯಂ ಅಧ್ಯಕ್ಷ ಲಯನ್ ಎ.ಸಿ.ರವಿ, ಉದ್ಘಾಟನೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕೃತಿಗಳ ಪರಿಚಯ: ಕು. ಜ್ಯೋತಿ ಆನಂದ್ ಚಂದುಕರ, ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಅತಿಥಿಗಳು: ಆರಕ್ಷಕ ನಿರೀಕ್ಷಕಿ ಎಂ.ಗೀತಾ, ಈರಮಂಡ ಹರಿಣಿ ವಿಜಯ್, ಎಂ.ಕೆ.ಜಯಕುಮಾರ್, ಡಾ.ಟಿ.ತ್ಯಾಗರಾಜು, ಜಗದೀಶ್ ಎಸ್.ಕಾಬನೆ, ಉಪಸ್ಥಿತರು : ಡಾ.ನ.ಗಂಗಾಧರಪ್ಪ, ಮುತ್ತು ಯ.ವಡ್ಡರ, ಸ್ಥಳ: ಸೆಮಿನಾರ್ ಹಾಲ್, ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳು, ಬೆಳಗ್ಗೆ 10.30ಕ್ಕೆ.

■ **ಪ್ರಗತಿಪರ ಸಂಘಟನೆಗಳ ಒಕ್ಕೂಟ :** ಸಂವಿಧಾನ ಪ್ರಸ್ತಾವನೆ ಓದು–ಎನ್‌ಡಿಎ ಸರ್ಕಾರಕ್ಕೆ ಎಚ್ಚರ ಕಾರ್ಯಕ್ರಮ, ಸ್ಥಳ: ಗಾಂಧಿ ಚೌಕ, ಬೆಳಗ್ಗೆ 11ಕ್ಕೆ.

■ **ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮೂಲ ಮಹಾ ಸಂಸ್ಥಾನ ಶ್ರೀ ರಾಜೇಂದ್ರ ತೀರ್ಥಿಯ ಪೂರ್ವಾದಿ ಮಠ, ಮುನಿತ್ರಯ ಪೀಠ, ಶ್ರೀವ್ಯಾಸರಾಜ ಮಠ (ಸೋಸಲೆ) ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಶ್ರೀ ಮದ್ಬ್ರಹ್ಮ ಸೂತ್ರ–ಶ್ರೀಮದುನ ವ್ಯಾಖ್ಯಾನ–ಸಹಿತ ಶ್ರೀ ಮನ್ನ್ಯಾಯ ಸುಧಾ ಮಂಗಳ ಮಹೋತ್ಸವ ಶ್ರೀ ಮನ್ನ್ಯಾಯ ಸುಧಾ ಪರೀಕ್ಷೆ ಹಾಗೂ ಶ್ರೀ ಶ್ರೀ 1008 ಶ್ರೀ ವಿದ್ಯಾಶ್ರೀಶ ತೀರ್ಥ ಶ್ರೀಪಾದರ ಸಹಸ್ರಚಂದ್ರ ದರ್ಶನ ಶಾಂತಿ ಮಹೋತ್ಸವ, ಬೆಳಗ್ಗೆ 6 ಗಂಟೆಗೆ ಪೀಠಾಧಿಪತಿಗಳಿಂದ ಸಂಸ್ಥಾನ ಪೂಜೆ, 9.30ಕ್ಕೆ ಯಜ್ಞವರಾಹ ಮಂಟಪದಲ್ಲಿ 72 ಪ್ರತ್ಯೇಕ ಕೊಂಡಗಳಲ್ಲಿ ತಂತ್ರಸಾರೋಕ್ತ ಮಂತ್ರಗಳಿಂದ ಹೋಮ, ಸಹಸ್ರ ಚಂದ್ರ ದರ್ಶನ ಶಾಂತಿ ಹೋಮದ ಪೂರ್ಣಾಹುತಿ, ಮಹಾಮಂಗಳಾರತಿ, ಬೆಳಗ್ಗೆ 10ಕ್ಕೆ ವ್ಯಾಸ ಮಂಟಪದಲ್ಲಿ ವೀಣಾವಾದನ, ವಿದ್ವಾನ್ ಕೊರ್ಲಹಳ್ಳಿ ಶ್ರೀನಿವಾಸಾಚಾರ್ಯ, ಶ್ರೀಹರಿ, ಡಿ.ಸರ್ವಜ್ಞ, ಬೆಳಗ್ಗೆ 10.30ಕ್ಕೆ ಶ್ರೀಪಾದಂಗಳವರಿಗೆ ಉಪಸ್ಥಿತ ಪೀಠಾಧಿಪತಿಗಳಿಂದ ಅಮೃತಾಭಿಷೇಕ, ಸುವರ್ಣಾಭಿಷೇಕ, ಬೆಳಗ್ಗೆ 11.30ಕ್ಕೆ ಗುರುವಂದನ, ವಿದ್ವತ್ಸನ್ಮಾನ, ಮಧ್ಯಾಹ್ನ 12.30ಕ್ಕೆ ತೀರ್ಥಪ್ರಸಾದ, ಸಂಜೆ 5ಕ್ಕೆ ನಾದಸ್ವರ ವಾದ್ಯಗಳು, ವೇದಘೋಷ, ಭಜನೆ ಇದರೊಂದಿಗೆ ಶ್ರೀ ಮದ್ವ್ಯಾಸರಾಜ ಮಠಾಧೀಶರಾದ ಶ್ರೀ ವಿದ್ಯಾಶ್ರೀಶ ತೀರ್ಥ ಶ್ರೀಪಾದಂಗಳವರಿಗೆ ಭವ್ಯ ಸ್ವಾಗತ ಹಾಗೂ ಶ್ರೀ ಮಠದ ಸಂಪ್ರದಾಯದಂತೆ ದರ್ಬಾರ್, ಹರಿಗುರ್ವರ್ಪಿತವಾದ ಮುತ್ತು ರತ್ನ ಹಾಗೂ ಸುವರ್ಣಾಭಿಷೇಕ, ಗಣ್ಯರಿಗೆ ಸನ್ಮಾನ, ವಿದ್ವಾಂಸರಿಂದ ಪ್ರವಚನ, ಶ್ರೀಪಾದಂಗಳವರಿಂದ ಅನುಗ್ರಹ ಸಂದೇಶ, ಸಂಜೆ 7ಕ್ಕೆ ಭಕ್ತಾದಿಗಳಿಗೆ ಶ್ರೀಪಾದಂಗಳವರಿಂದ ಪ್ರಸಾದ ರೂಪವಾಗಿ ಮುತ್ತು ರತ್ನ ಹಾಗೂ ಫಲಮಂತ್ರಾಕ್ಷತೆ, ಮುಖ್ಯ ಅತಿಥಿಗಳು: ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಕೃಷ್ಣದೇವರಾಯರು, ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್. ಶ್ರೀವತ್ಸ, ಹರೀಶ್‌ಗೌಡ, ಯತೀಂದ್ರ ಸಿದ್ದರಾಮಯ್ಯ, ಡಿ.ಟಿ.ಪ್ರಕಾಶ್, ಅಸಗೋಡು ಜಯಸಿಂಹ, ಶ್ರೀ ರಾಜೇಂದ್ರ ತೀರ್ಥಾನುಗ್ರಹ ಪ್ರಶಸ್ತಿ: ಯುವ ಉದ್ಯಮಿ ಅರ್ಜುನ್ ರಂಗ, ಶ್ರೀನಿವಾಸ ರಾಘವನ್, ಧನ್ವಂತರಿ ಅನುಗ್ರಹ ಪ್ರಶಸ್ತಿ: ಡಾ.ಸಂಜೀವ್‌ರಾವ್ ಗಿರಿಮಾಜಿ, ಡಾ.ಪೂರ್ಣಿಮಾ, ಸ್ಥಳ: ವಿಟ್ಠಲಧಾಮ, ಜೆ.ಪಿ.ನಗರ.

■ **ಶ್ರೀರಾಮಕೃಷ್ಣ ಆಶ್ರಮ :** ಸರಗೂರು ರಮೇಶ್ ಅವರಿಂದ ಶ್ರೀ ರಾಮಕೃಷ್ಣರ ಸಂದೇಶ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ರಂಗಾಯಣ :** ರಂಗಾಯಣದ ರೆಪರ್ಟರಿ ಕಲಾವಿದರಿಂದ ಗೋರ್‌ಮಾಟಿ ನಾಟಕ ಪ್ರದರ್ಶನ, ರಂಗರೂಪ : ಶಿರಗಾನಹಳ್ಳಿ ಶಾಂತನಾಯಕ್, ನಿರ್ದೇಶನ : ಸಿ. ಬಸವಲಿಂಗಯ್ಯ, ಸ್ಥಳ: ಭೂಮಿಗೀತ, ರಂಗಾಯಣ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಒಡಹುಟ್ಟಿನ ನುಡಿಗಳು–ಕನ್ನಡದ ಒಡನಾಡಿ ಭಾಷೆಗಳನ್ನು ಕುರಿತ ಬಾನುಲಿ ಸರಣಿ, ಲೇಖನ ಹಾಗೂ ಪ್ರಸ್ತುತಿ– ಡಾ. ತೀತೀರ ರೇಖಾ ವಸಂತ, 6.40 ಪದ ಸಂಸ್ಕೃತಿ, ಪ್ರಸ್ತುತಿ– ಪ್ರೊ. ಲಕ್ಷ್ಮೀನಾರಾಯಣ ಅರೋರಾ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.40 ನಮ್ಮ ಆರೋಗ್ಯ ಕಾರ್ಯಕ್ರಮ: ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಸಂಬಂಧವಾಗಿ ವಿಶೇಷ ಕಾರ್ಯಕ್ರಮ. 'ಮಾನಸಿಕ ಆರೋಗ್ಯ ಮತ್ತು ಪತಂಜಲಿಯ ಯೋಗಸೂತ್ರಗಳು' ಕುರಿತು ಆಯುರ್ವೇದ ವೈದ್ಯರು ಹಾಗೂ ಆರೋಗ್ಯ ಭಾರತೀಯ ರಾಷ್ಟ್ರೀಯ ಕಾರ್ಯದರ್ಶಿ ಡಾ.ಟಿ.ಎನ್.ಮಂಜುನಾಥ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ:ಕಥೆ ಕೇಳು ಪುಟ್ಟ, ಕಥೆ ಹೇಳುತ್ತಾರೆ–ಬಿ.ಜಿ.ಕವಿತಾ, 10.30 ಮಕ್ಕಳ ಮಂಟಪ: ಪ್ರತಿಭಾ ಪಲ್ಲವ – ಬಹುಮುಖ ಪ್ರತಿಭೆ ಬಿ.ಆರ್. ಶ್ರಾವ್ಯಳ ಪರಿಚಯ. ಪ್ರಸ್ತುತಿ: ಎಂ.ಎಸ್.ಭಾರತಿ, 11.00 ಮಿಶ್ರ ಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ: ಚಾಮರಾಜನಗರ ಜಿಲ್ಲೆ, ಯಳಂದೂರು ತಾಲೂಕು, ಹೊನ್ನೂರು, ಗ್ರಾಮದ ಜವರಯ್ಯ ಮತ್ತು ಸಂಗಡಿಗರಿಂದ ತತ್ವ ಪದಗಳು. 1.20 ಭಾವಗೀತೆಗಳು –ಸುಪ್ರಿಯಾ ಆಚಾರ್ಯ, 2.40 ಕನ್ನಡ ಚಲನಚಿತ್ರ ಧ್ವನಿ ವಾಹಿನಿ 'ನವತಾರೆ', 3.45 ಯಕ್ಷಗಾನ: ತಾಳಮದ್ದಲೆ, ಪ್ರಸಂಗ– ಗರುಡ ಗರ್ವಭಂಗ, ಪ್ರಸ್ತುತಿ–ಧೀಶಕ್ತಿ ಮಹಿಳಾ ಯಕ್ಷ ಬಳಗ, ಪುತ್ತೂರು. 4.45 ಚಟ್ ಪಟ್ ಚುರುಮುರಿ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 6.50 ಕೃಷಿರಂಗ: ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಎನ್. ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ, ವಾರದ ಕೃಷಿರಂಗ–ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ–ಆರ್.ಲೋಕೇಶ್ವರಿ, 8.00 'ಹಾದಿಯಲ್ಲಿ ಕಂಡ ಮುಖ' ಬಾನುಲಿ ಸರಣಿ, ಮೈಸೂರಿನ ಏಕಲವ್ಯನಗರದ ಕಂಪನಿ ನಾಟಕ ಕಲಾವಿದ ಮಂಜುನಾಥ್ ಮತ್ತು ಅವರ ಮಡದಿ ಸುಬ್ಬಮ್ಮ ಅವರೊಂದಿಗೆ ಸಂವಾದ. ಪ್ರಸ್ತುತಿ: ಅಬ್ದುಲ್ ರಶೀದ್, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ವಿದ್ವಾನ್. ಡಾ.ಶ್ರೀನಾಥ್–ಕೊಳಲು ವಾದನ

ರಾಮೋಜಿ ಫಿಲ್ಮ್ ಸಿಟಿ ಸಂಸ್ಥಾಪಕ ರಾಮೋಜಿ ರಾವ್ ನಿಧನ



ಹೈದರಾಬಾದ್: ರಾಮೋಜಿ ಫಿಲ್ಮ್ ಸಿಟಿ ಸಂಸ್ಥಾಪಕ, ಮಾಧ್ಯಮ ಲೋಕದ ದಿಗ್ಗಜ, ರಾಮೋಜಿ ಗ್ರೂಪ್ಸ್ ಸಂಸ್ಥಾಪಕ ರಾಮೋಜಿ ರಾವ್ ಶನಿವಾರ ನಿಧನರಾಗಿದ್ದಾರೆ. ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರು ಹೈದರಾಬಾದ್‌ನ ಸ್ಟಾರ್ ಆಸ್ಪತ್ರೆಯಲ್ಲಿ ಬೆಳಗಿನ ಜಾವ 3:45ಕ್ಕೆ ಕೊನೆಯುಸಿರೆಳೆದಿದ್ದಾರೆ. ಅವರಿಗೆ 88 ವರ್ಷ ವಯಸ್ಸಾಗಿತ್ತು.

ಜೂನ್ 5ರಂದು ಹೃದಯ ಸಂಬಂಧಿ ಸಮಸ್ಯೆಯಿಂದ ಉಸಿರಾಟಕ್ಕೆ ತೀವ್ರ ತೊಂದರೆಯಾಗಿತ್ತು. ಹೀಗಾಗಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ವೈದ್ಯಕೀಯ ಪರೀಕ್ಷೆಯ ನಂತರ ಹೃದಯ ಸ್ಟೆಂಟ್ ಅಳವಡಿಸಿ, ಬಳಿಕ ಐಸಿಯುನಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಸದ್ಯ ರಾಮೋಜಿ ರಾವ್ ಅವರ ಪಾರ್ಥಿವ ಶರೀರವನ್ನು ಹೈದರಾಬಾದ್‌ನ ರಾಮೋಜಿ ಫಿಲ್ಮ್ ಸಿಟಿಯಲ್ಲಿ ಇರುವ ಅವರ ನಿವಾಸದಲ್ಲಿರಿಸಿ, ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ ಈ ವೇಳೆ ಕುಟುಂಬಸ್ಥರು, ಸ್ನೇಹಿತರು ಹಾಗೂ ಅಪಾರ ಅಭಿಮಾನಿಗಳು ಅಂತಿಮ ದರ್ಶನ ಪಡೆಯುತ್ತಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಭಾನುವಾರ) ರಾಜ್ಯ ಸರ್ಕಾರದ ಗೌರವದೊಂದಿಗೆ ರಾಮೋಜಿ ಫಿಲ್ಮ್ ಸಿಟಿಯಲ್ಲಿ ನೆರವೇರಲಿದೆ.

ಇವರ ನಿಧನಕ್ಕೆ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ತೀವ್ರ ಸಂತಾಪ ವ್ಯಕ್ತಪಡಿಸಿದ್ದು, ರಾಜ್ಯ ಸರ್ಕಾರದ ಗೌರದೊಂದಿಗೆ ಶ್ರೀಯುತರ ಅಂತ್ಯಕ್ರಿಯೆ ನೆರವೇರಲಿದೆ ಎಂದು ತಿಳಿಸಿದ್ದಾರೆ.

ರಾಮೋಜಿರಾವ್, 2016ರಲ್ಲಿ ಪದ್ಮ ವಿಭೂಷಣ ಪ್ರಶಸ್ತಿ ಪಡೆದಿದ್ದರು. ಜೊತೆಗೆ ನಾಲ್ಕು ಬಾರಿ ಫಿಲಂಫೇರ್, ಐದು ಬಾರಿ ನಂದಿ ಪ್ರಶಸ್ತಿ, ರಾಷ್ಟ್ರೀಯ ಪ್ರಶಸ್ತಿಗಳನ್ನು ತೆಲುಗು ಚಿತ್ರಗಳಿಗಾಗಿ ಪಡೆದಿದ್ದರು. ಸುಮಾರು 50ಕ್ಕೂ ಅಧಿಕ ಚಿತ್ರಗಳು, ಟೆಲಿ ಫಿಲಂಗಳನ್ನು ನಿರ್ಮಾಣ ಮಾಡಿದ್ದರು.

ನವೆಂಬರ್ 16, 1936 ರಂದು ಆಂಧ್ರಪ್ರದೇಶದ ಕೃಷ್ಣಾ ಜಿಲ್ಲೆಯ ಪೆದಪರುಪುಡಿ ಗ್ರಾಮದಲ್ಲಿ ಕೃಷಿಕ ಕುಟುಂಬದಲ್ಲಿ ಜನಿಸಿದ ಅವರು, ವಿಶ್ವದ ಅತಿದೊಡ್ಡ ಥೀಮ್ ಪಾರ್ಕ್ ಮತ್ತು ಫಿಲ್ಮ್ ಸ್ಟುಡಿಯೋ, ರಾಮೋಜಿ ಫಿಲ್ಮ್ ಸಿಟಿಯನ್ನು ಸ್ಥಾಪಿಸಿದರು. ಮಾರ್ಗದರ್ಶಿ ಚಿಟ್ ಫಂಡ್, ಈನಾಡು ಪತ್ರಿಕೆ, ಈಟಿವಿ ನೆಟ್‌ವರ್ಕ್, ರಮಾದೇವಿ ಪಬ್ಲಿಕ್ ಸ್ಕೂಲ್, ಪ್ರಿಯಾ ಫುಡ್ಸ್, ಕಲಾಂಜಲಿ, ಉಷಾಕಿರಣ್ ಮೂವೀಸ್, ಮಯೂರಿ ಫಿಲ್ಮ್ ಡಿಸ್ಟ್ರಿಬ್ಯೂಟರ್ಸ್ ಮತ್ತು ಡಾಲ್ಫಿನ್ ಗ್ರೂಪ್ ಆಫ್ ಹೋಟೆಲ್‌ಗಳು ರಾಮೋಜಿ ರಾವ್ ಒಡೆತನದ ಕಂಪನಿಗಳಾಗಿವೆ.

ಮೋದಿ ಸಂತಾಪ: ಭಾರತದ ಮಾಧ್ಯಮ ಲೋಕದಲ್ಲಿ ದೂರದೃಷ್ಟಿ ಹೊಂದಿದ್ದ ರಾಮೋಜಿರಾವ್ ಅವರ ನಿಧನ ತೀವ್ರ ದುಃಖವನ್ನುಂಟು ಮಾಡಿದೆ. ಅವರ ಶ್ರೀಮಂತ ಕೊಡುಗೆ ಗಳು ಪತ್ರಿಕೋದ್ಯಮ ಮತ್ತು ಚಲನಚಿತ್ರಗಳ ಜಗತ್ತಿನಲ್ಲಿ ಅಳಿಸಲಾಗದ ಛಾಪು ಮೂಡಿಸಿವೆ. ಅವರ ಗಮನಾರ್ಹ ಪ್ರಯತ್ನಗಳ ಮೂಲಕ ಮಾಧ್ಯಮ ಮತ್ತು ಮನರಂಜನಾ ಜಗತ್ತಿನಲ್ಲಿ ನಾವೀನ್ಯತೆ ಮತ್ತು ಶ್ರೇಷ್ಠತೆಯಲ್ಲಿ ಹೊಸ ಮಾನದಂಡಗಳನ್ನು ಸೃಷ್ಟಿಸಿದ್ದರು ಎಂದು ಪ್ರಧಾನಿ ನರೇಂದ್ರ ಮೋದಿ ಸಂತಾಪ ಸೂಚಿಸಿದ್ದಾರೆ. ಇನ್ನೂ ಹಲವು ಗಣ್ಯರು ರಾಮೋಜಿ ರಾವ್ ನಿಧನಕ್ಕೆ ದುಃಖ ವ್ಯಕ್ತಪಡಿಸಿದ್ದಾರೆ.

ಇಂದು ಎಲೆಮರೆ ಕಾಯಿಗಳು; ಎರೆನಾಡ ಅಂಕುರ ಕೃತಿ ಬಿಡುಗಡೆ

ಮೈಸೂರು, ಜೂ.8–ಕನ್ನಡ ನುಡಿ ಮುತ್ತು ಸಾಹಿತ್ಯ ವೇದಿಕೆ, ನಿಸರ್ಗ ಸಂಗೀತ ವಿದ್ಯಾಲಯ ಸಂಘ, ಲಯನ್ಸ್ ಕ್ಲಬ್ ಆಫ್ ಮೈಸೂರು ಮಿಲೇನಿಯಂ ಹಾಗೂ ಸಂಜನಾ ಬಳಗ ಪ್ರತಿಷ್ಠಾನದ ವತಿಯಿಂದ ಜೂ.9ರಂದು ಬೆಳಗ್ಗೆ 10.30ಕ್ಕೆ ಶ್ರೀನಟರಾಜ ಶಿಕ್ಷಣ ಸಂಸ್ಥೆಗಳ ಸೆಮಿನಾರ್ ಹಾಲ್‌ನಲ್ಲಿ ಮುತ್ತು ಯ ವಡ್ಡರ ಇವರ ಸಂಪಾದಕೀಯ 'ಎಲೆಮರೆ ಕಾಯಿಗಳು' ಮತ್ತು ಲಯನ್ ಡಾ.ನ.ಗಂಗಾಧರಪ್ಪ ನಾರಣಾಪುರ ಅವರ 'ಎರೆನಾಡ ಅಂಕುರ' ಕೃತಿ ಲೋಕಾರ್ಪಣೆ ಸಮಾರಂಭವನ್ನು ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ ಹೊಸಮಠದ ಶ್ರೀ ಚಿದಾನಂದ ಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಲಯನ್ಸ್ ಕ್ಲಬ್ ಮಿಲೇನಿಯಂನ ಅಧ್ಯಕ್ಷ ಎ.ಸಿ.ರವಿ ಅಧ್ಯಕ್ಷತೆ ವಹಿಸಲಿದ್ದಾರೆ. ಹನುಮಸಾಗರದ ಮಲ್ಲಯ್ಯ ಕೋಮಾರಿ ಕೃತಿ 'ಎಲೆಮರೆ ಕಾಯಿಗಳು' ಬಿಡುಗಡೆಗೊಳಿಸಲಿದ್ದಾರೆ. ಯುವ ಸಾಹಿತಿ ಜ್ಯೋತಿ ಆನಂದ್ ಚಂದುಕರ ಕೃತಿ ಪರಿಚಯ ಮಾಡಿಕೊಡಲಿದ್ದಾರೆ. 'ಎರೆನಾಡ ಅಂಕುರ' ಕೃತಿಯನ್ನು ಡಾ.ನಾಗರಾಜ ವಿ.ಬೈರಿ ಬಿಡುಗಡೆಗೊಳಿಸಲಿದ್ದಾರೆ. ಕನ್ನಡ ಸಾಹಿತ್ಯ ಕಲಾಕೂಟದ ಎಂ.ಚಂದ್ರಶೇಖರ್ ಪರಿಚಯಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಎಂ.ಗೀತಾ, ಈರಮಂಡ ಹರಿಣಿ ವಿಜಯ್, ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಮಕ್ಕಳಿಗೆ ಶಿಕ್ಷಣದೊಂದಿಗೆ ಕಲೆಯನ್ನೂ ಕಲಿಸಬೇಕು



ಮೈಸೂರು ವಿವಿ ಲಲಿತ ಕಲಾ ಕಾಲೇಜಿನ ನೃತ್ಯ ವಿಭಾಗದ ಮುಖ್ಯಸ್ಥ ಪ್ರೊ.ಕೆ.ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಜೂ.8(ಎಸ್‌ಪಿಎನ್)– ಮಕ್ಕಳ ಬೌದ್ಧಿಕ ವಿಕಾಸಕ್ಕೆ ಪ್ರದರ್ಶಕ ಕಲೆಗಳು ಸಹಕಾರಿ ಎಂದು ಮೈಸೂರು ಜಿಲ್ಲಾಸ್ಪತ್ರೆಯ ಮಕ್ಕಳ ವಿಭಾಗದ ಮಕ್ಕಳ ತಜ್ಞೆ ಡಾ.ಜಿ.ಮಾಲತಿ ಅಭಿಪ್ರಾಯಪಟ್ಟರು. ಮೈಸೂರು ರಾಮಕೃಷ್ಣನಗರದ ಚಂಪಕ ಅಕಾಡೆಮಿಯ ಚಂಪಕ ಸಭಾಂಗಣದಲ್ಲಿ ಚಂಪಕ ರಾಷ್ಟ್ರೀಯ ಕಲಾ ಉತ್ಸವ ಹಾಗೂ ಮೈಸೂರು ವಿವಿ ಲಲಿತ ಕಲಾ ಕಾಲೇಜಿನ ನೃತ್ಯ ವಿಭಾಗದ ಮುಖ್ಯಸ್ಥ ಪ್ರೊ.ಕೆ.ಕುಮಾರ್ ಅವರನ್ನು ಸನ್ಮಾನಿಸಿ ಮಾತನಾಡಿದರು.

ಚಿಕ್ಕ ವಯಸ್ಸಿನಿಂದಲೇ ಕಲೆಗೆ ಪ್ರಾಮುಖ್ಯತೆ ನೀಡಿ, ಮಕ್ಕಳಿಗೆ ಕಲಿಸಬೇಕು. ಇದರಿಂದ ಮಕ್ಕಳ ಬೌದ್ಧಿಕ ವಿಕಾಸ ಹಾಗೂ ಸಮಸ್ಯೆಗಳನ್ನು ಎದುರಿಸಲು ಸಹಾಯಕವಾಗುತ್ತದೆ. ಅಲ್ಲದೆ, ಮೈಸೂರು ಕಲೆಗಳ ತವರೂರು, ರಾಜಾಶ್ರಯದಿಂದ ಪ್ರಜಾಪ್ರಭುತ್ವದವರೆಗೂ ಶಾಸ್ತ್ರೀಯ ಕಲೆಗಳ ಉಳಿವಿಗೆ ಹಿರಿಯ ಕಲಾವಿದರು ಶ್ರಮಿಸಿದ್ದಾರೆ. ಅಂತೆಯೇ ಮೈಸೂರಿನಲ್ಲಿ ಶಾಸ್ತ್ರೀಯ ಕಲೆಗಳನ್ನು ಹೆಚ್ಚಿನ ವಿದ್ಯಾರ್ಥಿಗಳು ಆಸಕ್ತಿಯಿಂದ ಕಲಿಯುತ್ತಿರುವುದರಿಂದ ಇಲ್ಲಿಯವರೆಗೂ ಕಲೆ ಉಳಿದಿದೆ ಎಂದರು.

ಚಂಪಕ ಅಕಾಡೆಮಿ ಸದಸ್ಯರು ಹಲವು ವರ್ಷಗಳಿಂದ ಸಾವಿರಾರು ಮಕ್ಕಳಿಗೆ ಸಂಗೀತ, ನೃತ್ಯ, ವಿವಿಧ ಸಂಗೀತ ವಾದ್ಯಗಳ ಮಕ್ಕಳಿಗೆ ಕಲಿಸಲು ಆದ್ಯತೆ ನೀಡಿದ್ದಾರೆ. ಇದಕ್ಕೆ ಮಕ್ಕಳ ಪೋಷಕರೂ ಸಾಥ್ ನೀಡಿದ್ದು, ಇಂತಹ ವಾತಾವರಣ ಕಲೆಯ ಬೆಳವಣಿಗೆ ಸಹಕಾರಿ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ.ಕೆ.ಕುಮಾರ್, ವಿದ್ಯಾರ್ಥಿಗಳ ಓದಿನ ಜೊತೆಗೆ ಕಲೆಗಳ ಕಲಿಕೆಗೂ ಆದ್ಯತೆ ನೀಡಬೇಕು. ಇದು ಭಾರತೀಯ ಸಂಸ್ಕೃತಿ ಉಳಿವಿಗೂ ಸಹಕಾರಿಯಾಗಿದ್ದು, ಕಲೆ ಉಳಿವಿಗಾಗಿ ಶ್ರಮಿಸುತ್ತಿರುವ ಚಂಪಕ ಅಕಾಡೆಮಿಯ ಸದಸ್ಯರ ಪ್ರಯತ್ನ ಮೆಚ್ಚುಗೆಯ ಸಂಗತಿ ಎಂದರು. ಈ ವೇಳೆ ಮೈಸೂರು ವಿವಿ ಲಲಿತ ಕಲಾ ಕಾಲೇಜಿನ ನೃತ್ಯ ವಿಭಾಗದ ಮುಖ್ಯಸ್ಥ ಪ್ರೊ.ಕೆ.ಕುಮಾರ್ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಉಡುಪಿ ಶಾರದ ನೃತ್ಯಾಲಯದ ಅಧ್ಯಕ್ಷೆ ವಿದುಷಿ ಪಾವನ, ಶ್ರೀ ಗಣೇಶ ಸಂಗೀತ ನೃತ್ಯಾಲಯ ಚಾರಿಟೇಬಲ್ ಟ್ರಸ್ಟ್ ನಿರ್ದೇಶಕ ವಿದುಷಿ ಆರತಿ ಅರುಣ್, ಮಹಾರಾಜ ಕಾಲೇಜು ನಿವೃತ್ತ ಪ್ರಾಂಶುಪಾಲ ಪ್ರೊ.ಸಿ.ಎ.ಶ್ರೀಧರ್ ಇತರರಿದ್ದರು.



ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ಈ ಗಂಡು ಮಕ್ಕಳು ಕೆಪಾಸಿಟಿ ಇಲ್ಲಾಂದ್ರು ಯಾಕೆ ಕುಡಿತಾರೋ?

ಗಂಡ : ಹೆಣ್ಣು ಮಕ್ಕಳು ಚೆನ್ನಾಗಿ ಕಾಣ್ಸಲ್ಲ ಅಂದ್ರು, ಯಾಕೆ ಮೇಕಪ್ ಮಾಡ್ಕೊತಾರೋ?

ಮೈಸೂರು ಮಿತ್ರ

ಭಾನುವಾರ, 9 ಜೂನ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಸಮಯದ ಮೌಲ್ಯವನ್ನು ಅರ್ಥ ಮಾಡಿಕೊಳ್ಳಿ,
ಸಮಯಕ್ಕೆ ಬೆಲೆ ಕೊಡದ ವ್ಯಕ್ತಿಗೆ ಸಮಯವೂ ಬೆಲೆ ಕೊಡುವುದಿಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕುಂಬಾರನ ಮಗಳು ಲಾಭ ಬಂದ ಹೊರತು ಮಡಿಕೆ ಒಡೆಯುವುದಿಲ್ಲ.

ನಿಮ್ಮ ಪತ್ರಗಳು

ಕೆಬಿಜಿಯವರ ಒಳ್ಳೆಯ ಸಲಹೆ...!

ಮಾನ್ಯರೆ,

ಕೆಬಿಜಿಯವರ ಇಂದಿನ (8.6.2024) ಭೂಮಂತ್ರದಲ್ಲಿ ತಿಳಿಸಿದಂತೆ ಅಮೇರಿಕದಲ್ಲಿ ಅಧ್ಯಕ್ಷರಿಗೆ ಸತತವಾಗಿ ಎರಡು ಬಾರಿ ಮಾತ್ರ ಅಧಿಕಾರದ ಅವಕಾಶ. ಅಂತೆಯೇ ಭಾರತದಲ್ಲೂ ಅಂತಹ ವ್ಯವಸ್ಥೆಯನ್ನು ತರಬಹುದೆಂದಿದ್ದಾರೆ. ಒಳ್ಳೆಯ ಸಲಹೆ.

ನಮ್ಮಲ್ಲಿ ಅದರ ಜೊತೆಗೆ ಇನ್ನೊಂದು ಬದಲಾವಣೆ ಬೇಕಾಗಿದೆ. ಅದೇಂದರೆ ಯಾವುದೇ ಎಂಪಿ, ಎಂಎಲ್‌ಎ, ಎಂಎಲ್‌ಸಿ ಇತ್ಯಾದಿ ಚುನಾಯಿತ ಪ್ರತಿನಿಧಿ ಸತತವಾಗಿ ಎರಡು ಬಾರಿಗಿಂತ ಹೆಚ್ಚು ಪ್ರತಿನಿಧಿಸುವಂತಿಲ್ಲ. ಜೊತೆಗೆ ಅವರ ಕುಟುಂಬ ಸದಸ್ಯರೂ ಪ್ರತಿನಿಧಿಸುವಂತಿಲ್ಲ. ಇಂತಹ ಒಂದು ಬದಲಾವಣೆಯನ್ನು ತಂದರೆ ನಮ್ಮ ರಾಜಕೀಯ ಆಡಳಿತದಲ್ಲಿ ಕೆಲವು ಸುಧಾರಣೆ ನೋಡಬಹುದೇನೋ.

– ರಾಧಾಕೃಷ್ಣ ಭಟ್, ಶ್ರೀರಾಂಪುರ, ಮೈಸೂರು.

ವೈದ್ಯರಿಗೆ ಗ್ರಾಮೀಣ ಸೇವೆ: ಸ್ವಾಗತಾರ್ಹ

ಮಾನ್ಯರೆ,

ಪ್ರಸ್ತುತ ಸರಕಾರಿ ಕೋಟಾದಲ್ಲಿ ಸರ್ಕಾರಿ ಕಾಲೇಜು ಮತ್ತು ಖಾಸಗಿ ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಪ್ರವೇಶ ಪಡೆದ ವಿದ್ಯಾರ್ಥಿಗಳು ಕೋರ್ಸ್ ಮುಗಿಸಿದ ನಂತರ ಗ್ರಾಮೀಣ ಭಾಗದಲ್ಲಿ ನಿರ್ದಿಷ್ಟ ಅವಧಿಗೆ ಸೇವೆ ಸಲ್ಲಿಸಬೇಕೆಂದು ಕರ್ನಾಟಕ ಹೈಕೋರ್ಟ್ ಇತ್ತೀಚೆಗೆ ನೀಡಿರುವ ತೀರ್ಪು ಸ್ವಾಗತಾರ್ಹವಾಗಿದೆ. ಇದರಿಂದಾಗಿ ಗ್ರಾಮೀಣ ಭಾಗದಲ್ಲಿ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ದೊರೆಯುತ್ತದೆ ಹಾಗೂ ತುಂಬಾ ಹಿಂದುಳಿದ ಬುಡಕಟ್ಟು ಪ್ರದೇಶಗಳಲ್ಲಿ ವಾಸಿಸುವ ಜನಗಳಿಗೆ ಉತ್ತಮ ಗುಣಮಟ್ಟದ ವೈದ್ಯಕೀಯ ಸೌಲಭ್ಯ ದೊರೆತಂತಾಗುತ್ತದೆ.

ದೇಶದ ಗ್ರಾಮೀಣ ಜನತೆ ಆರೋಗ್ಯ ಸೇವೆಗಳಿಂದ ವಂಚಿತರಾಗುತ್ತಿದ್ದಾರೆ. ನಮ್ಮ ದೇಶದ ಜನಸಂಖ್ಯೆಗೆ ಹೋಲಿಸಿದರೆ ವೈದ್ಯರ ಸಂಖ್ಯೆ ಕಡಿಮೆಯಿದೆ. ಗ್ರಾಮೀಣ ಭಾರತದ ಆರೋಗ್ಯ ಕಾಪಾಡಬೇಕಾಗಿರುವುದು ದೇಶದ ಹಾಗೂ ವೈದ್ಯರ ಜವಾಬ್ದಾರಿ. ಇದಕ್ಕೆ ಎಲ್ಲಾ ವೈದ್ಯರು ಸಹಕರಿಸಲೇಬೇಕು. ಹೀಗಾಗಿ ಎಂಬಿಬಿಎಸ್ ಪದವಿಯನ್ನು ಪಡೆದ ಯುವ ವೈದ್ಯರು ಗ್ರಾಮೀಣ ಪ್ರದೇಶದಲ್ಲಿ ವೈದ್ಯ ವೃತ್ತಿ ಮಾಡಲಿ. ಏಕೆಂದರೆ ಆ ಮೂಲಕ ಗ್ರಾಮೀಣ ಜನತೆಗೆ ಉತ್ತಮ ಆರೋಗ್ಯ ಸೇವೆ ಹಾಗೂ ಯುವ ವೈದ್ಯರಿಗೆ ಗ್ರಾಮೀಣ ಪ್ರದೇಶದ ಬದುಕನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಇಷ್ಟಾಗಿಯೂ ವೈದ್ಯರಿಗೆ ಗ್ರಾಮೀಣ ಸೇವೆ ಕಡ್ಡಾಯದ ಜೊತೆಗೆ, ಗ್ರಾಮೀಣ ಪ್ರದೇಶದಲ್ಲಿ ವೈದ್ಯರನ್ನು ಗೌರವಯುತವಾಗಿ ನಡೆಸಿಕೊಳ್ಳಲು ಹಲವು ಮಾರ್ಪಾಡುಗಳು ಆಗಬೇಕಿದೆ. ವೈದ್ಯರ ಮೇಲೆ ನಡೆಯುವ ಹಲ್ಲೆಯನ್ನು ತಡೆಯಲು ಈಗಾಗಲೇ 2006ರಲ್ಲಿ ತಂದಿರುವ ಕಾಯ್ದೆ ಸಮರ್ಪಕವಾಗಿ ಅನುಷ್ಠಾನಗೊಂಡಿಲ್ಲ. ಇದನ್ನು ಸೂಕ್ತ ತಿದ್ದುಪಡಿಗಳೊಂದಿಗೆ ಕಟ್ಟುನಿಟ್ಟಾಗಿ ಜಾರಿಗೆ ತರುವುದು ಅಗತ್ಯವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ವಿದೇಶಗಳ ವ್ಯಾಮೋಹಕ್ಕೆ ಮಾರುಹೋಗುತ್ತಿರುವ ಭಾರತೀಯರು

ಮಾನ್ಯರೆ,

ನಮ್ಮ ರಾಷ್ಟ್ರ ಪ್ರಜಾಪ್ರಭುತ್ವ ರಾಷ್ಟ್ರ. ಇಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ತನ್ನ ನಿಲುವನ್ನು ಮಂಡಿಸುವ ಸ್ವಾತಂತ್ರ್ಯ ಕಲ್ಪಿಸಿಕೊಡಲಾಗಿದೆ. ಹುಟ್ಟುವುದು ಇಲ್ಲಿ, ಬೆಳೆಯುವುದು ಇಲ್ಲಿ, ಪ್ರಕೃತಿ ಸೌಂದರ್ಯ ಸವಿಯುವುದು ಇಲ್ಲಿ, ಆದರೆ ದುಡಿಯುವುದು ಮಾತ್ರ ವಿದೇಶದಲ್ಲಿ. ಇದು ಸರಿಯೇ? ನಮ್ಮ ಸರ್ಕಾರ ಶಿಕ್ಷಣಕ್ಕೆಂದು ಹೆಚ್ಚು ಒತ್ತು ನೀಡಿ ಆಧುನಿಕ ಜಗತ್ತಿಗೆ ಹೊಂದಿಕೊಳ್ಳುವ ರೀತಿಯಲ್ಲಿ ಉನ್ನತ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಔದ್ಯೋಗಿಕ ಶಿಕ್ಷಣ ಸಂಸ್ಥೆಗಳು ಇನ್ನಿತರ ವೈಜ್ಞಾನಿಕ ಸಂಸ್ಥೆಗಳನ್ನು ತೆರೆದು ಎಲ್ಲಾ ಅವಕಾಶಗಳನ್ನು ಒದಗಿಸಿಕೊಟ್ಟರೂ ವಿದೇಶಿಗಳಿಗೆ ಹಾರುಹೋಗುತ್ತಿರುವ ಜನತೆಯ ನಿಲುವು ಸರಿಯೇ?

ತಮ್ಮ ಮಕ್ಕಳು ಓದಿ ಉನ್ನತ ಸ್ಥಾನ ಪಡೆದು ವೃದ್ಧಾಪ್ಯದಲ್ಲಿ ನಮಗೆ ಆಸರೆಯಾಗುತ್ತಾರೆಂದು ಕನಸು ಕಟ್ಟಿ ಬೆಳೆಸುತ್ತಾರೆ ಪೋಷಕರು. ಆದರೆ, ಇಂದು ಸ್ವದೇಶದಲ್ಲಿ ಒಂದು ಐಷಾರಾಮಿ ಮನೆ ನಿರ್ಮಿಸಿ ತಂದೆ–ತಾಯಿಗಳನ್ನು ಅಲ್ಲಿರಿಸಿ ತಮಗೆ ಕೇವಲ ಫ್ಲಾರ್ಮ ಹೌಸ್‌ನಂತೆ ಭಾವಿಸುವ ಜನತೆಯ ನಿಲುವು ನ್ಯಾಯವೇ?

ಪ್ರತಿ ಜನಗಣತಿಯಂದು ಗಣತಿದಾರರು ಗಣತಿಗೆಂದು ಹೋದಾಗ ನೋಡಲು ದೊಡ್ಡ ಬಹುಮಹಡಿ ಬಂಗಲೆ ಕಂಡರೂ ಅದರೊಳಗೆ ವಾಸಿಸುವ ಜನರ ಸಂಖ್ಯೆ ಎರಡು ಮೀರದನ್ನು ಕಂಡು ವಿಸ್ಮಯದ ಜೊತೆಗೆ ಮರುಕವು ಉಂಟಾಗುತ್ತದೆ. ಆ ಮಹಡಿ ವಯಸ್ಸಾದ ತಂದೆ–ತಾಯಿ ಮತ್ತು ಒಬ್ಬ ಕಾವಲುಗಾರನಿಗಷ್ಟೆ ಸೀಮಿತವಾಗಿರುತ್ತದೆ. ಇಂದು ನಮ್ಮ ರಾಷ್ಟ್ರ ಯಾವುದರಲ್ಲೂ ಯಾರಿಗೂ ಕಡಿಮೆಯಿಲ್ಲ ಎಂದು ಹೇಳುವುದು ಒಬ್ಬ ಭಾರತೀಯರಾದ ನಮಗೆ ಹೆಮ್ಮೆ ಪಡುವ ವಿಚಾರ. ಭಾರತೀಯರಾದ ನಾವು ನಮ್ಮ ರಾಷ್ಟ್ರದಲ್ಲೇ ಜೀವಿಸಿ ನಮ್ಮ ರಾಷ್ಟ್ರದ ಪ್ರಗತಿಯಲ್ಲಿ ಪಾಲ್ಗೊಂಡು ನಮ್ಮ ರಾಷ್ಟ್ರ ಇತರ ರಾಷ್ಟ್ರಗಳಿಗೆ ಸೆಡ್ಡು ಹೊಡೆದು ಪ್ರಗತಿಯ ಪಥದಲ್ಲಿ ಅತ್ಯುನ್ನತ ಸ್ಥಾನಕ್ಕೇರಿ ಮೊದಲ ಸ್ಥಾನದಲ್ಲಿ ನಿಲ್ಲುವಂತೆ ಮಾಡೋಣ. ವಿದೇಶಿ ವ್ಯಾಮೋಹಕ್ಕೆ ಬಲಿಯಾಗದೆ ಸ್ವದೇಶವನ್ನು ಪೂಜಿಸಿ ಗೌರವಿಸಿ ಇಲ್ಲೇ ವೃತ್ತಿಯನ್ನು ಮಾಡಿ ಪೋಷಕರ ಜೊತೆಯಲ್ಲಿ ಆನಂದಕರ ಜೀವನ ನಡೆಸೋಣ. ನಮ್ಮ ದೇಶ ನಮ್ಮ ಹೆಮ್ಮೆ ಅಲ್ಲವೇ? –ಅನಿಲ್ ರಾಜ, ಸಹ ಶಿಕ್ಷಕರು, ಮೈಸೂರು

ಬಂಧಿತರಿಗೆ ಸ್ಪರ್ಧಿಸುವ ಅವಕಾಶ ಏಕೆ?

ಮಾನ್ಯರೆ,

ಇದೀಗ ಮುಗಿದ ಲೋಕಸಭಾ ಚುನಾವಣೆಯಲ್ಲಿ ಭಯೋತ್ಪಾದನೆ ಆಪಾದನೆಯ ಮೇಲೆ ಕ್ರಮವಾಗಿ 2019 ಹಾಗೂ 2023ರಿಂದ ಜೈಲಿನಲ್ಲಿದ್ದರೂ ಎಂಜಿನಿಯರ್ ರಶೀದ್ ಬಾರಮುಲ್ಲಾ ಕ್ಷೇತ್ರದಿಂದ ಮತ್ತು ಅಮೃತ ಪಾಲ್‌ಸಿಂಗ್ ಅವರು ಪಂಜಾಬ್‌ನ ಕುದೂರ್ ಕ್ಷೇತ್ರದಿಂದ ಚುನಾಯಿತರಾಗಿದ್ದಾರೆ. ಇವರು ಲೋಕಸಭೆಗೆ ಹಾಜರಾಗಿ ಪ್ರಮಾಣ ವಚನ ಸ್ವೀಕರಿಸಲು ಅನುಮತಿ ಇದ್ದು, ಲೋಕಸಭಾ ಕಲಾಪಗಳಲ್ಲಿ ಭಾಗವಹಿಸಲು ಅವಕಾಶವಿಲ್ಲವೆಂದು ಕಾನೂನು ತಜ್ಞರು ಹೇಳಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ.

ಕಳೆದ ಕರ್ನಾಟಕ ವಿಧಾನಸಭಾ ಚುನಾವಣೆ ವೇಳೆಯೂ ಜೈಲಿನಲ್ಲಿದ್ದುಕೊಂಡೆ ಚುನಾವಣೆಯಲ್ಲಿ ಸ್ಪರ್ಧಿಸಿ ಸದಸ್ಯರೊಬ್ಬರು ವಿಜೇತರಾಗಿರುವುದು ವರದಿಯಾಗಿತ್ತು.

ನ್ಯಾಯಾಲಯವು ತಪ್ಪಿತಸ್ಥರೆಂದು ಘೋಷಿಸಿ ಕನಿಷ್ಠ 2 ವರ್ಷಗಳ ಶಿಕ್ಷೆಗೆ ಗುರಿಯಾದರೆ ಮಾತ್ರ ಅವರು ಲೋಕಸಭಾ ಸದಸ್ಯತ್ವ ಕಳೆದುಕೊಳ್ಳುತ್ತಾರೆ ಎಂದು ಕಾನೂನು ಹೇಳುತ್ತದೆ. ಆದರೆ ದೋಷಿತರು ಎಂಬ ಕಾರಣದಿಂದಲೇ ಅವರನ್ನು ಪೊಲೀಸರು ಬಂಧಿಸಿರುತ್ತಾರೆ. ಹೀಗಿರುವಾಗ ಆಪಾದನೆ ಹೊತ್ತ ವ್ಯಕ್ತಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಏಕೆ ನೀಡಿದ್ದಾರೆ?

ಇಂತಹ ಆಪಾದನೆ ಹೊತ್ತವರನ್ನು ಕೂಡ ಜನರು ಅದೇಗೆ ಮತ ಹಾಕಿ ಗೆಲ್ಲಿಸುತ್ತಾರೆ? ನಿಜಕ್ಕೂ ಇದೊಂದು ಅಪಹಾಸ್ಯದ ಸಂಗತಿ.


ಒಂದು ವೇಳೆ ಆಪಾದನೆ ಸಾಬೀತಾದರೆ ಅವರು 2 ವರ್ಷದ ಜೈಲು ಶಿಕ್ಷೆಗೆ ಗುರಿಯಾದರೆ ಸದಸ್ಯತ್ವಕ್ಕೆ ಅನರ್ಹರಾಗುತ್ತಾರೆ ಎನ್ನುವುದೇನೋ ಸರಿ. ಹಾಗಾದರೆ ರಶೀದ್ ಎಂಜಿನಿಯರ್ ಅವರು ಈಗಾಗಲೇ 5 ವರ್ಷದಿಂದ ಜೈಲಿನಲ್ಲಿದ್ದಾರೆ. ಅವರ ವಿಚಾರಣೆ 5 ವರ್ಷವಾದರೂ ಮುಗಿದಿಲ್ಲ. ತಪ್ಪಿತಸ್ಥರಲ್ಲದಿದ್ದರೂ ಜೈಲಿನಲ್ಲಿದ್ದಾರೆಯೋ ತಪ್ಪಿತಸ್ಥರಾಗಿ ಜೈಲಿನಲ್ಲಿರುವರೆ? ಇದೇ ಸಾಲಿಗೆ ಈಗ ದೆಹಲಿ ಮುಖ್ಯಮಂತ್ರಿ ಕೇಜ್ರಿವಾಲ್ ಕೂಡ ಸೇರಿದ್ದಾರೆ. ಈ ಬಗ್ಗೆ ಸರಿಯಾದ ಕಾನೂನು ರೂಪಿಸಬೇಕು. –ಮುಳ್ಳೂರು ಪ್ರಕಾಶ್, ಮೈಸೂರು.

ನಮ್ಮ ಮೈಸೂರಿನ ಅಸಾಮಾನ್ಯರು



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ಅದೇ ನನಗೆ ಬರೆದ ತೃಪ್ತಿ.

22. 'ತುಂಬೆಹೂವು' ರಾಮಾಶಾಸ್ತ್ರಿಗಳು





ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ತಾವು ಶ್ರೀಮಂತರಲ್ಲದಿದ್ದರೂ ಮತ್ತೊಬ್ಬರಿಗೆ ನೆರವಾಗಿ ಸಮಾಜದ ಉನ್ನತಿಗಾಗಿ ದುಡಿಯುತ್ತಿದ್ದುದು ಅಂದು ಸಾಮಾನ್ಯವಾಗಿತ್ತು. ಅಂತಹ ಒಂದು ಮನೋಭಾವದವರು ರಾಮನಾಥಪುರದ ರಾಮಣ್ಣ ಅಥವಾ ಆರ್. ರಾಮಾಶಾಸ್ತ್ರಿಗಳು. ಆದರೆ ಅವರು 'ತುಂಬೆಹೂವು' ರಾಮಣ್ಣ ಎಂದು ಮೈಸೂರಿನವರಿಗೆ ಹೆಚ್ಚು ಪರಿಚಯ. ತುಂಬೆ ಹೂವು ಅವರ ಹೆಸರಿನೊಂದಿಗೆ ಸೇರಿಕೊಳ್ಳಲು ಕಾರಣ ಅವರು ಅರಮನೆಗೆ ತುಂಬೆಹೂವು ಕೊಡುತ್ತಿದ್ದುದು. ಅರಮನೆಯ ಸಂಬಂಧದಿಂದಾಗಿ ಅವರಿಗೆ ಜೋಡಿಗ್ರಾಮವೂ ದಾನವಾಗಿ ಬಂದಿತ್ತು.

ಅವರು ಹುಟ್ಟಿದ್ದು ಸುಮಾರು 1870ರಲ್ಲಿ. ರಾಮನಾಥಪುರದ ನಾರಾಯಣಶಾಸ್ತ್ರಿಗಳು ಅವರ ತಂದೆ. ಮೈಸೂರಿನ ಮಂಡಿ ಪೇಟೆಯಲ್ಲಿ ಬಾಡಿಗೆ ಮನೆಯೊಂದರಲ್ಲಿ ವಾಸವಾಗಿದ್ದರು. ರಾಮಣ್ಣನವರ ಪತ್ನಿ ಸುಬ್ಬಮ್ಮ. ಸುಬ್ಬಮ್ಮ ಮೀನಾಕ್ಷಮ್ಮನವರ ಏಕಮಾತ್ರ ಪುತ್ರಿ. ರಾಮಣ್ಣ–ಸುಬ್ಬಮ್ಮ ದಂಪತಿಗೆ ಒಂಬತ್ತು ಮಂದಿ ಮಕ್ಕಳು. ಮೂವರು ಗಂಡು ಮಕ್ಕಳು. ಆರು ಮಂದಿ ಹೆಣ್ಣು ಮಕ್ಕಳು. ಇಬ್ಬರು ಗಂಡು ಮಕ್ಕಳು ಹಾಗೂ ಮೂವರು ಹೆಣ್ಣು ಮಕ್ಕಳು ಬೇಗನೇ ಕಾಲವಾಗಿದ್ದರು. ಉಳಿದಿದ್ದ ಏಕಮಾತ್ರ ಪುತ್ರನೂ 1906ರಲ್ಲಿ ನಿಧನನಾದ. ಹಾಗಾಗಿ ಇವರಿಗೆ ಗಂಡು ಮಕ್ಕಳೇ ಇಲ್ಲದೆ ಹೋಯಿತು. ಉಳಿದಿದ್ದವರು ಮೂರು ಮಂದಿ ಹೆಣ್ಣು ಮಕ್ಕಳೆಂದರೆ ಗೌರಮ್ಮ, ಸುಬ್ಬಲಕ್ಷಮ್ಮ ಮತ್ತು ಸಾವಿತ್ರಮ್ಮ.

1918ರಲ್ಲಿ ಹೆಂಡತಿ ಕಾಲವಾದ ಮೇಲೆ ರಾಮಣ್ಣನವರು 1925ರಲ್ಲಿ ತಮ್ಮ ಪುತ್ರಿ ಗೌರಮ್ಮನ ಮಗ ವೆಂಕಟಪತಿಶಾಸ್ತ್ರಿ ಅವರನ್ನು ದತ್ತು ತೆಗೆದುಕೊಂಡರು. ಆ ವೇಳೆಗೆ ಹೆಂಡತಿ ಸುಬ್ಬಮ್ಮ ಸಾಯುವ ಮುಂಚೆ ಮಾರಿದ್ದ ಚೆಲುವಾಂಬ ಅಗ್ರಹಾರದ ಮನೆಯ ಒಂದು ಭಾಗವನ್ನು ಮತ್ತೆ ಕೊಂಡು ಚೆಲುವಾಂಬ ಅಗ್ರಹಾರದ ಮನೆಗೆ ಬಂದು ವಾಸಿಸುತ್ತಿದ್ದರು. ಸುಬ್ಬಮ್ಮನವರಿಗೆ ಆ ಮನೆ ಅವರ ತಂದೆಯಿಂದ ಬಳುವಳಿಯಾಗಿ ಬಂದಿತ್ತು. ಈ ಮಧ್ಯೆ ಪುತ್ರಿ ಗೌರಮ್ಮನವರ ಗಂಡ ಶ್ರೀನಿವಾಸಯ್ಯನವರೂ ಕಾಲವಾದರು. ಸುಬ್ಬಮ್ಮನವರು ಜೂನ್ 26, 1918ರಲ್ಲಿ ಸ್ವರ್ಗಸ್ಥರಾದರು. ಆಗ ಅವರಿಗೆ 40 ವರ್ಷ ವಯಸ್ಸು. ಹೆಂಡತಿ ಕಾಲವಾದಾಗ ರಾಮಣ್ಣನವರಿಗೆ ಸುಮಾರು 47 ವರ್ಷ.

ರಾಮಣ್ಣನವರಿಗೆ 1891ರಲ್ಲಿ ಉದ್ಯೋಗ ಲಭ್ಯವಾಗಿ ಸಹಾಯಕ ಅಧ್ಯಾಪಕರಾಗಿ, ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಕೆಲಸಕ್ಕೆ ಸೇರಿದಾಗ ಅವರ ಸಂಬಳ ಐದು ರೂಪಾಯಿ. ನಿವೃತ್ತರಾಗುವ ವೇಳೆಗೆ ಅದು 35 ರೂಪಾಯಿಗಳಿಗೆ ಏರಿತ್ತು. ಅವರಿಗೆ ಸರ್ಕಾರದಿಂದ ನಿವೃತ್ತಿವೇತನ ಬರುತ್ತಿತ್ತು. ರಾಮಣ್ಣನವರು ಬಹಳ ಕಷ್ಟಪಟ್ಟು ಬೆಳೆದು ಬಂದವರು. ಕಷ್ಟದ ಅರಿವಿದ್ದು ಮತ್ತೊಬ್ಬರಿಗೆ ನೆರವಾಗುತ್ತಿದ್ದರು. ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಜನರ ಅಪಾರ ಗೌರವಕ್ಕೆ ಪಾತ್ರರಾಗಿದ್ದರು.

ನಿವೃತ್ತರಾದ ಮೇಲೆ ಸಣ್ಣ ಅಂಗಡಿಯೊಂದನ್ನಿಟ್ಟ ರಾಮಣ್ಣನವರು, ತಮಗೆ ದೊರೆತ ಲಾಭದಲ್ಲಿ ಚೆಲುವಾಂಬ ಅಗ್ರಹಾರದಲ್ಲಿನ ತಮ್ಮ ಮನೆಯಲ್ಲಿ 1932ರಲ್ಲಿ ಕರ್ನಾಟಕ ಬುಕ್ ಡಿಪೋ ಹೆಸರಿನಲ್ಲಿ ಪುಸ್ತಕಗಳನ್ನು ಪ್ರಕಟಿಸುವುದು, ಮಾರಾಟ ಮಾಡುವ ಕಾರ್ಯವನ್ನೂ ನಡೆಸುತ್ತಿದ್ದರು. ಇದರ ಮ್ಯಾನೇಜರ್ ಆಗಿದ್ದವರು ಲೇಖಕ ಬಿ.ಆರ್.ಚಕ್ರವರ್ತಿ ಅವರು. ಇವರು 'ಶ್ರೀಕೃಷ್ಣ' ಎಂಬ ಸಚಿತ್ರ ಕನ್ನಡ ಮಾಸಪತ್ರಿಕೆಯನ್ನು ರಾಮಣ್ಣನವರ ವಿಳಾಸದಿಂದಲೇ ಪ್ರಕಟಿಸುತ್ತಿದ್ದರು. ಇದರ ಸಂಪಾದಕರಾಗಿದ್ದುದಲ್ಲದೆ ಚಕ್ರವರ್ತಿಗಳು ಕೆಲವು ಪುಸ್ತಕಗಳನ್ನೂ ಬರೆದಿದ್ದರು. ಇದರ ಬಹುತೇಕ ಖರ್ಚು ವೆಚ್ಚಗಳನ್ನೆಲ್ಲಾ ರಾಮಣ್ಣನವರೇ ನಿರ್ವಹಿಸುತ್ತಿದ್ದರು. ಚಕ್ರವರ್ತಿ ಅವರು ಬರೆದ ಪುಸ್ತಕಗಳು ಮತ್ತು ಮಾಸಪತ್ರಿಕೆಯ ಮಾರಾಟವೂ ರಾಮಣ್ಣನವರ ಮನೆಯಿಂದಲೇ ನಡೆಯುತ್ತಿತ್ತು. ಹಾಗೆ ಪ್ರಕಟವಾಗಿ ಮಾರಾಟವಾಗುತ್ತಿದ್ದ ಒಂದು ಸಣ್ಣ ಹೊತ್ತಿಗೆ ಎಂದರೆ 'ಸುಗುಣಿಯ ಭಾಗ್ಯೋದಯ'. ಇದು ಮೈಸೂರಿನ ಶ್ರೀ ಸತ್ಯನಾರಾಯಣ ಪವರ್ ಪ್ರೆಸ್ಸಿನಲ್ಲಿ 1932ರಲ್ಲಿ ಏಳನೆಯ ಕೃತಿಯಾಗಿ ಮುದ್ರಣವಾಗಿತ್ತು.

ರಾಮಣ್ಣನವರು ತಮ್ಮ ಉದಾರ ಮನಸ್ಸಿನಿಂದ ಚಕ್ರವರ್ತಿಗಳಿಗೆ ನೆರವಾಗಿ ಪ್ರಕಟಿಸುತ್ತಿದ್ದ ಪುಸ್ತಕಗಳು ಚಕ್ರವರ್ತಿಗಳು ಕೊಟ್ಟಿದ್ದ ಭರವಸೆಯಂತೆ ಸಾಕಷ್ಟು ಮಾರಾಟವಾಗದೆ ಬಹಳಷ್ಟು ನಷ್ಟವಾಯಿತು. ತಮ್ಮ ಪುಸ್ತಕಗಳ ಪ್ರಕಟಣೆಗೆ ಆಗುವ ಖರ್ಚಿನ ಬಗ್ಗೆ ಭರವಸೆ ನೀಡಿದ್ದ ಈ ಲೇಖಕರು ತಮ್ಮ ಭರವಸೆಯನ್ನು ಈಡೇರಿಸಲಾರದೆ ಮಾತಿಗೆ ತಪ್ಪಿ ನಡೆದರು. ಪ್ರಕಟಣೆಯ ಕಾರ್ಯ, ಬುಕ್ ಡಿಪೋ ಎರಡೂ ವಿಫಲವಾದವು.

ರಾಮಣ್ಣನವರು ಮುಚ್ಚುವ ಸ್ಥಿತಿಗೆ ಬಂದಿದ್ದ ಮೈಸೂರಿನ ಎರಡು ಖಾಸಗೀ ಸಹಕಾರ ಸಂಘಗಳ ಉಳಿವಿಗೆ ನೆರವಾಗಿದ್ದರು. ನಷ್ಟದಿಂದಾಗಿ ಮುಚ್ಚುವ ಪರಿಸ್ಥಿತಿಗೆ ಬಂದಿದ್ದ ಈ ಎರಡು ಸಂಘಗಳನ್ನು ಕಂಡ ರಾಮಣ್ಣನವರು ತಮ್ಮಲ್ಲಿದ್ದ ಹಣವನ್ನು ಹಾಕಿ ಅವುಗಳನ್ನು ಪುನರುಜ್ಜೀವನ ಮಾಡಿದರು. ಸದಸ್ಯರ ಮೆಚ್ಚುಗೆ ಗಳಿಸಿ ನಿರ್ದೇಶಕ–ಅಧ್ಯಕ್ಷರೂ ಆದರು. ಅಂತಹ ಸೇವಾ ಮನೋಭಾವ ಅಂದಿನ ಹಿರಿಯರಲ್ಲಿ ಸಾಮಾನ್ಯವಾಗಿ ಕಂಡು ಬರುತ್ತಿತ್ತು. ಆ ಸಹಕಾರ ಸಂಘಗಳ ಪೈಕಿ ಒಂದು **ಜಯ ಚಾಮರಾಜೇಂದ್ರ ಸಹಕಾರಿ ಸಂಘ**. ಅದು ರಮಾವಿಲಾಸ ಅಗ್ರಹಾರದ ಅಹೋಬಲ ಮಠದ ಪಕ್ಕದ ಒಂದು ಮನೆಯ ಮಹಡಿಯ ಮೇಲೆ ಕಾರ್ಯ ನಡೆಸುತ್ತಿತ್ತು. ರಾಮಣ್ಣನವರು ನಿರ್ದೇಶಕರಾಗಿ ನಿವೃತ್ತರಾದ ಮೇಲೂ ಆ ಸಂಘ ಅಲ್ಲಿಯೇ ಕಾರ್ಯನಿರ್ವಹಿಸುತ್ತಿತ್ತು.

ರಾಮಣ್ಣನವರು ಶ್ರೀರಂಗಪಟ್ಟಣದಲ್ಲಿ ಎರಡು ಕಡೆ ಫಲವತ್ತಾದ ಜಮೀನುಗಳನ್ನು ಪಡೆದಿದ್ದರು. ಈ ಎರಡು 'ಜೋಡಿಗ್ರಾಮ'ಗಳನ್ನು ಅವರು ಉಂಬಳಿಯಾಗಿ ಪಡೆದಿದ್ದರು. ಅವುಗಳಿಂದ ಆದಾಯವೂ ಬರುತ್ತಿತ್ತು. ಸರ್ಕಾರ ಜೋಡಿ ಗ್ರಾಮ ಪದ್ಧತಿಯನ್ನು ತೆಗೆದು ಹಾಕಿದಾಗ ಅವನ್ನು ಅವರ ದತ್ತು ಪುತ್ರ ವೆಂಕಟಪತಿಶಾಸ್ತ್ರಿ ಕಳೆದುಕೊಳ್ಳಬೇಕಾಯಿತು. ಹೆಚ್ಚಿನ ಪರಿಹಾರವನ್ನು ನಿರೀಕ್ಷಿಸಿ ಅವರಿಗೆ ಮಂಜೂರಾಗಿದ್ದ ಪರಿಹಾರವೂ ಲಭಿಸದೆ ಹೋಯಿತು.

ಶ್ರೀರಂಗಪಟ್ಟಣದ ಬಳಿ ಇದ್ದ ಎರಡು ಜಮೀನುಗಳಿಂದ ಹೆಚ್ಚು ಕಮ್ಮಿ ಒಂದು ವರ್ಷಕ್ಕೆ ಸಾಕಾಗುವಷ್ಟು ಬತ್ತ ಬರುತ್ತಿತ್ತು. ಅವರ ಮನೆಗಾದರೋ ಬಂದು ಹೋಗುವವರು ಜಾಸ್ತಿ. ಸದಾ ನೆಂಟರಿಷ್ಟರು. ಹಬ್ಬ–ಹರಿದಿನಗಳು. ಹೀಗಾಗಿ ಊಟ–ತಿಂಡಿ ಸದಾ ನಡೆದೇ ಇರುತ್ತಿತ್ತು. **"ಉಳುವವನಿಗೇ ಜಮೀನು"** ಜಾರಿಗೆ ಬಂದಾಗ ಜಮೀನು ಕಳೆದುಕೊಂಡು ನಿವೃತ್ತರಾಗಿದ್ದ ವೆಂಕಟಪತಿ ಶಾಸ್ತ್ರಿಗಳು ಕಷ್ಟಕ್ಕೆ ಸಿಕ್ಕಿಕೊಳ್ಳಬೇಕಾಯಿತು. ಅಂತಹ ಪರಿಸ್ಥಿತಿ ಅಂದು ಬಹಳ ಜನರಿಗೆ ಉಂಟಾಗಿ ಅವರ ಬದುಕು ದುರ್ಭರವಾಯಿತು ಎಂಬುದು ಬೇರೆ ಮಾತು.

ರಾಮಣ್ಣನವರಿಗೆ ಕೊನೆಯ ವರ್ಷಗಳಲ್ಲಿ ಕಣ್ಣು ಕಾಣಿಸದೆ ಹೋಯಿತು. ಶಸ್ತ್ರಚಿಕಿತ್ಸೆಯಾದ ಮೇಲೆ ದೃಷ್ಟಿ ಸ್ವಲ್ಪ ಉತ್ತಮಗೊಂಡರೂ, ನಂತರ ಕಣ್ಣು ಸಂಪೂರ್ಣ ಕಾಣದೆ ಹೋಯಿತು. ಮನೆಯಲ್ಲೇ ಕೋಲು ಹಿಡಿದು ಓಡಾಡುತ್ತಿದ್ದರು.

ದೈವಭಕ್ತರು, ನಿಷ್ಠಾವಂತರು. ದೇವರ ಪೂಜೆ, ಮೂರು ಹೊತ್ತು ಸಂಧ್ಯಾವಂದನೆ ತಪ್ಪದೆ ಮಾಡುತ್ತಿದ್ದ ರಾಮಣ್ಣನವರಿಗೆ ಸಾವು ಹತ್ತಿರವಾದದ್ದು ಅರಿವಾಗಿ ಸಾಯುವ ಮುನ್ನ ತಮ್ಮ ಮಗಳು ಗೌರಮ್ಮ ಮತ್ತು ವೆಂಕಟಪತಿ ಶಾಸ್ತ್ರಿಗಳ ಪತ್ನಿ ಲಕ್ಷ್ಮಮ್ಮನವರನ್ನು ಕರೆದು ನೆಲದ ಮೇಲೆ ದರ್ಬೆ ಹಾಸುವಂತೆ ಹೇಳಿ, ಅದರ ಮೇಲೆ ತಮ್ಮನ್ನು ಮಲಗಿಸುವಂತೆ ಹೇಳಿದರು. ಅದರಂತೆ ಅವರನ್ನು ದರ್ಬೆಯ ಮೇಲೆ ಮಲಗಿಸಿದ ನಂತರ ಅವರು ತಮ್ಮ ಆಪ್ತರೊಬ್ಬರ ಹೆಸರನ್ನು ಹೇಳಿ ಅವರನ್ನು ಕರೆದುಕೊಂಡು ಬರುವಂತೆ ಹೇಳಿದರು. ಅವರು ಮನೆಗೆ ಬಂದು ರಾಮಣ್ಣನವರ ಹತ್ತಿರ ಕುಳಿತು ಅವರ ಕಿವಿಯಲ್ಲಿ ಕರ್ಣ ಮಂತ್ರವನ್ನು ಹೇಳುತ್ತಾ ಹೋದಂತೆ ರಾಮಣ್ಣನವರ ಉಸಿರೂ ಕ್ಷೀಣವಾಗುತ್ತಾ ಹೋಗಿ ಅವರು ಮಂತ್ರವನ್ನು ಮುಗಿಸುವ ವೇಳೆಗೆ ರಾಮಣ್ಣನವರ ಪ್ರಾಣಪಕ್ಷಿ ಹಾರಿಹೋಗಿತ್ತು. ಅಂತಹ ದೈವ ಭಕ್ತರು. ಧರ್ಮನಿಷ್ಠರು ಅವರು. ಅವರು ಕಾಲವಾದದ್ದು 1952ರ ಏಪ್ರಿಲ್ ತಿಂಗಳಲ್ಲಿ.

ಮೈಸೂರು ಜಿಲ್ಲೆಯಲ್ಲಿ ಈ ವರ್ಷ 3.29 ಲಕ್ಷ ಗಿಡ ವಿತರಣೆ

■ 6 ನರ್ಸರಿಗಳಲ್ಲಿ ಗಿಡ ವಿತರಣೆ; ಪರಿಸರ ಸಮತೋಲನ ಕಾಪಾಡಲು ರಿಯಾಯಿತಿ ದರದಲ್ಲಿ ಗಿಡಗಳ ಮಾರಾಟ ■ ಸಿಲ್ವರ್, ತೇಗ, ಬೆಟ್ಟದ ನೆಲ್ಲಿ, ಬೇವು, ಹಲಸು, ಹೊಂಗೆ ಮಹಾಘನಿ, ನೇರಳೆ, ರಕ್ತಚಂದನ, ಶ್ರೀಗಂಧದ ಗಿಡ ಲಭ್ಯ ■ ದೊಡ್ಡ ಗಿಡಕ್ಕೆ 6 ರೂ., ಚಿಕ್ಕ ಗಿಡಕ್ಕೆ 3 ರೂ. ನಿಗದಿ

■ ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು, ಜೂ.8– ಪರಿಸರ ಸಮತೋಲನ ಕಾಪಾಡುವ ಉದ್ದೇಶದಿಂದ ಅರಣ್ಯ ಇಲಾಖೆ ವಿವಿಧ ಕಾರ್ಯಕ್ರಮ ರೂಪಿಸುತ್ತಿದ್ದು, ಪ್ರಸಕ್ತ ಸಾಲಿನಲ್ಲಿ ರೈತರೂ ಸೇರಿದಂತೆ ಸಾರ್ವಜನಿಕರಿಗೆ ರಿಯಾಯಿತಿ ದರದಲ್ಲಿ ಮಾರಾಟ ಮಾಡಲು ವಿವಿಧ ಬಗೆಯ 3.29 ಲಕ್ಷ ಗಿಡಗಳನ್ನು ಬೆಳೆಸಿ, 6 ನರ್ಸರಿಗಳಲ್ಲಿ ವಿತರಣೆಗೆ ಮುಂದಾಗಿದೆ.

ಪರಿಸರ ಸಂರಕ್ಷಣೆಯೊಂದಿಗೆ ಸಾರ್ವಜನಿಕರ ಸಹಭಾಗಿತ್ವದಲ್ಲಿ ಸ್ಥಳಾವಕಾಶವಿದ್ದ ಕಡೆ ಗಿಡ ಬೆಳೆಸುವುದರೊಂದಿಗೆ ಕೃಷಿ ಜಮೀನಿನ ಬದಿಗಳಲ್ಲಿ ಗಿಡ ಬೆಳೆಸಿ ಆದಾಯ ಗಳಿಸಲು ಉತ್ತೇಜನ ನೀಡಲು ಅರಣ್ಯ ಇಲಾಖೆ ಆರ್‌ಎಸ್‌ಪಿಡಿ (ರೈಸಿಂಗ್ ಆಫ್ ಸೀಡಿಂಗ್ಸ್ ಫಾರ್ ಪಬ್ಲಿಕ್ ಡಿಸ್ಟ್ರಿಬ್ಯುಷನ್) ಯೋಜನೆಯಡಿ ಪರಿಸರಕ್ಕೆ ಪೂರಕವಾದ ಹಾಗೂ ರೈತರಿಗೆ ಆದಾಯ ತಂದುಕೊಡುವ ಗಿಡಗಳನ್ನು ಬೆಳೆಸಿದ್ದು, ಕೈಗೆಟಕುವ ದರದಲ್ಲಿ ವಿತರಿಸುವುದಕ್ಕೆ ಸಿದ್ಧತೆ ಮಾಡಿಕೊಂಡಿದೆ.

ಕೈಗೆಟಕುವ ದರ: ಅರಣ್ಯ ಇಲಾಖೆ ನರ್ಸರಿಗಳಲ್ಲಿ ನಾಲ್ಕು ಗಾತ್ರದ ಬ್ಯಾಗ್ (ಪಾಲಿಥಿನ್)ಗಳಲ್ಲಿ ಗಿಡ ಬೆಳೆಸಲಾಗಿದ್ದು, ಅವುಗಳಿಗೆ ಪ್ರತ್ಯೇಕ ದರ ನಿಗದಿ ಮಾಡಲಾಗಿದೆ. ಜನ, ರೈತಸ್ನೇಹಿ ವಾತಾವರಣದಲ್ಲಿ ಗಿಡ ವಿತರಿಸಲಾಗುತ್ತಿದೆ. 6X9 ಅಳತೆಯ ಬ್ಯಾಗ್‌ನಲ್ಲಿನ ಗಿಡವೊಂದಕ್ಕೆ 3 ರೂ., 8X12 ಅಳತೆಯ ಬ್ಯಾಗ್‌ನಲ್ಲಿರುವ ಗಿಡಕ್ಕೆ 6 ರೂ. ದರ ನಿಗದಿ ಮಾಡಲಾಗಿದೆ. ಅಲ್ಲದೆ, 10X16, 14X20 ಅಳತೆಯ ಬ್ಯಾಗ್‌ನಲ್ಲಿ ಬೆಳೆಸಿರುವ ಗಿಡಗಳನ್ನು ಕೈಗೆಟಕುವ ದರದಲ್ಲಿ ಮಾರಾಟ ಮಾಡಲು ನಿರ್ಧರಿಸಲಾಗಿದೆ.





ಮೈಸೂರಿನ ಪಡುವಾರಹಳ್ಳಿ ಬಳಿ ಇರುವ ಕುಕ್ಕರಹಳ್ಳಿ ನರ್ಸರಿಯಲ್ಲಿ ಸಾರ್ವಜನಿಕರಿಗೆ ರಿಯಾಯಿತಿ ದರದಲ್ಲಿ ವಿತರಿಸಲು ಅರಣ್ಯ ಇಲಾಖೆಯಿಂದ ಬೆಳೆಸಿರುವ ಗಿಡಗಳು.

ಯಾವ ಯಾವ ಗಿಡ: ಈ ಸಾಲಿನಲ್ಲಿ ಸಾರ್ವಜನಿಕರಿಗಾಗಿ ವಿತರಿಸಲು ಸಿಲ್ವರ್, ತೇಗ, ಬೆಟ್ಟದ ನೆಲ್ಲಿ, ಬೇವು, ಹಲಸು, ಹೊಂಗೆ ಮಹಾಘನಿ, ನೇರಳೆ, ರಕ್ತಚಂದನ, ಶ್ರೀಗಂಧ ಇತರೆ ಗಿಡಗಳನ್ನು ಬೆಳೆಸಿದೆ. ಅವುಗಳಲ್ಲಿ ರಸ್ತೆಬದಿ, ಸಾರ್ವಜನಿಕ ಸ್ಥಳಗಳಲ್ಲಿ ನೆಡಲು ಬೇವು, ಹೊಂಗೆ ಹಾಗೂ ಇನ್ನಿತರ ಗಿಡಗಳು ದೊರೆಯಲಿವೆ. ರೈತರು ತಮ್ಮ ಜಮೀನು, ಮನೆಗಳ ಬಳಿ ಬೆಳೆಸಲು ಶ್ರೀಗಂಧ, ಸಿಲ್ವರ್, ತೇಗ, ಬೆಟ್ಟದ ನಲ್ಲಿ, ಹಲಸು, ನೇರಳೆ, ಮಹಾಘನಿ, ರಕ್ತಚಂದನ ಹಾಗೂ ಶ್ರೀಗಂಧ ಸೇರಿದಂತೆ ಇನ್ನಿತರ ವಾಣಿಜ್ಯ ಉದ್ದೇಶ ಗಿಡಗಳು ಲಭ್ಯವಿದೆ.

ಪ್ರತಿ ವರ್ಷವೂ ಡಿಮ್ಯಾಂಡ್: ಪ್ರತಿ ವರ್ಷವೂ ಕೈಗೆಟಕುವ ದರದಲ್ಲಿ ಆರ್‌ಎಸ್‌ಪಿಡಿ ಯೋಜನೆಯಡಿ ಗಿಡ ಮಾರಾಟ ಮಾಡಲು ಅರಣ್ಯ ಇಲಾಖೆ ಮುಂದಾಗುವುದರಿಂದ ಗಿಡ ಖರೀದಿಗೆ ರೈತರು ಹಾಗೂ ಸಾರ್ವಜನಿಕರು ಮುಗಿ ಬೀಳುತ್ತಿದ್ದಾರೆ. ಈ ಬಾರಿಯೂ ಜಿಲ್ಲೆಯ ಜನರಿಗೆ ನೀಡಲು 3.29 ಲಕ್ಷ ಗಿಡ ಬೆಳೆಸಿರುವುದರಿಂದ ಈ ಬಾರಿಯೂ ಗಿಡಗಳಿಗೆ ಡಿಮ್ಯಾಂಡ್ ಇದೆ.

ಸಂಘ–ಸಂಸ್ಥೆಗಳಿಗೆ ವರದಾನ: ವಿಶ್ವ ಪರಿಸರ ದಿನದ ಅಂಗವಾಗಿ ವಿವಿಧ ಸಂಘ ಸಂಸ್ಥೆಗಳು ನಡೆಸುವ ವನ ಮಹೋತ್ಸವದಲ್ಲಿ ಬಳಸಲು ಅರಣ್ಯ ಇಲಾಖೆಯ ನರ್ಸರಿಗಳಲ್ಲಿ ಬೆಳೆಸಿರುವ ಗಿಡಗಳು ವರದಾನವಾಗಿ ಪರಿಣಮಿಸಿವೆ. ಅಲ್ಲದೆ, ಶಾಲಾ–ಕಾಲೇಜು ಆವರಣ, ಸಮುದಾಯ ಭವನ, ದೇವಾಲಯ, ಬಸ್ ಶೆಲ್ಟರ್ ಬಳಿ, ಹೊಸ ಬಡಾವಣೆಗಳು, ನಿರ್ಮಾಣ ಹಂತದ ಬಡಾವಣೆಗಳಲ್ಲಿ ನೆಟ್ಟು ಬೆಳೆಸುವುದಕ್ಕೆ ಈ ಗಿಡಗಳು ಸೂಕ್ತವಾಗಿವೆ.

ರೈತರು, ಸಾರ್ವಜನಿಕರಿಗೆ ಉಪಯೋಗವಾಗಲಿದೆ

"ಅರಣ್ಯ ಇಲಾಖೆ ಈ ಬಾರಿಯೂ ಆರ್‌ಎಸ್‌ಪಿಡಿ ಯೋಜನೆಯಡಿ ರೈತರು ಹಾಗೂ ಸಾರ್ವಜನಿಕರಿಗೆ ವಿತರಿಸಲು ಗಿಡಗಳನ್ನು ಬೆಳೆಸಿದೆ. ಪರಿಸರ ಪೂರಕ ಗಿಡಗಳನ್ನೇ ಬೆಳೆಸಲಾಗಿದೆ. ಜಿಲ್ಲೆಯ ಆರು ನರ್ಸರಿಗಳಲ್ಲಿ 3.29 ಲಕ್ಷ ಗಿಡಗಳನ್ನು ಬೆಳೆಸಲಾಗಿದೆ. ಇಲಾಖೆ ಬೆಳೆಸಿರುವ ಗಿಡಗಳು ರೈತರಿಗೆ ಉಪಯುಕ್ತವಾಗಿದೆ. ಈ ಸೌಲಭ್ಯವನ್ನು ಸಾರ್ವಜನಿಕರು ಪಡೆದುಕೊಂಡು, ಗಿಡ ಖರೀದಿಸಿ, ನೆಟ್ಟು ಬೆಳೆಸುವ ಮೂಲಕ ಪರಿಸರ ಸಂರಕ್ಷಣೆಗೆ ಸಹಕರಿಸಬೇಕು.

– ಡಾ.ಕೆ.ಎನ್.ಬಸವರಾಜು, ಡಿಸಿಎಫ್

ಎಲ್ಲೆಲ್ಲಿ ಲಭ್ಯ: ಅರಣ್ಯ ಇಲಾಖೆ ವ್ಯಾಪ್ತಿ ನರ್ಸರಿಗಳಲ್ಲಿ ಗಿಡ ಲಭ್ಯವಿದ್ದು, ನಾಳೆ (ಭಾನುವಾರ)ಯಿಂದಲೇ ಖರೀದಿಸಬಹುದು. 6 ನರ್ಸರಿಗಳಿಗೂ ಸಂಬಂಧಪಟ್ಟ ಆರ್‌ಎಫ್‌ಓ ಅವರನ್ನು ಮೇಲ್ವಿಚಾರಣೆಗೆ ನಿಂiಜಿಸಲಾಗಿದೆ. ನಾಗವಾಲ (ಆರ್‌ಎಫ್‌ಓ ಕೆ.ಸುರೇಂದ್ರ), ಕುಕ್ಕರಹಳ್ಳಿ ಸಸ್ಯಕ್ಷೇತ್ರ (ಆರ್‌ಎಫ್‌ಓ ಧನ್ಯಶ್ರೀ), ಟಿ.ನರಸೀಪುರದ ನೀಲಸೋಗೆ ಸಸ್ಯಕ್ಷೇತ್ರ (ಆರ್‌ಎಫ್‌ಓ ಸೈಯದ್ ನದೀಮ್), ನಂಜನಗೂಡಿನ ಬಸವೇಶ್ವರ ಸಸ್ಯಕ್ಷೇತ್ರ (ಆರ್‌ಎಫ್‌ಓ ಎಂ.ಸಿ.ನಿತೀನ್‌ಕುಮಾರ್). ಹೆಚ್.ಡಿ. ಕೋಟೆಯ ಬೀಚನಹಳ್ಳಿ ಸಸ್ಯಕ್ಷೇತ್ರ(ಆರ್‌ಎಫ್‌ಓ ಪೂಜಾ ಯಲಿಗಾರ್), ಸರಗೂರು ವ್ಯಾಪ್ತಿಗೆ ಬೀಚನಹಳ್ಳಿ ಸಸ್ಯಕ್ಷೇತ್ರ (ಆರ್‌ಎಫ್‌ಓ ಹನುಮಂತರಾಜು)ಗಳಲ್ಲಿ ರಿಯಾಯಿತಿ ದರದಲ್ಲಿ ಗಿಡಗಳು ದೊರೆಯಲಿವೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರಲ್ಲಿ ಹೊಂಚು ಹಾಕುತ್ತಿದೆ
ಡೆಂಗ್ಯೂ ಮಹಾಮಾರಿ

ಜಿಲ್ಲಾಡಳಿತಕ್ಕೆ ಶಾಸಕ ಜಿ.ಟಿ.ದೇವೇಗೌಡರ ಎಚ್ಚರಿಕೆ

ಮೈಸೂರು, ಜೂ.8– ಮೈಸೂರಿನ ವಿಜಯನಗರ, ಹೂಟಗಳ್ಳಿ ಹಾಗೂ ಸುತ್ತಮುತ್ತ ಬಡಾವಣೆಗಳಲ್ಲಿ ಡೆಂಗ್ಯೂ ಮಹಾಮಾರಿಯ ಭೀತಿ ಸೃಷ್ಟಿಯಾಗಿದೆ.



ಎಲ್ಲೆಂದರಲ್ಲಿ ಕಸದ ರಾಶಿ ಕಣ್ಣಿಗೆ ರಾಚುತ್ತಿದ್ದು, ಅದನ್ನು ಸೂಕ್ತ ರೀತಿಯಲ್ಲಿ ತೆರವು ಮಾಡದಿರುವುದರಿಂದ ಸೊಳ್ಳೆ ಹಾವಳಿ ವಿಪರೀತವಾಗಿದೆ. ಪರಿಣಾಮ ಡೆಂಗ್ಯೂ ಮಹಾಮಾರಿ ವ್ಯಾಪಕವಾಗಿ ಹರಡುವ ಭೀತಿ ಎದುರಾಗಿದೆ. ಈಗಾಗಲೇ ಸಾಕಷ್ಟು ಮಂದಿ ಆರೋಗ್ಯ ಹದಗೆಟ್ಟಿದ್ದು, ಕ್ಲಿಯರ್ ಮೆಡಿ ರೇಡಿಯಂಟ್ ಆಸ್ಪತ್ರೆ ಕೆಆರ್. ಆಸ್ಪತ್ರೆ, ಡೆಂಗ್ಯೂ ವಾರ್ಡ್‌ಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರು ಡೆಂಗ್ಯೂ ಭೀತಿ ಇರುವ ಪ್ರದೇಶಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಜಿಟಿಡಿ, ವಿಷಯ ತಿಳಿಯುತ್ತಿದ್ದಂತೆ ಹಲವೆಡೆ ಭೇಟಿ ನೀಡಿದ್ದೇನೆ. ಎಲ್ಲೆಂದರಲ್ಲಿ ಕಸದ ರಾಶಿ ಬಿದ್ದಿದೆ. ಸೂಕ್ತ ರೀತಿಯಲ್ಲಿ ತೆರವು ಮಾಡದ ಕಾರಣ ಮಳೆಯಿಂದ ತ್ಯಾಜ್ಯ ಕೊಳೆತು, ದುರ್ವಾಸನೆ ಬೀರುತ್ತಿದೆ. ಇದರಿಂದ ಸೊಳ್ಳೆ ಹಾವಳಿ ವಿಪರೀತವಾಗಿ ಜನ ತತ್ತರಿಸಿ ಹೋಗಿದ್ದಾರೆ. ಆತಂಕದಲ್ಲೇ ಜೀವನ ನಡೆಸುವಂತಾಗಿದೆ. ಹಲವರು ಡೆಂಗ್ಯೂನಿಂದ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ತಿಳಿದುಬಂದಿದೆ ಅನಾಹುತ ಸಂಭವಿಸುವ ಮುನ್ನ ಜಿಲ್ಲಾಡಳಿತ ಎಚ್ಚೆತ್ತು, ತಕ್ಷಣವೇ ಕ್ರಮ ಕೈಗೊಳ್ಳಬೇಕು ಎಂದರು.

ಈಗಾಗಲೇ ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿ ಪರಿಸ್ಥಿತಿ ವಿವರಿಸಿದ್ದೇನೆ. ಕೆ.ಸಾಲುಂಡಿಯಲ್ಲಿ ಯುವಕನೊಬ್ಬ ಸಾವನ್ನಪ್ಪಿ, ಹಲವರು ಡೆಂಗ್ಯೂನಿಂದ ಬಳಲಿದ್ದರೂ ಮೈಸೂರು ಮಹಾನಗರ ಪಾಲಿಕೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಯಾವುದೇ ಮುನ್ನೆಚ್ಚರಿಕೆ ವಹಿಸಿಲ್ಲ. ಈ ಕೂಡಲೇ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಆರೋಗ್ಯಾಧಿಕಾರಿಗಳು ಕ್ರಮ ಕೈಗೊಳ್ಳದಿದ್ದರೆ ಪರಿಸ್ಥಿತಿ ಕೈಮೀರಿ ಹೋಗುತ್ತದೆ. ಜಿಲ್ಲಾಧಿಕಾರಿಗಳು, ಜಿಲ್ಲಾ ಆರೋಗ್ಯಾಧಿಕಾರಿ, ನಗರಪಾಲಿಕೆ ಹಾಗೂ ಮುಡಾ ಅದರ ಹೊಣೆ ಹೊರಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಹಾಗೆಯೇ ಹಳೇ ಕೆಸರೆಯಲ್ಲಿ ಕ್ಲೋರಿನ್ ಸೋರಿಕೆಯಾಗಿ 40ಕ್ಕೂ ಹೆಚ್ಚು ಮಂದಿ ಅಸ್ವಸ್ಥರಾಗಿದ್ದಾರೆ. ಇಂತಹ ಸಮಾಜ ಬಾಹಿರ ಕೃತ್ಯಗಳು ವ್ಯಾಪಕವಾಗಿ ನಡೆಯುತ್ತಿವೆ. ಪೊಲೀಸರು, ಆರೋಗ್ಯ ಇಲಾಖೆ ಅಧಿಕಾರಿಗಳು ಇದರ ಬಗ್ಗೆ ಕಿಂಚಿತ್ತೂ ನಿಗಾ ವಹಿಸಿಲ್ಲ. ಕಂಡೂ ಕಾಣದಂತೆ ವರ್ತಿಸುವ ಮೂಲಕ ಜನರ ಜೀವದ ಬಗ್ಗೆ ನಿರ್ಲಕ್ಷ ವಹಿಸಿದ್ದಾರೆ. ಮುಂದೊಂದು ದಿನ ಭಾರಿ ಅನಾಹುತ ಸಂಭವಿಸುವ ಮುನ್ನ ಕಠಿಣ ಕ್ರಮ ಕೈಗೊಳ್ಳಬೇಕಿದೆ ಎಂದು ಅವರು ಆಗ್ರಹಿಸಿದ್ದಾರೆ.

ಯುವಕನಿಂದ 'ವಿಡಿಯೋ' ಬ್ಲಾಕ್‌ಮೇಲ್!: ಒಂದೇ ಕುಟುಂಬದ ನಾಲ್ವರು ವಿಷ ಸೇವನೆ

●ಒಬ್ಬರು ಸಾವು, ಉಳಿದ ಮೂವರ ಸ್ಥಿತಿ ಗಂಭೀರ ●ಮಲೆಮಹದೇಶ್ವರಬೆಟ್ಟದಲ್ಲಿ ಮನ ಕಲಕುವ ಪ್ರಕರಣ ●ಕೆ.ಆರ್.ನಗರ ಪೊಲೀಸರಿಗೆ ಈ ಬಗ್ಗೆ ದೂರು ನೀಡಿದರೂ ಕ್ರಮ ಕೈಗೊಳ್ಳದ ಆರೋಪ



ಹನೂರು, ಜೂ.8– ಅಪ್ರಾಪ್ತ ಯುವತಿ ವಿಡಿಯೋವನ್ನು ಬಹಿರಂಗ ಪಡಿಸುವುದಾಗಿ ಯುವಕನೋರ್ವ ಬ್ಲಾಕ್‌ಮೇಲ್ ಮಾಡುತ್ತಿದ್ದ ಹಿನ್ನೆಲೆಯಲ್ಲಿ ಮಾದಪ್ಪನ ದರ್ಶನ ಪಡೆದು ಒಂದೇ ಕುಟುಂಬದ ನಾಲ್ವರು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಚಾಮರಾಜನಗರ ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟದ ತಾಳಬೆಟ್ಟದ ಬಳಿ ಶನಿವಾರ ಬೆಳಗ್ಗೆ ನಡೆದಿದ್ದು, ಇವರಲ್ಲಿ ಒಬ್ಬರು ಮೃತಪಟ್ಟಿದ್ದಾರೆ.



ಮಹದೇವನಾಯ್ಕ

ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲೂಕಿನ ಚಂದಗಾಲ ಗ್ರಾಮದ ನಿವಾಸಿ ಮಹದೇವ ನಾಯ್ಕ(65) ಮೃತಪಟ್ಟವರು. ಇವರ ಪತ್ನಿ ಗೌರಮ್ಮ (60), ಮಗಳು ಲೀಲಾವತಿ (45) ಅವರನ್ನು ಚಾಮರಾಜನಗರ ಸಿಮ್ಸ್ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. 17 ವರ್ಷದ ಮೊಮ್ಮಗಳಿಗೆ ಹನೂರು ತಾಲೂಕಿನ ಹೋಲಿಕ್ರಾಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಘಟನೆಯ ವಿವರ: ಈ ನಾಲ್ವರೂ ಶುಕ್ರವಾರ ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟಕ್ಕೆ ಬಂದಿದ್ದು, ಮಹದೇಶ್ವರ ಸ್ವಾಮಿಯ ದರ್ಶನ ಪಡೆದಿದ್ದಾರೆ. ನಂತರ ಶನಿವಾರ ಬೆಳಗ್ಗೆ ಅವರು ಸ್ವ ಗ್ರಾಮಕ್ಕೆ ಬಸ್‌ನಲ್ಲಿ ಮರಳುವಾಗ ಮಾರ್ಗ ಮಧ್ಯೆ ತಾಳಬೆಟ್ಟದಲ್ಲಿ ಬಸ್ ಇಳಿದು ಒಂದು ಕಿಲೋಮೀಟರ್ ಮಹದೇಶ್ವರಬೆಟ್ಟಕ್ಕೆ ತೆರಳುವ ಮಾರ್ಗದಲ್ಲಿ ಕಾಲ್ನಡಿಗೆಯಲ್ಲಿ ಕ್ರಮಿಸಿದ್ದಾರೆ. ಮಾರ್ಗದಲ್ಲಿ ನಾಲ್ವರು ವಿಷ ಸೇವಿಸಿದ್ದಾರೆ. ಪರಿಣಾಮ ಎಲ್ಲರೂ ಅಸ್ವಸ್ಥರಾಗಿದ್ದಾರೆ. ಇದನ್ನು ಗಮನಿಸಿದ ಸ್ಥಳೀಯರು ಪೊಲೀಸರ ಗಮನಕ್ಕೆ ತಂದಿದ್ದಾರೆ.

ಕೂಡಲೆ ಸ್ಥಳಕ್ಕೆ ಧಾವಿಸಿದ ಪೊಲೀಸರು ಇವರ ರಕ್ಷಣೆಗೆ ಮುಂದಾಗಿದ್ದಾರೆ. ಅಷ್ಟರಲ್ಲಾಗಲೇ ಮಹದೇವನಾಯ್ಕ ಸಾವನ್ನಪ್ಪಿದ್ದು, ಉಳಿದವರನ್ನು ಹನೂರು ಬಳಿಯ ಹೋಲಿಕ್ರಾಸ್ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಲಾಗಿದೆ. ಬಳಿಕ ಗೌರಮ್ಮ ಹಾಗೂ ಲೀಲಾವತಿ ಅವರನ್ನು ಕೊಳ್ಳೇಗಾಲ ಉಪವಿಭಾಗ ಆಸ್ಪತ್ರೆಗೆ ದಾಖಲಿಸಿ, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾ ಸಿಮ್ಸ್‌ಗೆ ದಾಖಲಿಸಲಾಗಿದೆ. ಈ ಸಂಬಂಧ ಮಹದೇಶ್ವರಬೆಟ್ಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನನೊಂದು ಆತ್ಮಹತ್ಯೆಗೆ ಯತ್ನ: ಕೆ.ಆರ್.ನಗರ ತಾಲೂಕಿನ ಚಂದಗಾಲು ಗ್ರಾಮದ ನಿವಾಸಿ ಮಹದೇವನಾಯಕರ ಮೊಮ್ಮಗಳನ್ನು, ಪಕ್ಕದ ಚೀರನಹಳ್ಳಿ ಗ್ರಾಮದ ಲೋಕೇಶ್ ಪರಿಚಯ ಮಾಡಿಕೊಂಡು, ಪ್ರೀತಿಸುತ್ತಿದ್ದ ಎನ್ನಲಾಗಿದೆ. ಜೊತೆಗೆ ಆಕೆಯ ಜೊತೆಗಿದ್ದ ವಿಡಿಯೋ ಮಾಡಿಕೊಂಡು ಬ್ಲಾಕ್‌ಮೇಲ್ ಮಾಡುತ್ತಿದ್ದ ಎನ್ನಲಾಗಿದೆ.

> ತಾಳಬೆಟ್ಟದ ಸಮೀಪ ನಾಲ್ವರು ವಿಷ ಸೇವಿಸಿರುವ ಬಗ್ಗೆ ಬೆಳಗ್ಗೆ 11 ಗಂಟೆಗೆ ಮಾಹಿತಿ ಬಂತು. ಒಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ಬಗ್ಗೆ ಅವರ ಸಂಬಂಧಿಕರಿಗೆ ಕರೆ ಮಾಡಿ ವಿಚಾರ ಮುಟ್ಟಿಸಲಾಗಿದೆ. ಯುವಕನೊಬ್ಬ ಕೆಲವು ವೀಡಿಯೋ, ಫೋಟೋ ಇಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಎಂದು ದೂರು ಬಂದಿದೆ. ಈ ಬಗ್ಗೆ ಕುಟುಂಬದವರು ಒಂದೆರಡು ಬಾರಿ ಕೆ.ಆರ್. ನಗರ ಪೊಲೀಸ್ ಠಾಣೆಗೆ ಹೋಗಿದ್ದಾರೆ. ಆದರೂ ಪ್ರಕರಣ ದಾಖಲಿಸಿಕೊಂಡಿಲ್ಲ ಎಂದು ಕುಟುಂಬದವರು ಹೇಳುತ್ತಿದ್ದಾರೆ. ಈ ಬಗ್ಗೆ ಮೈಸೂರಿನ ಪೊಲೀಸ್ ಅಧಿಕಾರಿಗಳ ಗಮನಕ್ಕೆ ತರಲಾಗಿದ್ದು, ಆತ್ಮಹತ್ಯೆಗೆ ಯತ್ನ ಸಂಬಂಧ ಮಹದೇಶ್ವರಬೆಟ್ಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.
>
> – ಪದ್ಮಿನಿ ಸಾಹು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ.

> ಮುಖ್ಯಮಂತ್ರಿ ತವರು ಜಿಲ್ಲೆಯಲ್ಲಿ ಎಲ್ಲರೂ ತಲೆತಗ್ಗಿಸುವ ಅಮಾನವೀಯ ಘಟನೆ ನಡೆದಿದೆ. ಪರಿಶಿಷ್ಟ ಪಂಗಡದ ಹೆಸರೇಳಿಕೊಂಡು ಅಧಿಕಾರಕ್ಕೆ ಬಂದು ಅದೇ ಸಮಾಜದ ಕುಟುಂಬಕ್ಕೆ ರಕ್ಷಣೆ ನೀಡಲಾಗಿಲ್ಲ. ಮುಖ್ಯಮಂತ್ರಿ ಸಂಬಂಧಿ ಎನ್ನುವ ಕಾರಣಕ್ಕೆ ಪೊಲೀಸರು ಅರೆಸ್ಟ್ ಮಾಡದೆ ಬಿಟ್ಟಿದ್ದರಿಂದ ಈ ಅನ್ಯಾಯವಾಗಿದೆ. ಕೂಡಲೇ ಆತನನ್ನು ಅರೆಸ್ಟ್ ಮಾಡಬೇಕು. ದೂರು ಸ್ವೀಕರಿಸದ ಪೊಲೀಸರ ಮೇಲೂ ಕ್ರಮವಾಗಬೇಕು. ಮತ್ತಿಬ್ಬರ ಸ್ಥಿತಿಯೂ ಚಿಂತಾಜನಕವಾಗಿದೆ. ಈ ಬಗ್ಗೆ ಪ್ರತಿಭಟನೆ ನಡೆಸಿ, ನ್ಯಾಯ ಕೇಳುತ್ತೇವೆ.
>
> –ಸಾ.ರಾ.ಮಹೇಶ್, ಮಾಜಿ ಸಚಿವ

ಬುದ್ಧಿಮಾತು ಹೇಳಿದ್ದಕ್ಕೆ ರೊಚ್ಚಿಗೆದ್ದು ಲೋಕೇಶ್, ಮಹದೇವನಾಯಕರ ಮನೆಯ ಬಳಿ ಗಲಾಟೆ ಕೂಡ ಮಾಡಿದ್ದಾನೆ. ಇದರ ಬಗ್ಗೆ ಕೆ.ಆರ್.ನಗರದ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಆದರೆ ಅಲ್ಲಿನ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ. ಗ್ರಾಮದಲ್ಲಿ ತಮಗೆ ಮಾನ ಮರ್ಯಾದೆ ಹೋಯ್ತು, ಜೊತೆಗೆ ಪೊಲೀಸರಿಂದಲೂ ತಮಗೆ ನ್ಯಾಯ ಸಿಗಲಿಲ್ಲ ಎಂದು ತೀವ್ರವಾಗಿ ನೊಂದ ಮಹದೇವನಾಯಕ ತನ್ನ ಪತ್ನಿ, ಮಗಳು ಹಾಗೂ ಮೊಮ್ಮಗಳನ್ನು ಕರೆದುಕೊಂಡು ಬಂದು ತಾಳಬೆಟ್ಟದಲ್ಲಿ ವಿಷ ಸೇವಿಸಿದ್ದಾರೆ.

ಡಾ.ಸಿ.ಎನ್.ಮಂಜುನಾಥ್‌ಗೆ ಉನ್ನತ ಹುದ್ದೆಗಾಗಿ ಡಾ.ಸುಧಾಮೂರ್ತಿ ಲಾಬಿ!

ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಅವರ ಸೇವಾ ಶೈಲಿಗೆ ಮಾರುಹೋಗಿ ಈ ಅವಿರತ ಪ್ರಯತ್ನ



ಬೆಂಗಳೂರು, ಜೂ.8(ಕೆಎಂಶಿ)– ಲೋಕಸಭೆಗೆ ಆಯ್ಕೆಗೊಂಡಿರುವ ಡಾ.ಮಂಜುನಾಥ್ ಅವರಿಗೆ ಕೇಂದ್ರದಲ್ಲಿ ಮಂತ್ರಿ ಇಲ್ಲವೇ ಆರೋಗ್ಯ ಕ್ಷೇತ್ರದಲ್ಲಿ ಒಂದು ಉನ್ನತ ಹುದ್ದೆ ಕೊಡಿಸಲು ಇನ್ಫೋಸಿಸ್ ಫೌಂಡೇಷನ್ ಅಧ್ಯಕ್ಷೆ ಹಾಗೂ ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ ಯತ್ನಿಸುತ್ತಿದ್ದಾರೆ.

ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ಮಂಜುನಾಥ್ ಅವರು ಮಾಡಿರುವ ಸಾಧನೆ ಕೇವಲ ಆ ಸಂಸ್ಥೆಗೆ ಸೀಮಿತವಾಗದೆ, ಇಡೀ ರಾಷ್ಟ್ರಕ್ಕೆ ಆರೋಗ್ಯ ಕ್ಷೇತ್ರದಲ್ಲಿ ಬದಲಾವಣೆ ತರಲು ಅವರಿಗೆ ಒಂದು ಅವಕಾಶ ಮಾಡಿಕೊಡಿ ಎಂಬುದಷ್ಟೇ ಅವರ ಮನವಿ.

ತಮ್ಮ ಇತಿಮಿತಿಯಲ್ಲಿ ಮಂಜುನಾಥ್ ಅವರಿಗೆ ಹುದ್ದೆ ಕೊಡಿಸಲು ಸುಧಾಮೂರ್ತಿ ದೆಹಲಿ ಮಟ್ಟದಲ್ಲಿ ಲಾಬಿ ಮಾಡಿದ್ದಾರೆ. ಕರ್ನಾಟಕದಿಂದ ಕುಮಾರಸ್ವಾಮಿ ಅವರಿಗೆ ನೀಡುತ್ತಿರುವುದರಿಂದ ಸದ್ಯದ ಪರಿಸ್ಥಿತಿಯಲ್ಲಿ ಮಂಜುನಾಥ್ ಅವರಿಗೆ ಮಂತ್ರಿ ಸ್ಥಾನ ದೊರೆಯುವ ಸಾಧ್ಯತೆಯೇ ಇಲ್ಲ.

ಆದರೆ, ಮಂಜುನಾಥ್ ಅವರ ಸೇವೆಯನ್ನು ಕೇಂದ್ರಕ್ಕೆ ಬಳಸಿಕೊಳ್ಳಬೇಕೆಂಬ ಭಾವನೆ ನರೇಂದ್ರಮೋದಿ ಹಾಗೂ ಬಿಜೆಪಿ ಮುಖಂಡರಲ್ಲಿ ಇದೆ.

ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮಂಜುನಾಥ್ ಅವರನ್ನು ಬಳಸಿಕೊಳ್ಳುವ ಉದ್ದೇಶ ಮೋದಿ ಅವರಲ್ಲಿದೆ. ಇದರೊಂದಿಗೆ ಸುಧಾಮೂರ್ತಿ ಅವರ ಪ್ರಯತ್ನವೂ ನಡೆದಿದೆ.

ಬಡ ಮತ್ತು ಮಧ್ಯಮ ವರ್ಗದವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸುಧಾಮೂರ್ತಿ ಅವರು ಮಂಜುನಾಥ್ ಜೊತೆ ಕೈಜೋಡಿಸಿ ಜಯದೇವ ಸಂಸ್ಥೆ ಆವರಣದಲ್ಲೇ ಇನ್ಫೋಸಿಸ್ ಫೌಂಡೇಷನ್ ತುರ್ತು ಚಿಕಿತ್ಸಾ ಘಟಕವನ್ನು ತನ್ನ ಸ್ವಂತ ವೆಚ್ಚದಲ್ಲಿ ಕಟ್ಟಿಸಿಕೊಟ್ಟಿದೆ.

ಅಷ್ಟೇ ಅಲ್ಲ, ಜಯದೇವ ಸಂಸ್ಥೆಯಲ್ಲಿ ಬಡವರ ಚಿಕಿತ್ಸೆಗಾಗಿ ಮೀಸಲಿರುವ ನಿಧಿಗೆ ಪರೋಕ್ಷವಾಗಿ ಸುಧಾಮೂರ್ತಿ ಅವರು ಆರ್ಥಿಕ ಸಹಾಯ ನೀಡುತ್ತಿದ್ದರು. ಇದರಿಂದ ಎಷ್ಟೋ ಮಂದಿ ಬಡವರಿಗೆ ವೈದ್ಯಕೀಯ ಸೌಲಭ್ಯ ದೊರೆತಿದೆ.

ನೂತನ ಸಂಸದರು ಕಾವೇರಿ ನೀರಿನ ಸಮಸ್ಯೆಗೆ ಆದ್ಯತೆ ನೀಡಿ

ಕಾವೇರಿ ಕ್ರಿಯಾ ಸಮಿತಿ ಆಗ್ರಹ



ಕಾವೇರಿ ನೀರಿನ ವಿಚಾರದಲ್ಲಿ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯ ಖಂಡಿಸಿ ಸಹಿ ಸಂಗ್ರಹ ಚಳವಳಿಯಲ್ಲಿ ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಜಯಪ್ರಕಾಶ್(ಜೆಪಿ) ಮಾತನಾಡಿದರು.

ಮೈಸೂರು, ಜೂ.8(ಎಸ್‌ಪಿಎನ್)– ನೂತನವಾಗಿ ಆಯ್ಕೆಯಾಗಿರುವ 28 ಲೋಕಸಭಾ ಸದಸ್ಯರು ಕಾವೇರಿ ನೀರಿನ ಸಮಸ್ಯೆ ಬಗೆಹರಿಸಲು ಮುಂದಿನ ದಿನಗಳಲ್ಲಿ ಆದ್ಯತೆ ನೀಡಬೇಕು ಎಂದು ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್(ಜೆಪಿ) ಒತ್ತಾಯಿಸಿದರು.

ಮೈಸೂರು ದೊಡ್ಡ ಗಡಿಯಾರ ಸಮೀಪ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಕಾವೇರಿ ನೀರಿನ ವಿಚಾರದಲ್ಲಿ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯ ಖಂಡಿಸಿ ಸಹಿ ಸಂಗ್ರಹ ಚಳವಳಿಯಲ್ಲಿ ಭಾಗವಹಿಸಿ ಮಾತನಾಡಿದರು.

ಕಳೆದ 9 ತಿಂಗಳಿಂದ ತಮಿಳುನಾಡಿಗೆ ಕಾವೇರಿ ನೀರು ಹರಿಸುವ ವಿಚಾರದಲ್ಲಿ ರಾಜ್ಯಕ್ಕೆ ಅನ್ಯಾಯವಾಗುತ್ತಿದ್ದರೂ ಕೇಂದ್ರ ಸರ್ಕಾರದಿಂದ ಸೂಕ್ತ ಸ್ಪಂದನೆ ಸಿಕ್ಕಿಲ್ಲ. ಹಾಗಾಗಿ ನೂತನ ಸಂಸದರು ಈ ವಿಚಾರದಲ್ಲಿ ಒಗ್ಗಟ್ಟು ಪ್ರದರ್ಶಿಸಿ, ನ್ಯಾಯ ಒದಗಿಸುವಂತೆ ಮನವಿ ಮಾಡಿದರು.

ಕೆಆರ್‌ಎಸ್ ಡ್ಯಾಂನಲ್ಲಿ ನೀರಿಲ್ಲದಿದ್ದರೂ ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಹರಿಸಿದ್ದರಿಂದ ಲಕ್ಷಾಂತರ ರೈತರ ಬೆಳೆ ಒಣಗಿದೆ. ಇನ್ನು ಕೆಲ ರೈತರು ಬೇಸಿಗೆ ಬೆಳೆ ಬೆಳೆಯಲು ನೀರಿಲ್ಲ. ಇದರಿಂದ ಲಕ್ಷಾಂತರ ರೂ. ನಷ್ಟವಾಗಿದೆ ಎಂದು ಆರೋಪಿಸಿದರು.

ಮೇಕೆದಾಟು ಯೋಜನೆ ಪ್ರಾರಂಭಿಸಲು ಕೇಂದ್ರ ಸರ್ಕಾರ ಆದಷ್ಟು ಬೇಗ ಅನುಮತಿ ನೀಡಬೇಕು. ಇಲ್ಲದಿದ್ದರೆ, ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಈ ವೇಳೆ ಕನ್ನಡ ಪರ ಹೋರಾಟಗಾರ ತೇಜಸ್ ಲೋಕೇಶ್ ಗೌಡ, ಒಕ್ಕಲಿಗರ ಸಂಘದ ಶಿವಲಿಂಗಯ್ಯ, ಮಂಜುಳಾ, ರೈತ ಮುಖಂಡರಾದ ವರಕೋಡು ಕೃಷ್ಣೇಗೌಡ, ಭಾಗ್ಯಮ್ಮ, ಸಿಂಧೂವಳ್ಳಿ ಶಿವಕುಮಾರ್, ನಾಗರಾಜು, ಕೃಷ್ಣಪ್ಪ, ನೇಹ, ಮಹೇಶ್‌ಗೌಡ, ಕಿಶೋರ್‌ಗೌಡ, ಮಹದೇವ, ಅಕ್ಬರ್, ರವೀಶ್, ಹೊನ್ನೇಗೌಡ, ಸೊಪ್ಪಿನ ಕೇರಿ ಚಂದ್ರು, ಅಭಿ, ವಿದ್ಯಾರ್ಥಿ ಕ್ರಿಯಾ ಸಮಿತಿಯ ಸುದರ್ಶನ, ಸಂಜಯ್, ರಾಜೇಶ್, ಕಿರಣ್, ಹೇಮಂತ್, ಪ್ರಜ್ವಲ್, ವಿಷ್ಣು ಹರೀಶ್ ಸೇರಿದಂತೆ ಇತರರಿದ್ದರು.

ಪರಿಸರ ಸಂರಕ್ಷಣೆಯಿಂದಷ್ಟೇ ಮನುಷ್ಯ ಆರೋಗ್ಯವಂತನಾಗಿರಲು ಸಾಧ್ಯ

ಮಾಜಿ ಮೇಯರ್ ಸಂದೇಶ್ ಸ್ವಾಮಿ ಅಭಿಮತ



ಮೈಸೂರು, ಜೂ.8(ಎಂಕೆ)– ಪರಿಸರ ಸಂರಕ್ಷಣೆಯಿಂದ ಮಾತ್ರವೇ ಆರೋಗ್ಯವಂತರಾಗಿ ಬದುಕಲು ಸಾಧ್ಯ ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ತಿಳಿಸಿದರು.

ಡಾ.ಚಂದ್ರಶೇಖರ್ ಫೌಂಡೇಶನ್ ಹಾಗೂ ಕಾವೇರಿ ಸಮೂಹ ಸಂಸ್ಥೆಗಳ ವತಿಯಿಂದ ಏರ್ಪಡಿಸಿದ್ದ ಪರಿಸರ ದಿನಾಚರಣೆಯಲ್ಲಿ, ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕಾಂಕ್ರೀಟ್ ಕಟ್ಟಡಗಳು, ವಾಹನಗಳ ಅಧಿಕ ಬಳಕೆಯಿಂದಾಗಿ ಪರಿಸರ ನಾಶವಾಗುತ್ತಿದೆ. ಎಲ್ಲರು ಆರೋಗ್ಯವಂತರಾಗಿ ಬದುಕಲು ಪರಿಸರ ರಕ್ಷಣೆ ಅತ್ಯಗತ್ಯ ಎಂದರು.

ಭಯ–ಭಕ್ತಿಯಿಂದಾದರು ಪರಿಸರ ಸಂರಕ್ಷಣೆಯಾಗುತ್ತದೆ ಎಂಬ ನಂಬಿಕೆಯಿಂದ ನಮ್ಮ ಪೂರ್ವಜರು ಪರಿಸರವನ್ನು ಆರಾಧಿಸುತ್ತಿದ್ದರು. ಮರ–ಗಿಡಗಳಿಗೆ ದೈವ ಸ್ವರೂಪವನ್ನು ನೀಡುವ ಮೂಲಕ ಸಂರಕ್ಷಣೆಯನ್ನು ಮಾಡುತ್ತಿದ್ದರು. ಎಂದರು.

ಆಧುನಿಕತೆ, ಅಭಿವೃದ್ಧಿ ಹೆಸರಿನಲ್ಲಿ ಗಿಡ–ಮರಗಳನ್ನು ಕಡಿದು ಹಾಕುತ್ತಿರುವುದರಿಂದ ಮಳೆ ಕೊರತೆಯುಂಟಾಗಿದೆ. ವಾತಾವರಣದಲ್ಲಿ ಉಷ್ಣಾಂಶ ಹೆಚ್ಚಿದೆ. ಪ್ರಾಣಿ–ಪಕ್ಷಿಗಳು ಅಳಿವಿನಂಚಿಗೆ ಸಾಗುತ್ತಿವೆ. ಮಾನವ ಸ್ವಾರ್ಥಿಯಾಗಿ ಪರಿಸರ ನಾಶ ಮಾಡುತ್ತಾ ಸಾಗಿದರೆ, ಅದು ಮಾನವನ ಬದುಕಿಗೆ ಅಪಾಯ ತರಲಿದೆ. ಆದ್ದರಿಂದ ಪರಿಸರ ಸಂರಕ್ಷಣೆಗೆ ಹೆಚ್ಚಿನ ಮಹತ್ವ ನೀಡಬೇಕು ಎಂದು ಹೇಳಿದರು. ಕಾವೇರಿ ಸಮೂಹ ಸಂಸ್ಥೆಯ ಅಧ್ಯಕ್ಷ ಡಾ.ಚಂದ್ರಶೇಖರ್, ಡಾ. ಸರಳಾ ಚಂದ್ರಶೇಖರ್, ವಕೀಲ ಪ್ರಭು ಮತ್ತಿತರರಿದ್ದರು.

ಲೋಕಸಭಾ ಕಲಾಪದಲ್ಲಿ ಸ್ಮೋಕ್ ಬಾಂಬ್ ಸ್ಫೋಟಿಸಿದ ಪ್ರಕರಣ
ಆರು ಆರೋಪಿಗಳ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಕೆ

ಮೈಸೂರು, ಜೂ.8(ಬಿಎಲ್‌ಯು)– ರಾಷ್ಟ್ರ ರಾಜಧಾನಿ ದೆಹಲಿಯ ಸಂಸತ್ ಭವನದಲ್ಲಿನ ಲೋಕಸಭೆಯ ಕಲಾಪದಲ್ಲಿ ಸ್ಮೋಕ್ ಬಾಂಬ್ ಸಿಡಿಸಿದ ಮೈಸೂರಿನ ಮನೋರಂಜನ್ ಸೇರಿದಂತೆ ಆರು ಆರೋಪಿಗಳ ವಿರುದ್ಧ ದೆಹಲಿ ಪೊಲೀಸರ ವಿಶೇಷ ತಂಡ ಸಾವಿರ ಪುಟಗಳ ಆರೋಪ ಪಟ್ಟಿ ಸಲ್ಲಿಸಿದೆ.

ದೆಹಲಿಯ ಪಟಿಯಾಲ ಹೌಸ್ ಕೋರ್ಟ್‌ನಲ್ಲಿ ಆರೋಪ ಪಟ್ಟಿ ಸಲ್ಲಿಸಲಾಗಿದೆ. ಪ್ರಕರಣದ ಆರೋಪಿಗಳಾದ ಮೈಸೂರಿನ ಡಿ.ಮನೋರಂಜನ್, ಲಲಿತ್ ಝಾ, ಅಮೋಲ್ ಶಿಂಧೆ, ಮಹೇಶ್ ಕುಮಾವತ್, ಸಾಗರ್ ಶರ್ಮಾ ಮತ್ತು ನೀಲಂ ಆಜಾದ್ ಎಸಗಿರುವ ಕೃತ್ಯದ ಬಗ್ಗೆ ಆರೋಪ ಪಟ್ಟಿ ಸಲ್ಲಿಸಿದ್ದಾರೆ.

ಈ ಸಂಬಂಧ ಪಟಿಯಾಲ ಹೌಸ್ ಕೋರ್ಟ್‌ನ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರಾದ ಹರ್ದೀಪ್ ಕೌರ್ ವಿಚಾರಣೆ ನಡೆಸುತ್ತಿದ್ದು, ಪೊಲೀಸರ ಕಸ್ಟಡಿ ಅವಧಿ ಮುಗಿದಿರುವ ಹಿನ್ನೆಲೆಯಲ್ಲಿ ಎಲ್ಲಾ ಆರು ಆರೋಪಿಗಳನ್ನು ಜುಲೈ 15 ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

2023, ಡಿಸೆಂಬರ್ 13 ರಂದು ಮನೋರಂಜನ್ ಹಾಗೂ ಸಾಗರ್ ಶರ್ಮಾ ಲೋಕಸಭೆಯ ವೀಕ್ಷಕರ ಗ್ಯಾಲರಿ ಪಾಸ್ ಪಡೆದು ಕಲಾಪದೊಳಗೆ ಸ್ಮೋಕ್ ಬಾಂಬ್ ಸ್ಫೋಟಿಸಿ ಅವಾಂತರ ಸೃಷ್ಟಿಸಿದ್ದರು. ಅಂದು ನಡೆದ ಆ ಘಟನೆ ಇಡೀ ದೇಶವನ್ನೆ ತಲ್ಲಣಗೊಳಿಸಿತ್ತು.

ತರುವಾಯ ಈ ಕೃತ್ಯದಲ್ಲಿ ಭಾಗಿಯಾಗಿದ್ದ ಆರು ಆರೋಪಿಗಳ ವಿರುದ್ಧ ಯುಎಪಿಎ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದ ದೆಹಲಿ ಪೊಲೀಸರ ವಿಶೇಷ ತಂಡ ಹಲವು ಆಯಾಮಗಳಲ್ಲಿ ತನಿಖೆ ನಡೆಸಿತ್ತು.

ಈಗ ಪೊಲೀಸರು ಚಾರ್ಜ್ ಶೀಟ್ ಸಲ್ಲಿಸಿದ್ದು ವಿಚಾರಣೆ ಮತ್ತಷ್ಟು ಚುರುಕು ಪಡೆಯಲಿದೆ. ಇದು ದೇಶದ ಭದ್ರತೆಯ ವಿಚಾರವಾದ ಕಾರಣ ಶೀಘ್ರವೇ ನ್ಯಾಯಾಲಯದ ತೀರ್ಪು ಪ್ರಕಟವಾಗುವ ಸಾಧ್ಯತೆ ಇದೆ.

ನಾಳೆ ಶ್ರೀ ಗೋಚಂದ್ರ ಮಾರಮ್ಮದೇವಿ ದೇವಾಲಯ ಉದ್ಘಾಟನೆ

ಮೈಸೂರು, ಜೂ.8(ಆರ್‌ಕೆ)–ದಲಿತ ಅಭಿವೃದ್ಧಿ ಸಂಘದ ವತಿಯಿಂದ ಮೈಸೂರಿನ ಹೈವೇ ಸರ್ಕಲ್ ಬಳಿ ಜೋಡಿ ತೆಂಗಿನಮರ ರಸ್ತೆಯಲ್ಲಿ ನಿರ್ಮಿಸಿರುವ ಶ್ರೀ ಗೋಚಂದ್ರ ಮಾರಮ್ಮದೇವಿ ದೇವಾಲಯ ಜೂನ್ 10ರಂದು ಉದ್ಘಾಟನೆಗೊಳ್ಳಲಿದೆ.




ಸೋಮವಾರ ಬೆಳಗ್ಗೆ 10.30 ಗಂಟೆಗೆ ಅವಧೂತ ದತ್ತ ಪೀಠದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರು ದೇವಾಲಯ ಪ್ರತಿಷ್ಠಾಪಿಸಿ ಮಹಾ ಕುಂಭಾಭಿಷೇಕ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ ಹಾಗೂ ಮಾಜಿ ಮೇಯರ್ ನಾರಾಯಣ ಪಾಲ್ಗೊಳ್ಳುವರು. ನಗರ ಪಾಲಿಕೆ ಮಾಜಿ ಸದಸ್ಯರಾದ ಟಿ.ರಾಮು, ಆರ್.ಶಿವಣ್ಣ, ಆದಿಜಾಂಬವ ಮಹಾ ಸಂಘದ ಅಧ್ಯಕ್ಷ ಗಂಗಣ್ಣ, ಪ್ರಧಾನ ಕಾರ್ಯದರ್ಶಿ ಎಂ.ಡಿ.ವೆಂಕಟೇಶ್, ಮೈಸೂರು ಜಿಲ್ಲಾ ಕಾಂಗ್ರೆಸ್ ಸ್ಥಾಯಿ ಕರ್ಮಚಾರಿ ಘಟಕದ ಅಧ್ಯಕ್ಷ ಎಸ್.ನಾಗರಾಜು ಸೇರಿದಂತೆ ವಿಶೇಷ ಆಹ್ವಾನಿತರಾಗಿ ಭಾಗವಹಿಸಲಿದ್ದಾರೆ.

ಭಾರತ ಆಧ್ಯಾತ್ಮಿಕವಾಗಿ ಸಂಪದ್ಭರಿತ

ಸಂತರ ಸಮಾಗಮ ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ

ಮೈಸೂರು,ಜೂ.8(ಪಿಎಂ)– ಭಾರತವು ಆಧ್ಯಾತ್ಮಿಕವಾಗಿ ಸಂಪದ್ಭರಿತವಾದುದು. ಜನರಿಗೆ ಬೇಕಾದಂತಹ ಆಧ್ಯಾತ್ಮಿಕ ಶಕ್ತಿಯನ್ನು ನೀಡುವುದು ನಮ್ಮ ದೇಶದ ವಿಶೇಷ. ಭಾರತೀಯರ ರಕ್ತದ ಪ್ರತಿ ಕಣ ಕಣದಲ್ಲಿ ದೇವರು ನೆಲೆಸಿದ್ದಾನೆ. ಆ ಕಾರಣಕ್ಕೆ ನಮ್ಮ ದೇಶ ಇಂದಿಗೂ ಜಗತ್ತಿಗೆ ವಿಶೇಷವಾದ ಕೊಡುಗೆ ನೀಡುತ್ತಿದೆ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.



ಮೈಸೂರಿನ ಜೆಪಿ ನಗರದ ವಿಟ್ಠಲಧಾಮದ ಆವರಣದಲ್ಲಿ ಶನಿವಾರ ನಡೆದ ಸಂತರ ಸಮಾಗಮ ಕಾರ್ಯಕ್ರಮಕ್ಕೂ ಮುನ್ನ ನೂತನ ರಜತ ಸಿಂಹಾಸನದಲ್ಲಿ ಶ್ರೀ ವ್ಯಾಸರಾಜರ ವಿಗ್ರಹದ ಸಾಂಪ್ರದಾಯಿಕ ದರ್ಬಾರ್ ನಡೆಸಲಾಯಿತು.

> ದೇಶದಲ್ಲಿ ಧರ್ಮ ಜಾಗೃತಿ, ಭಗವಂತನಲ್ಲಿ ಭಕ್ತಿ, ಶ್ರದ್ಧೆ, ಕರ್ತವ್ಯ ಪ್ರಜ್ಞೆ ಪ್ರಸಾರ ಮಾಡುವ ಹೊಣೆಗಾರಿಕೆಯನ್ನು ಧರ್ಮ ಪೀಠಗಳು ನಿಭಾಯಿಸುತ್ತಿವೆ. ಸನಾತನ ಧರ್ಮವು ಮಾನವ ಧರ್ಮವಾಗಿದೆ. ಅದಕ್ಕೆ ಚ್ಯುತಿ ಬಾರದಂತೆ ಪ್ರತಿಯೊಬ್ಬರು ಸಾಮರಸ್ಯ, ಸಹಬಾಳ್ವೆಯಿಂದ ಬದುಕಬೇಕು.
>
> -ಶ್ರೀ 1008 ಶ್ರೀವಿದ್ಯಾಶ್ರೀಶ ತೀರ್ಥ ಸ್ವಾಮೀಜಿ

ಮೈಸೂರಿನ ಜೆಪಿ ನಗರದ ವಿಟ್ಠಲಧಾಮದ ಆವರಣದಲ್ಲಿ ಶ್ರೀವ್ಯಾಸರಾಜ ಮಠ (ಸೋಸಲೆ) ಹಾಗೂ ಶ್ರೀವ್ಯಾಸತೀರ್ಥ ವಿದ್ಯಾಪೀಠದ ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿರುವ ಶ್ರೀಮನ್ ನ್ಯಾಯಸುಧಾ ಮಂಗಳ ಮಹೋತ್ಸವ ಹಾಗೂ ಸೋಸಲೆ ಶ್ರೀವ್ಯಾಸರಾಜ ಮಠದ ಪೀಠಾಧಿಪತಿಗಳಾದ ಶ್ರೀ 1008 ಶ್ರೀವಿದ್ಯಾಶ್ರೀಶತೀರ್ಥ ಸ್ವಾಮೀಜಿಯವರ ಸಹಸ್ರ ಚಂದ್ರದರ್ಶನ ಶಾಂತಿ ಮಹೋತ್ಸವ ಪ್ರಯುಕ್ತ ಶನಿವಾರ ನಡೆದ ಸಂತರ ಸಮಾಗಮ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮಧ್ವಾಚಾರ್ಯರು, ವ್ಯಾಸತೀರ್ಥರು ಮತ್ತು ಜಯತೀರ್ಥರು, ಮಂತ್ರಾಲಯದ ರಾಘವೇಂದ್ರ ಶ್ರೀಗಳು ಆಧ್ಯಾತ್ಮಿಕ ವಲಯದಲ್ಲಿ ಅಗ್ರಗಣ್ಯರು. ಬೇರೆ ಕಡೆಗಳಲ್ಲಿ ದೇವರ ಆರಾಧನೆ ಮಾಡುವ ರೀತಿ–ನೀತಿ ಬೇರೆ. ಆದರೆ ಭಾರತೀಯರು ಭಗವಂತನೊಂದಿಗೆ ವಿಶೇಷ ಸಂಬಂಧ ಹೊಂದಿದ್ದು, ಅದೆಂದರೆ, ಭಾರತೀಯರ ರಕ್ತದ ಪ್ರತಿ ಕಣ ಕಣದಲ್ಲಿ ದೇವರು ನೆಲೆಸಿದ್ದಾನೆ. ನಮ್ಮ ದೇಶ, ಜಗತ್ತಿನಲ್ಲಿ ನಾವೆಲ್ಲರೂ ಭಗವಂತನ ಮಕ್ಕಳು ಎಂಬ ಭಾವನೆ ಬಂದರೆ ಬೇಕಾದಷ್ಟು ಉನ್ನತ ಬದಲಾವಣೆ ಸಾಧ್ಯವಾಗಲಿದೆ. ಮನುಷ್ಯನಿಗೆ ಭಗವಂತನಲ್ಲಿ ನಂಬಿಕೆ–ವಿಶ್ವಾಸ ಇರಬೇಕು. ಆಗ ಭಗವಂತ ಒಲಿಯಲಿದ್ದೇನೆ. ದೇವರಲ್ಲಿ ನಂಬಿಕೆ ವಿಶ್ವಾಸವಿಟ್ಟರೆ ಎಲ್ಲವೂ ಸಾಂಗವಾಗಿ ನಡೆಯಲಿದ್ದು, ದೇವರಲ್ಲಿ ನಂಬಿಕೆ–ಭಕ್ತಿ ಮೂಡಿಸುವ ಪ್ರಯತ್ನವನ್ನು ಮಠಮಾನ್ಯಗಳು ಮಾಡುತ್ತಾ ಬರುತ್ತಿವೆ ಎಂದು ತಿಳಿಸಿದರು.

ಶಂಕರಾಚಾರ್ಯರು, ರಾಮಾನುಜಚಾರ್ಯರು, ಮಧ್ವಾಚಾರ್ಯರು ಈ ದೇಶ ಮತ್ತು ಜಗತ್ತಿಗೆ ಅಪೂರ್ವ ಸಂದೇಶ ಕೊಟ್ಟವರು. ಇವರೆಲ್ಲರೂ ದಕ್ಷಿಣ ಭಾರತದವರು ಎಂಬುದು ಹೆಮ್ಮೆಯ ವಿಚಾರ. ಅದರಲ್ಲೂ ವಿಶೇಷವಾಗಿ ಮಧ್ವಾಚಾರ್ಯರು ಕರ್ನಾಟಕದವರು ಎಂಬುದು ಕನ್ನಡಿಗರಿಗೆ ಹೆಮ್ಮೆಯಾಗಿದೆ ಎಂದರು.

ಪ್ರಬುದ್ಧ ಗ್ರಂಥಗಳನ್ನು ಸಾಮಾನ್ಯರಿಗೂ ತಿಳಿಯುವಂತೆ ಮಾಡಬೇಕೆಂದು ಜಯತೀರ್ಥಚಾರ್ಯರು ನ್ಯಾಯಸುಧಾವನ್ನು ರಚನೆ ಮಾಡಿದರು. ಅದೊಂದು ಪಾಂಡಿತ್ಯದ ಓರೆಗಲ್ಲು ಸಂಸ್ಕೃತದ ದಾರ್ಶನಿಕ ಸಾಹಿತ್ಯದ ಇತಿಹಾಸದಲ್ಲಿ ಮೈಲುಗಲ್ಲು. ಆ ಕಾರಣಕ್ಕಾಗಿ ಜಯತೀರ್ಥಚಾರ್ಯರು ಅಪಾರವಾಗಿ ಗೌರವಿಸಲ್ಪಟ್ಟವರು. ಅಂತಹ ಕೃತಿಯನ್ನು ಸೋಸಲೆ ಶ್ರೀವ್ಯಾಸರಾಜ ಮಠದ ಪೀಠಾಧಿಪತಿಗಳ ಮಾರ್ಗದರ್ಶನದಲ್ಲಿ ಅಧ್ಯಯನ ಮಾಡಿರುವುದು ಮಹತ್ವ ಸಂಗತಿ. ಈ ಅಧ್ಯಯನ ಪೂರ್ಣಗೊಂಡಾಗ ನಡೆಯುವುದೇ ನ್ಯಾಯಸುಧಾ ಮಂಗಳ ಕಾರ್ಯವಾಗಿದೆ. ಅದು ವಿದ್ವಾಂಸರ ಬದುಕಿನಲ್ಲಿ ಅಪೂರ್ವ ಕ್ಷಣ ಎಂದರು.

ಶ್ರೀವ್ಯಾಸರಾಜ ಮಠವು ಕರ್ನಾಟಕದ ಪವಿತ್ರ ಕ್ಷೇತ್ರಗಳಲ್ಲಿ ಒಂದು. ವ್ಯಾಸರಾಜ ತೀರ್ಥರು ಕೃಷ್ಣದೇವರಾಯನಿಗೆ ಗುರುಗಳಾಗಿದ್ದವರು. ಅವರು ಮೈಸೂರಿಗೆ ಸಮೀಪದ ಬನ್ನೂರಿನಲ್ಲಿ ಜನಿಸಿದವರು. ಜೊತೆಗೆ ಸೋಸಲೆಯಲ್ಲಿ ವ್ಯಾಸರಾಜ ಮಠ ಸ್ಥಾಪಿಸಿದರು. ಸೋಸಲೆ ಮಠಕ್ಕೂ ಸುತ್ತೂರು ಮಠಕ್ಕೂ ತುಂಬ ನಿಕಟ ಬಾಂಧವ್ಯವಿದ್ದು, ಅದು ಭೌಗೋಳಿಕವಾಗಿಯೂ ಕೂಡ ಎನ್ನುವುದು ಸಂತಸದ ಸಂಗತಿ ಎಂದು ಹೇಳಿದರು.

ಶ್ರೀ 1008 ಶ್ರೀವಿದ್ಯಾಶ್ರೀಶತೀರ್ಥ ಸ್ವಾಮೀಜಿಯವರು ಪೂರ್ವಶ್ರಾಮದಲ್ಲಿ ಪ್ರಹ್ಲಾದಚಾರ್ಯರು. ಅವರು ಹಲವು ವರ್ಷಗಳು ಪ್ರಾಧ್ಯಾಪಕರಾಗಿ ವಿದ್ವತ್ ಧಾರೆ ಎರೆದವರು. ಮಠದ ಅಧಿಕಾರ ವಹಿಸಿಕೊಂಡ ಬಳಿಕ ವ್ಯಾಸರಾಯರ ರೀತಿಯಲ್ಲೇ ವ್ಯಾಸರಾಜ ಮಠವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಅವರು ವಿದ್ವತ್ ಗಣಿಯಾಗಿದ್ದಾರೆ. ಶ್ರೀಗಳ ಸಹಸ್ರ ಚಂದ್ರದರ್ಶನ ಶಾಂತಿ ಮಹೋತ್ಸವ ನಾಳೆ ನಡೆಯುತ್ತಿದ್ದು, 80 ವರ್ಷ ಬದುಕು ಮಾಡಿದವರಿಗೆ ಇದೊಂದು ಪುಣ್ಯ ವಿಶೇಷ. ಶ್ರೀಗಳು ಹೀಗೆಯೇ ಜ್ಞಾನ ಸುಧೆಯನ್ನು ಹರಿಸುತ್ತಿರಲಿ ಎಂದು ತಿಳಿಸಿದರು.

ಇದಕ್ಕೂ ಮುನ್ನ ಶ್ರೀಸೋದೆ ಮಠದ ಶ್ರೀ ವಿಶ್ವವಲ್ಲಭತೀರ್ಥ ಶ್ರೀಪಾದ ಸ್ವಾಮೀಜಿ ಮಾತನಾಡಿ, ಆಧುನಿಕ ಯುಗದಲ್ಲಿ ಅತೀ ಬುದ್ಧಿವಂತಿಕೆಯ ಭ್ರಮೆಯೇ ಹೆಚ್ಚಾಗಿದೆ. ಆ ಮೂಲಕ ಧರ್ಮ ಶ್ರದ್ಧೆ ಕಡಿಮೆಯಾಗುತ್ತಿದೆ. ಅತಿಯಾದ ಬುದ್ಧಿವಂತಿಕೆ ಇದ್ದು ಶ್ರದ್ಧೆ ಇಲ್ಲವಾದರೆ ಪ್ರಯೋಜನವಿಲ್ಲ. ಧರ್ಮ ಶ್ರದ್ಧೆ ಮತ್ತು ಭಗವಂತನಲ್ಲಿ ನಂಬಿಕೆ ಪಸರಿಸಿದ ಕೀರ್ತಿ ವ್ಯಾಸರಾಜರಿಗೆ ಸಲ್ಲುತ್ತದೆ. ದಾಸ ಸಾಹಿತ್ಯವನ್ನು ಮನೆ ಮನೆಗೆ ತಲುಪಿಸಿದ ಕೀರ್ತಿ ಇವರಿಗೂ ಸಲ್ಲುತ್ತದೆ. ವ್ಯಾಸರಾಜ ಹಾಗೂ ವಾದಿರಾಜರು ಸಮಾಜದಲ್ಲಿ ಮೌಲ್ಯ, ಆದರ್ಶ ಬಿತ್ತಿದವರು ಎಂದು ಹೇಳಿದರು.


ಇದೇ ವೇಳೆ ನವದೆಹಲಿಯ ಕೇಂದ್ರೀಯ ಸಂಸ್ಕೃತ ವಿವಿಯ ಕುಲಪತಿ ಡಾ.ಶ್ರೀನಿವಾಸಾಚಾರ್ಯ ವರಖೇಡಿ ಅವರಿಗೆ 'ಶ್ರೀ ವೇದ ವ್ಯಾಸಾನುಗ್ರಹ ಪ್ರಶಸ್ತಿ', ಮೈಸೂರಿನ ಪೇಜಾವರ ಶ್ರೀಧಾಮದ ಆಡಳಿತಾಧಿಕಾರಿ ಹೆಚ್.ಎಂ.ಗುರುನಾಥ್ ಅವರಿಗೆ 'ಶ್ರೀ ವ್ಯಾಸರಾಜ ಸೇವಾಧುರಂಧರ ಪ್ರಶಸ್ತಿ' ಹಾಗೂ ದಾಸ ಸಾಹಿತ್ಯದ ಸಂಶೋಧಕಿ ವಿದುಷಿ ಡಾ.ಟಿ.ಎನ್.ನಾಗರತ್ನ ಅವರಿಗೆ 'ಶ್ರೀ ಪುರಂದರಾನುಗ್ರಹ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ನೂತನ ರಜತ ಸಿಂಹಾಸನದಲ್ಲಿ ಶ್ರೀ ವ್ಯಾಸರಾಜರ ವಿಗ್ರಹದ ಸಾಂಪ್ರದಾಯಿಕ ದರ್ಬಾರ್ ನಡೆಸಲಾಯಿತು. ಸೋಸಲೆ ಶ್ರೀವ್ಯಾಸರಾಜ ಮಠದ ಪೀಠಾಧಿಪತಿಗಳಾದ ಶ್ರೀ 1008 ಶ್ರೀವಿದ್ಯಾಶ್ರೀಶ ತೀರ್ಥ ಸ್ವಾಮೀಜಿ, ಮಂತ್ರಾಲಯದ ಶ್ರೀರಾಘವೇಂದ್ರಸ್ವಾಮಿಗಳ ಮಠದ ಶ್ರೀಸುಬುಧೇಂದ್ರತೀರ್ಥ ಶ್ರೀಪಾದ ಸ್ವಾಮೀಜಿ, ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದ ಸ್ವಾಮೀಜಿ, ಕಿರಿಯಪಟ್ಟ ಶ್ರೀಬಾಳಗಾರ ಮಠದ ಶ್ರೀ ಅಕ್ಷೋಭ್ಯರಾಮಪ್ರಿಯ ತೀರ್ಥ ಶ್ರೀಪಾದ ಸ್ವಾಮೀಜಿ, ಕನಕಗುರು ಪೀಠದ ಶ್ರೀಕಾಗಿನೆಲೆ ಮಹಾಸಂಸ್ಥಾನದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಶ್ರೀ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಹೈ ಕೋರ್ಟ್ ನ್ಯಾಯಮೂರ್ತಿ ವಿ.ಶ್ರೀಶಾನಂದ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಮತ್ತಿತರರು ವೇದಿಕೆಯಲ್ಲಿದ್ದರು. ಮಾಜಿ ಸಚಿವ ಹೆಚ್.ಎಂ.ರೇವಣ್ಣ ಸೇರಿದಂತೆ ಅನೇಕ ಗಣ್ಯರು ಹಾಗೂ ಅಪಾರ ಭಕ್ತರು ಪಾಲ್ಗೊಂಡಿದ್ದರು.

ಮೈಸೂರು ಮಿತ್ರ ಭಾನುವಾರ 9 ಜೂನ್ 2024

ಮಂಡ್ಯ ಜನತೆಗೆ ಕುಮಾರಸ್ವಾಮಿ ಮೇಲೆ ಭಲೇ ಪ್ರೀತಿ...!

ಎಂ.ಕೆ.ಮೋಹನ್‌ರಾಜ್



ಹೆಚ್.ಡಿ.ಕುಮಾರಸ್ವಾಮಿ

ಮಂಡ್ಯ, ಜೂ.8– ಮಂಡ್ಯ ಲೋಕಸಭಾ ಕ್ಷೇತ್ರದ ಚುನಾವಣೆ ಇತಿಹಾಸದಲ್ಲೇ ದಾಖಲೆಯ ಮತಗಳ ಅಂತರದಿಂದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಗೆಲುವು ದಾಖಲಿಸಿದ್ದು, ಈ ಪರಿ ಮತಗಳ ಅಂತರದಿಂದ ಗೆಲುವನ್ನು ಎದುರಾಳಿ ಕಾಂಗ್ರೆಸ್ ಪಕ್ಷ ಮಾತ್ರವಲ್ಲ ಸ್ವತಃ ಜೆಡಿಎಸ್ ಮತ್ತು ಬಿಜೆಪಿ ನಾಯಕರೇ ನಿರೀಕ್ಷಿಸಿರಲಿಲ್ಲ.

2,84,620 ಮತಗಳ ದಾಖಲೆ ಅಂತರದ ಗೆಲುವಿನೊಂದಿಗೆ ಸಂಸತ್ ಪ್ರವೇಶಿಸಿರುವ ಹೆಚ್.ಡಿ.ಕುಮಾರಸ್ವಾಮಿ ಅವರೇ ಹೇಳುವಂತೆ ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಗೆಲುವಿನ ನಿರೀಕ್ಷೆ ಇತ್ತು. ಆದರೆ ಈ ಮಟ್ಟದ ಅಂತರದಲ್ಲಿ ಗೆಲ್ಲುತ್ತೇನೆ ಎಂದು ಭಾವಿಸಿರಲಿಲ್ಲ. ಇದಕ್ಕೆ ಮಂಡ್ಯ ಜನರ ಪ್ರೀತಿಯೇ ಕಾರಣ ಎಂದು ಬಣ್ಣಿಸಿದ್ದರು. ಹಾಗಾದರೆ ಕುಮಾರಸ್ವಾಮಿ ಅವರ ಈ ಗೆಲುವಿಗೆ ಪೂರಕವಾದ ಅಂಶಗಳು ಹೀಗಿವೆ.

ಕುಮಾರಸ್ವಾಮಿ ಮೇಲೆ ಮಂಡ್ಯ ಜನಕ್ಕಿದ್ದ ಅಭಿಮಾನ: ರಾಜ್ಯದಲ್ಲಿ ಹಾಸನ, ರಾಮನಗರ, ಮಂಡ್ಯ ಜಿಲ್ಲೆಗಳು ಜೆಡಿಎಸ್‌ನ ಭದ್ರಕೋಟೆಗಳಾದರೂ ಈ 3 ಜಿಲ್ಲೆಗಳ ಪೈಕಿ ಮಂಡ್ಯ ಜಿಲ್ಲೆಯನ್ನು ಜೆಡಿಎಸ್‌ನ ಅಘೋಷಿತ ರಾಜಧಾನಿ ಎನ್ನಬಹುದು. ಏಕೆಂದರೆ ಕಳೆದ 2018ರಲ್ಲಿ ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗುತ್ತಾರೆ ಎಂದು ಜಿಲ್ಲೆಯ ಏಳಕ್ಕೆ ಏಳು ಕ್ಷೇತ್ರದಲ್ಲೂ ಜೆಡಿಎಸ್ ಜಯಭೇರಿ ಬಾರಿಸಿತ್ತು. ಒಕ್ಕಲಿಗ ಸಮುದಾಯವೇ ಬಹು ದೊಡ್ಡದಾಗಿ ಇರುವ ಮಂಡ್ಯದಲ್ಲಿ ಸಮುದಾಯದ ನಾಯಕನೆನಿಸಿಕೊಂಡಿರುವ ಕುಮಾರಸ್ವಾಮಿ ಮೇಲಿನ ಒಲವು ಅವರ ದಾಖಲೆ ಗೆಲುವಿಗೆ ಕಾರಣವಾಗಿದೆ.

2018ರಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಕುಮಾರಸ್ವಾಮಿ ಮಾಡಿದ ಸಾಲಮನ್ನಾ, ಅದಕ್ಕೂ ಮುನ್ನ 2014ರಿಂದ 2018ರವರೆಗೆ ಮಂಡ್ಯ ಜಿಲ್ಲೆಯಲ್ಲಿ ತಾಂಡವವಾಡಿದ ಬರ ಪರಿಸ್ಥಿತಿಯಲ್ಲಿ 400ಕ್ಕೂ ಅಧಿಕ ರೈತರು ಜಿಲ್ಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಾಗ ಸ್ವತಃ ಕುಮಾರಸ್ವಾಮಿ ಮೃತ ರೈತರ ಮನೆಗಳಿಗೆ ಭೇಟಿ ಕೊಟ್ಟು ಕೈಲಾದ ಪರಿಹಾರ ನೀಡಿದ್ದರು. ಅವರ ಈ ಅಂತಃಕರಣ ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿತ್ತು.

ನಿಖಿಲ್ ಸೋಲಿನ ಅನುಕಂಪ: ಕಳೆದ 2019ರ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಅಭ್ಯರ್ಥಿಯಾಗಿ ನಿಖಿಲ್ ಕುಮಾರಸ್ವಾಮಿ ಸ್ಪರ್ಧಿಸಿದ್ದರು. ಆ ವೇಳೆ ನಿಖಿಲ್ ವಿರುದ್ಧ ಬಿಜೆಪಿ, ರೈತ ಸಂಘ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಒಂದಾದ ಪರಿಣಾಮ ನಿಖಿಲ್ ಒಂದೂವರೆ ಲಕ್ಷ ಮತಗಳ ಅಂತರದಿಂದ ಸುಮಲತಾ ವಿರುದ್ಧ ಸೋಲಬೇಕಾಯಿತು. ಕುಮಾರಸ್ವಾಮಿ ಪುತ್ರನ ಸೋಲಿನ ಬಗ್ಗೆ ಜಿಲ್ಲೆಯ ಜನರಲ್ಲಿ ಅನುಕಂಪವಿತ್ತು.

ಜೊತೆಗೆ ಜಿಲ್ಲೆಯ ಪ್ರಮುಖ ಕಾಂಗ್ರೆಸ್ ನಾಯಕರು ನಿಖಿಲ್ ವಿರುದ್ಧ ಚುನಾವಣೆ ಮಾಡಿದ ಬಗ್ಗೆ ಜೆಡಿಎಸ್ ಕಾರ್ಯಕರ್ತರಲ್ಲಿ ಆಕ್ರೋಶವಿತ್ತು. ಪ್ರಸ್ತುತ ಜೆಡಿಎಸ್ ಕಾರ್ಯಕರ್ತರು ನಿಖಿಲ್ ಇಲ್ಲವೇ ಕುಮಾರಸ್ವಾಮಿ ಅವರೇ ಈ ಚುನಾವಣೆಯಲ್ಲಿ ಸ್ಪರ್ಧಿಸಬೇಕೆಂದು ಪಟ್ಟು ಹಿಡಿದಿದ್ದರು. ಕಾರ್ಯಕರ್ತರ ಅಪೇಕ್ಷೆ ಮೇಲೆ ಸ್ಪರ್ಧಿಸಿದ್ದ ಹೆಚ್ಡಿಕೆ ಪರ ಜೆಡಿಎಸ್ ಕಾರ್ಯಕರ್ತರು ಟೊಂಕ ಕಟ್ಟಿ ಹೋರಾಡಿದ್ದು ಗಮನಾರ್ಹ.

ನಿಖಿಲ್, ಸಿಎಸ್ಪಿ ಚುನಾವಣಾ ನೇತೃತ್ವ: ಪ್ರಸ್ತುತ ಲೋಕಸಭಾ ಚುನಾವಣೆಯಲ್ಲಿ ಕುಮಾರಸ್ವಾಮಿ ಹೆಚ್ಚಿನ ಪ್ರಚಾರ ಕೈಗೊಳ್ಳಲಿಲ್ಲ. ಬದಲಿಗೆ ಚುನಾವಣೆ ಹೊಣೆ ಹೊತ್ತಿದ್ದ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹಾಗೂ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಕುಮಾರಸ್ವಾಮಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಹೆಚ್ಡಿಕೆ ನಾಮಪತ್ರ ಸಲ್ಲಿಸುವ ವೇಳೆ ಗೋವಾ ಸಿಎಂ ಪ್ರಮೋದ್ ಸಾವಂತ್ ಮತ್ತು ಬಿ.ಎಸ್.ಯಡಿಯೂರಪ್ಪ ಜೊತೆಗೆ ಬೃಹತ್ ಸಮಾವೇಶದಲ್ಲಿ ಪಾಲ್ಗೊಂಡರೆ, ಮಳವಳ್ಳಿ, ಕೆ.ಆರ್.ಪೇಟೆ, ಪಾಂಡವಪುರದಲ್ಲಿ ವಿಜಯೇಂದ್ರ ಜೊತೆಗೆ, ಕೆ.ಆರ್.ನಗರದಲ್ಲಿ ಯಡಿಯೂರಪ್ಪ ಜೊತೆಗೆ ಮದ್ದೂರು, ಮಂಡ್ಯ, ಶ್ರೀರಂಗಪಟ್ಟಣ, ನಾಗಮಂಗಲದಲ್ಲಿ ಸ್ವತ: ಕುಮಾರಸ್ವಾಮಿ 2 ಗಂಟೆಗಳ ಸಮಾವೇಶದಲ್ಲಿ ಪಾಲ್ಗೊಂಡಿದ್ದು ಬಿಟ್ಟರೆ ಹೋಬಳಿ ಮತ್ತು ಗ್ರಾಮೀಣ ಮಟ್ಟದಲ್ಲಿ ಪ್ರಚಾರದಲ್ಲಿ ಭಾಗಿಯಾಗಿರಲಿಲ್ಲ.

ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಎಲ್ಲಾ ತಾಲೂಕುಗಳು ಮತ್ತು ಹೋಬಳಿ ಮಟ್ಟದಲ್ಲಿ ನಿಖಿಲ್ ಮತ್ತು ಸಿ.ಎಸ್.ಪುಟ್ಟರಾಜು ಪ್ರಚಾರ ನಡೆಸಿದರೆ, ಇವರಿಗೆ ಕ್ಷೇತ್ರದ ಜೆಡಿಎಸ್ ನಾಯಕರಾದ ಡಿ.ಸಿ.ತಮ್ಮಣ್ಣ, ಸಾ.ರಾ.ಮಹೇಶ್, ಹೆಚ್.ಟಿ.ಮಂಜು, ಡಾ.ಕೆ.ಅನ್ನದಾನಿ, ಸುರೇಶ್‌ಗೌಡ, ರವೀಂದ್ರ ಶ್ರೀಕಂಠಯ್ಯ, ಬಿ.ಆರ್.ರಾಮಚಂದ್ರು ಸೇರಿದಂತೆ ಅನೇಕರು ಸಾಥ್ ನೀಡಿದ್ದರು.


ಒಗ್ಗಟ್ಟು ಪ್ರದರ್ಶನ: ನಿಖಿಲ್ ಚುನಾವಣೆಯಲ್ಲಿ ಅತಿಯಾದ ಆತ್ಮವಿಶ್ವಾಸದಿಂದ ಯಡವಟ್ಟು ಮಾಡಿಕೊಂಡಿದ್ದ ಹಿನ್ನೆಲೆಯಲ್ಲಿ ಈ ಬಾರಿ ಜಿಲ್ಲೆಯ ಶಾಸಕರು ಮತ್ತು ಮಾಜಿ ಶಾಸಕರು ಎಚ್ಚರಿಕೆ ಹೆಜ್ಜೆ ಇಟ್ಟು ಒಗ್ಗಟ್ಟು ಪ್ರದರ್ಶನ ಮಾಡಿದರು. ಎಲ್ಲಿಯೂ ಸಮಸ್ಯೆಯಾಗದಂತೆ ಚಾಣಾಕ್ಷತನದಿಂದ ಚುನಾವಣೆ ಎದುರಿಸಿದರೆ ಅತ್ತ ಜೆಡಿಎಸ್ ಕಾರ್ಯಕರ್ತರು ಸಹ ಹುಮ್ಮಸ್ಸಿನಿಂದ ಕುಮಾರಸ್ವಾಮಿ ಗೆಲುವಿಗೆ ಪಣತೊಟ್ಟರು.

ಬಿಜೆಪಿ ಬೆಂಬಲ: ಎಲ್ಲಕ್ಕಿಂತ ಹೆಚ್ಚಾಗಿ ಬಿಜೆಪಿ ಮತ ಬ್ಯಾಂಕ್ ಸಂಪೂರ್ಣ ಜೆಡಿಎಸ್‌ಗೆ ಕಡೆಗೆ ವಾಲಿದ್ದು, ಕುಮಾರಸ್ವಾಮಿಗೆ ಮತ್ತಷ್ಟು ವರದಾನವಾಯಿತು. 2024ರ ಚುನಾವಣೆವರೆಗೆ ಬಿಜೆಪಿಗೆ ಜಿಲ್ಲೆಯಲ್ಲಿ ಅಷ್ಟು ಪ್ರಾಬಲ್ಯ ಇರಲಿಲ್ಲ. ಆದರೆ 2024ರ ಚುನಾವಣೆಯಲ್ಲಿ ಜಿಲ್ಲೆಯ ಏಳು ಕ್ಷೇತ್ರದಲ್ಲೂ ಬಿಜೆಪಿ ನಾಯಕರು ಪ್ರಬಲ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ ಪರಿಣಾಮ ಬಿಜೆಪಿಯ ಮತ ಬ್ಯಾಂಕ್ ಜಿಲ್ಲೆಯಲ್ಲಿ ವೃದ್ಧಿಯಾಗಿತ್ತು.

ಹೆಚ್ಡಿಕೆ ಗೆಲುವಿನ ಅಂತರ ಗಮನಿಸಿದರೆ ಜಿಲ್ಲೆಯ ಎಲ್ಲಾ ಕ್ಷೇತ್ರದಲ್ಲೂ ಮೈತ್ರಿ ಕೈ ಹಿಡಿದಿದೆ. ಆರಂಭದಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿಗೆ ಬಿಜೆಪಿ ಮುಖಂಡರಾದ ಕೆ.ಸಿ.ನಾರಾಯಣಗೌಡ, ಹೆಚ್.ವಿಶ್ವನಾಥ್, ಇಂಡುವಾಳು ಸಚ್ಚಿದಾನಂದ ಅಪಸ್ವರ ಎತ್ತಿದರೂ ನಂತರ ಜೆಡಿಎಸ್ ಜೊತೆಗೆ ಹೊಂದಾಣಿಕೆ ಮಾಡಿಕೊಂಡು ಪ್ರತಿ ಚುನಾವಣಾ ಪ್ರಚಾರ ಸಭೆಗಳಲ್ಲಿ ಭಾಗವಹಿಸುತ್ತಾ ಹೋದರು.

ಕುಮಾರಸ್ವಾಮಿ ಬಗೆಗಿನ ಕೈ ನಾಯಕರ ಕೀಳು ಹೇಳಿಕೆ: ಕುಮಾರಸ್ವಾಮಿ ಅಭ್ಯರ್ಥಿ ಘೋಷಣೆಗೂ ಮುನ್ನ ಚೆನ್ನೈನಲ್ಲಿ ಹೃದಯ ಶಸ್ತ್ರ ಚಿಕಿತ್ಸೆಗೆ ಒಳಗಾದರು. ಈ ಬಗ್ಗೆ ಲಘುವಾಗಿ ಮಾತನಾಡಿದ್ದ ಶಾಸಕ ರಮೇಶ್ ಬಂಡಿಸಿದ್ದೇಗೌಡ ಬಳಿಕ ಕುಮಾರಸ್ವಾಮಿ ಬಳಿ ಕ್ಷಮೆ ಕೋರಿದ್ದರು. ಅಲ್ಲದೇ ಶಾಸಕ ಕದಲೂರು ಉದಯ್ ಸಹ ಹೆಚ್ಡಿಕೆ ಮತ್ತು ಕೆಲ ಜೆಡಿಎಸ್ ಮುಖಂಡರ ಬಗ್ಗೆ ಕೀಳು ಹೇಳಿಕೆಗಳು ಜೆಡಿಎಸ್‌ಗೆ ಲಾಭ ತಂದವು.

ಕಾಂಗ್ರೆಸ್‌ನ ಸ್ಟಾರ್ ಚಂದ್ರು ಎಡವಿದ್ದೆಲ್ಲಿ..?



ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ ಉದ್ಯಮಿ ಸ್ಟಾರ್ ಚಂದ್ರು ಅಲಿಯಾಸ್ ವೆಂಕಟರಮಣೇಗೌಡ ಅಭ್ಯರ್ಥಿ ಎಂದು ಘೋಷಿಸುವ ಮುನ್ನವೇ ಟಿಕೆಟ್ ಖಾತ್ರಿಯಾಗಿತ್ತು. ಆದರೆ ಹೊಸ ಮುಖ ಚಂದ್ರು ಅವರನ್ನು ಮಂಡ್ಯ ಜಿಲ್ಲೆ ಜನ ಸಾರಾಸಗಟಾಗಿ ತಿರಸ್ಕರಿಸಿದರು.

ಜಿಲ್ಲೆಯ 7 ಕ್ಷೇತ್ರಗಳ ಪೈಕಿ 6ರಲ್ಲಿ ಗೆದ್ದಿದ್ದ ಕಾಂಗ್ರೆಸ್ ಕುಮಾರಸ್ವಾಮಿಯಂತಹ ಪ್ರಬಲ ನಾಯಕನ ಎದುರು ಪ್ರಬಲ ಅಭ್ಯರ್ಥಿ ಕಣಕ್ಕಿಳಿಸುವಲ್ಲಿ ವಿಫಲವಾಯಿತು. ಸ್ಟಾರ್ ಚಂದ್ರು ಉದ್ಯಮಿಯಾಗಿ ಆರ್ಥಿಕವಾಗಿ ಚುನಾವಣೆ ಎದುರಿಸಲು ಶಕ್ತಿಯುತವಾಗಿದ್ದರೂ, ಜಿಲ್ಲೆಗೆ ಪರಿಚಯ ಇರಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಚಂದ್ರುಗೆ ನಾಯಕತ್ವದ ಕೊರತೆ ಇತ್ತು. ವೇದಿಕೆ ಮೇಲೆ ನಿಂತರು ನಿರರ್ಗಳವಾಗಿ 5 ನಿಮಿಷ ಮಾತನಾಡುವಷ್ಟು ಸಾಮರ್ಥ್ಯದ ಕೊರತೆ ಎದುರಾಗಿತ್ತು.

ಇದನ್ನು ಸರಿಪಡಿಸುವ ಗೋಜಿಗೆ ಸಚಿವ ಚಲುವರಾಯಸ್ವಾಮಿ ಸೇರಿದಂತೆ ಜಿಲ್ಲೆಯ 'ಕೈ' ಮುಖಂಡರು ಬರಲಿಲ್ಲ. ಕೇವಲ ಅಹಿಂದ ಮತಗಳನ್ನೇ ನಂಬಿಕೊಂಡಿದ್ದ ಕಾಂಗ್ರೆಸ್, ಪ್ರಬಲ ಓಟ್ ಬ್ಯಾಂಕ್ ಒಕ್ಕಲಿಗ ಮತಗಳನ್ನು ಸೆಳೆಯುವಲ್ಲಿ ವಿಫಲರಾದರು. ಎಲ್ಲಕ್ಕಿಂತ ಹೆಚ್ಚಾಗಿ ಸ್ಟಾರ್‌ಚಂದ್ರು ರಾಜಕೀಯಕ್ಕೆ ಹೊಸ ಮುಖರಾಗಿದ್ದರಿಂದ ಜಿಲ್ಲೆಯ ರಾಜಕಾರಣದ ನಾಡಿ ಮಿಡಿತದ ಬಗ್ಗೆ ಅವರಿಗೆ ಸ್ವಲ್ಪವೂ ಅರಿವಿರಲಿಲ್ಲ.

ಜೆಡಿಎಸ್ ಆರಂಭದಿಂದಲೂ ಮಾಜಿ ಸಂಸದ ಸಿ.ಎಸ್.ಪುಟ್ಟರಾಜು ಅವರಿಗೆ ಟಿಕೆಟ್ ಎಂದು ಹೇಳಿತ್ತು. ಆದರೆ ಕಾಂಗ್ರೆಸ್ ಪುಟ್ಟರಾಜು ಅವರೇ ಅಭ್ಯರ್ಥಿಯಾಗಬಹುದೆಂದು ಮುಂಚೆಯೇ ಸ್ಟಾರ್ ಚಂದ್ರು ನಮ್ಮ ಅಭ್ಯರ್ಥಿ ಎಂದು ಘೋಷಿಸಿತು. ಆದರೆ ನಾಮಪತ್ರ ಸಲ್ಲಿಕೆಗೆ ಎರಡ್ಮೂರು ದಿನ ಇರುವಾಗ ಜೆಡಿಎಸ್ ಕುಮಾರಸ್ವಾಮಿ ಅವರ ಹೆಸರನ್ನು ಘೋಷಿಸಿತು. ಆದರೆ ಅಷ್ಟರಲ್ಲಿ ಚಂದ್ರು 2 ಸುತ್ತು ಮಂಡ್ಯ ಪ್ರವಾಸ ಮುಗಿಸಿದ್ದರು.

ದೇವೇಗೌಡರ ಗರಡಿಯಲ್ಲೇ ಪಳಗಿದ ಸಚಿವ ಎನ್.ಚಲುವರಾಯಸ್ವಾಮಿಗೆ ಜೆಡಿಎಸ್‌ನ ಸೂಕ್ಷ್ಮ ರಾಜಕೀಯ ನಡೆ ಬಗ್ಗೆ ಅರಿವಿರಲಿಲ್ಲ. ಕುಮಾರಸ್ವಾಮಿ ಅಭ್ಯರ್ಥಿಯಾಗಬಹುದೆಂದು ಕೈ ನಾಯಕರು ಚಿಂತಿಸಿಯೇ ಇರಲಿಲ್ಲ. ಹೆಚ್ಡಿಕೆ ಮುಂದೆ ಸ್ಟಾರ್ ಚಂದ್ರು ಪ್ರಬಲ ಅಭ್ಯರ್ಥಿಯಂತೆ ಕಾಣಲೇ ಇಲ್ಲ.

ಕಿಡ್ನಿ ವೈಫಲ್ಯ: ಯುವತಿ ಸಾವು



ಭಾರತೀನಗರ, ಜೂ.8– ಕಿಡ್ನಿ ಸಮಸ್ಯೆಯಿಂದ ಬಳಲುತ್ತಿದ್ದ ಯುವತಿ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿರುವ ಬಗ್ಗೆ ಇಲ್ಲಿನ ಅಂಬರಹಳ್ಳಿ ಗ್ರಾಮದಿಂದ ವರದಿಯಾಗಿದೆ.

ಗ್ರಾಮದ ನಿವಾಸಿ ಶಿವರಾಮು, ಮಂಗಳಮ್ಮ ದಂಪತಿ ಪುತ್ರಿ ಎ.ಎಸ್. ಸುಚಿತ್ರ (22) ಸಾವನ್ನಪ್ಪಿದವರು. ಕಳೆದ 2 ವರ್ಷಗಳಿಂದ ಕಿಡ್ನಿ ವೈಫಲ್ಯದಿಂದ ಈಕೆಯನ್ನು ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಶನಿವಾರ ಮಧ್ಯಾಹ್ನ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾಳೆ ಎನ್ನಲಾಗಿದೆ.

ವಿವಿಧ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನ

ಕೆ.ಆರ್.ಪೇಟೆ: ಪಟ್ಟಣದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ 2024–25ನೇ ಸಾಲಿನ ವಿವಿಧ ಕೋರ್ಸ್‌ಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಪ್ರಾಂಶುಪಾಲ ಹೆಚ್.ಎಸ್.ನಾಗರಾಜು ತಿಳಿಸಿದ್ದಾರೆ.

ಪಟ್ಟಣದ ತಮ್ಮ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಸಿವಿಲ್, ಮೆಕ್ಯಾನಿಕಲ್ ಹಾಗೂ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಕೋರ್ಸುಗಳಿಗೆ ಖಾಲಿ ಉಳಿದಿರುವ ಸ್ಥಾನಗಳಿಗೆ ಎಸ್‌ಎಸ್‌ಎಲ್‌ಸಿ ಉತ್ತೀರ್ಣ ಹೊಂದಿರುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಸ್ವೀಕರಿಸಲಾಗುತ್ತಿದೆ. ಹಾಗಾಗಿ ಆಸಕ್ತ ವಿದ್ಯಾರ್ಥಿಗಳು ಜೂ.15ರೊಳಗೆ ಅಗತ್ಯ ದಾಖಲಾತಿಗಳೊಂದಿಗೆ ಪ್ರವೇಶ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಕಚೇರಿ ವೇಳೆ ನೇರವಾಗಿ ಸಂಪರ್ಕಿಸಬಹುದು. ಅಥವಾ ಮೊ: 7259930107 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನನ್ನ ಸೋಲಿನಿಂದ ಶಿಕ್ಷಕರ ಕ್ಷೇತ್ರಕ್ಕೆ ಕಳಂಕ: ಮರಿತಿಬ್ಬೇಗೌಡ



ಸುದ್ದಿಗೋಷ್ಠಿಯಲ್ಲಿ ಮಾಜಿ ಉಪಸಭಾಪತಿ ಮರಿತಿಬ್ಬೇಗೌಡ ಮಾತನಾಡಿದರು.

ಮಂಡ್ಯ, ಜೂ.8– ವಿಧಾನಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ನಾನು ಗೆಲ್ಲುತ್ತೇನೆ ಎಂದುಕೊಂಡಿದ್ದೆ. ಆದರೆ ಶಿಕ್ಷಕರು ಅದನ್ನು ಹುಸಿಗೊಳಿಸಿದ್ದಾರೆ. ನನ್ನ ಸೋಲು ಶಿಕ್ಷಕರ ಕ್ಷೇತ್ರಕ್ಕೆ ಕಳಂಕ ಎಂದು ಪರಾಜಿತ ಅಭ್ಯರ್ಥಿ ಹಾಗೂ ಮಾಜಿ ಉಪಸಭಾಪತಿ ಮರಿತಿಬ್ಬೇಗೌಡ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ತತ್ವ–ಸಿದ್ಧಾಂತ ಹಾಗೂ ಸೈದ್ಧಾಂತಿಕತೆ ಇಟ್ಟುಕೊಂಡೇ ರಾಜಕಾರಣ ಮಾಡಿದ್ದೇನೆ. ಮುಂದೆಯೂ ಮಾಡುತ್ತೇನೆ. ಎಂದೂ ಹಣಕ್ಕಾಗಿ ಅಥವಾ ವೈಯಕ್ತಿಕ ಲಾಭಕ್ಕಾಗಿ ರಾಜಕಾರಣ ಮಾಡುವುದಿಲ್ಲ ಎಂದು ತಿಳಿಸಿದರು.

ಶಿಕ್ಷಕರ ಕ್ಷೇತ್ರದಿಂದಲೇ 4 ಬಾರಿ ಶಿಕ್ಷಕರು ನನ್ನನ್ನು ಗೆಲ್ಲಿಸಿ ವಿಧಾನ ಪರಿಷತ್‌ಗೆ ಕಳುಹಿಸಿದ್ದರು. ಪ್ರಸ್ತುತ ರಾಜ್ಯದಲ್ಲಿ ಆಡಳಿತಾರೂಢ ಕಾಂಗ್ರೆಸ್ ಸರ್ಕಾರ ಇರುವುದರಿಂದ ಶಿಕ್ಷಕರ ದೀರ್ಘಕಾಲಿಕ ಸಮಸ್ಯೆಗಳ ಇತ್ಯರ್ಥಪಡಿಸಲು ಕಾಂಗ್ರೆಸ್‌ನಿಂದಲೇ ಸ್ಪರ್ಧಿಸಿದ್ದ ನನ್ನನ್ನು 5ನೇ ಬಾರಿಯೂ ಆಯ್ಕೆ ಮಾಡುತ್ತಾರೆ ಎಂದು ನಂಬಿದ್ದೆ. ಆದರೆ, ಅದಕ್ಕೆ ಅವಕಾಶ ಮಾಡಿಕೊಟ್ಟಿಲ್ಲ ಎಂದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಮೈಸೂರು, ಚಾಮರಾಜನಗರ, ಹಾಸನ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸ್ಥಳೀಯ ಶಾಸಕರು, ಮಾಜಿ ಶಾಸಕರು ನನ್ನ ಪರವಾಗಿ ಒಗ್ಗೂಡಿ ಕೆಲಸ ಮಾಡಿದರೂ ನಾನು ಗೆಲ್ಲಲು ಆಗಲಿಲ್ಲ. ನನಗೆ ಮತ ನೀಡಿದ ಶಿಕ್ಷಕ ಬಂಧುಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಸೋಲು–ಗೆಲುವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾಮಾನ್ಯ. ಆದರೆ, ಆಡಳಿತ ಪಕ್ಷ ರಾಜ್ಯದಲ್ಲಿದ್ದಾಗ ಸೋಲಿಸಿದ್ದಾರೆ. ಈ ಬಗ್ಗೆ ಶಿಕ್ಷಕರೇ ಆತ್ಮವಿಮರ್ಶೆ ಮಾಡಿಕೊಳ್ಳುವ ಪರಿಸ್ಥಿತಿ ಬಂದಿದೆ. ಈ ಸೋಲಿನಿಂದ ನಾನು ಎದೆಗುಂದದೆ ಮುಂದೆಯೂ ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತೇನೆ. ಕಾಂಗ್ರೆಸ್ ವರಿಷ್ಠರು ವಹಿಸುವ ಜವಾಬ್ದಾರಿಯನ್ನು ಒಬ್ಬ ಸಾಮಾನ್ಯ ಕಾರ್ಯಕರ್ತನಾಗಿ ನಿರ್ವಹಿಸುತ್ತೇನೆ. 4 ಜಿಲ್ಲೆಗಳಲ್ಲಿ ಪಕ್ಷ ಸಂಘಟಿಸಿ, ಮುಂದೆ ಬರುವ ಜಿಪಂ, ತಾಪಂ ಚುನಾವಣೆಗೆ ಶ್ರಮಿಸುತ್ತೇನೆ ಎಂದರು.

ಜೆಡಿಎಸ್ ಬಿಟ್ಟಿದ್ದು ಸೋಲಿಗೆ ಕಾರಣವಲ್ಲ. 3 ವರ್ಷದ ಹಿಂದೆಯೇ ಜೆಡಿಎಸ್‌ನಿಂದ ಅಂತರ ಕಾಯ್ದುಕೊಂಡು ಕಾಂಗ್ರೆಸ್‌ನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದೆ. ಹೆಚ್.ಡಿ.ದೇವೇಗೌಡ ಹಾಗೂ ಹೆಚ್.ಡಿ.ಕುಮಾರಸ್ವಾಮಿ ನನ್ನ ಪರ ಪ್ರಚಾರಕ್ಕೆ ಬಾರದಿದ್ದರೂ ಹಿಂದೆ ಗೆದ್ದಿದ್ದೇನೆ. ಜೆಡಿಎಸ್ ಮತ್ತು ವರಿಷ್ಠರ ಪ್ರಭಾವ ಈ ಚುನಾವಣೆಯಲ್ಲೇನೂ ಪ್ರಭಾವ ಬೀರಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ನಿವೃತ್ತ ಪ್ರಾಂಶುಪಾಲ ಕೀಲಾರ ಜಯರಾಂ, ನಿವೃತ್ತ ಮುಖ್ಯ ಶಿಕ್ಷಕರಾದ ಶಿವರುದ್ರಪ್ಪ, ಗುರುಮೂರ್ತಿ, ನಿವೃತ್ತ ಪ್ರಾಧ್ಯಾಪಕ ಶಂಕರೇಗೌಡ ಹಾಜರಿದ್ದರು.

ಒಂದನೇ ಪುಟದಿಂದ

ಮೋದಿ ಪ್ರಮಾಣ

ಲೋಕಸಭೆಯಲ್ಲಿ ಎನ್‌ಡಿಎ ಒಟ್ಟಾಗಿ 293 ಸ್ಥಾನಗಳನ್ನು ಗೆದ್ದಿವೆ. ಬಹುಮತಕ್ಕೆ 272 ಸದಸ್ಯ ಬಲದ ಅಗತ್ಯವಿದೆ.

ಸಂಪುಟ ಸೇರ್ಪಡೆ: ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ನೂತನ ಸರ್ಕಾರದ ಸಂಪುಟದಲ್ಲಿ ಸ್ಥಾನ ಪಡೆಯುವವರು ಯಾರು ಯಾರು ಎಂಬ ಕೌತುಕ ಮೂಡಿದೆ. ಮೂಲಗಳ ಪ್ರಕಾರ 16 ಸಂಸದರನ್ನು ಹೊಂದಿರುವ ಚಂದ್ರಬಾಬು ನಾಯ್ಡು ಅವರ ಟಿಡಿಪಿ ಪಕ್ಷಕ್ಕೆ ಮೋದಿ ಸಂಪುಟದಲ್ಲಿ 4 ಸಚಿವ ಸ್ಥಾನಗಳು ಸಿಗಲಿವೆ. ಬಿಹಾರ ಸಿಎಂ ನಿತೀಶ್ ಕುಮಾರ್ ಅವರ ಜೆಡಿಯು ಪಕ್ಷಕ್ಕೆ ಮೂರು ಸ್ಥಾನಗಳು ಲಭಿಸಲಿವೆ ಎಂದು ಹೇಳಲಾಗುತ್ತಿದೆ ತೆಲುಗು ದೇಶಂ ಪಕ್ಷದ ನೂತನ ಸಂಸದರಾದ ರಾಮ್ ಮೋಹನ್ ನಾಯ್ಡು, ಹರೀಶ್ ಬಾಲಯೋಗಿ ಮತ್ತು ದಗ್ಗುಮಲ್ಲ ಪ್ರಸಾದ್ ಅವರಿಗೆ ಸಚಿವ ಸ್ಥಾನ ಸಿಗುವುದು ಖಚಿತವಾಗಿದೆ. ಸಂಪುಟದಲ್ಲಿ ಸ್ಥಾನ ಪಡೆಯಲಿರುವ ಟಿಡಿಪಿಯ ಇನ್ನೊಬ್ಬ ಸಂಸದ ಯಾರು ಎನ್ನುವುದು ಸದ್ಯ ಸ್ಪಷ್ಟವಾಗಿಲ್ಲ. ನಿತೀಶ್ ಕುಮಾರ್ ಅವರ ಸಂಯುಕ್ತ ಜನತಾ ದಳವು ಇಬ್ಬರು ಹಿರಿಯ ನಾಯಕರಾದ ಲಲನ್ ಸಿಂಗ್ ಮತ್ತು ರಾಮ್ ನಾಥ್ ಠಾಕೂರ್ ಹೆಸರನ್ನು ಸಚಿವ ಸ್ಥಾನಗಳಿಗೆ ಪ್ರಸ್ತಾಪಿಸಿದೆ. ಲಲನ್ ಸಿಂಗ್ ಅವರು ಬಿಹಾರದ ಮುಂಗೇರ್‌ನಿಂದ ಸಂಸತ್‌ಗೆ ಆಯ್ಕೆಯಾಗಿದ್ದರೆ, ರಾಮ್ ನಾಥ್ ಠಾಕೂರ್ ಅವರು ರಾಜ್ಯಸಭೆ ಸಂಸದರಾಗಿದ್ದಾರೆ. ಅವರು ಇತ್ತೀಚೆಗೆ ನರೇಂದ್ರ ಮೋದಿ ಅವರ 2.0 ಸರ್ಕಾರದಿಂದ ಭಾರತ ರತ್ನಕ್ಕೆ ಭಾಜನರಾದ ಬಿಹಾರದ ಮಾಜಿ ಸಿಎಂ, ದಿವಂಗತ ಕರ್ಪೂರಿ ಠಾಕೂರ್ ಅವರ ಪುತ್ರ.

ರಾಹುಲ್ ಗಾಂಧಿ ವಿಪಕ್ಷ ನಾಯಕ

ಎಂದು ನಿರ್ಣಯ ಕೈಗೊಳ್ಳಲಾಗಿದೆ. ಸಿಡಬ್ಲ್ಯುಸಿ ಸಭೆಯ ಬಳಿಕ ಮಾತನಾಡಿರುವ ಕಾಂಗ್ರೆಸ್ ಸಂಸದರಾದ ಕುಮಾರಿ ಸೆಲ್ಜಾ, ರಾಹುಲ್ ಗಾಂಧಿ ವಿಪಕ್ಷದ ನಾಯಕರಾಗಬೇಕೆಂಬುದು ಸಿಡಬ್ಲ್ಯುಸಿಯ ಇಚ್ಛೆಯಾಗಿದೆ ಎಂದು ಹೇಳಿದ್ದಾರೆ. ಕೆಸಿ ವೇಣುಗೋಪಾಲ್ ಮಾತನಾಡಿ, ವಿಪಕ್ಷ ನಾಯಕರಾಗುವಂತೆ ಸಿಡಬ್ಲ್ಯುಸಿ ಸಭೆ ಸರ್ವಾನುಮತದಿಂದ ರಾಹುಲ್ ಗಾಂಧಿ ಅವರಲ್ಲಿ ಮನವಿ ಮಾಡಿದೆ. ಸಿಡಬ್ಲ್ಯುಸಿ ನಿರ್ಣಯ ಚುನಾವಣಾ ಪ್ರಚಾರದಲ್ಲಿ ರಾಹುಲ್ ಗಾಂಧಿಯವರ ಪ್ರಯತ್ನಗಳನ್ನು ಶ್ಲಾಘಿಸಿದೆ. ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ವಿನ್ಯಾಸಗೊಳಿಸಿ, ಮುನ್ನಡೆಸಿದ ಭಾರತ್ ಜೋಡೋ ಯಾತ್ರೆ ಮತ್ತು ಭಾರತ್ ಜೋಡೋ ನ್ಯಾಯ್ ಯಾತ್ರೆ ನಮ್ಮ ರಾಷ್ಟ್ರದ ರಾಜಕೀಯದಲ್ಲಿ ಐತಿಹಾಸಿಕ ತಿರುವುಗಳು ಮತ್ತು ಭರವಸೆಯನ್ನು ಹುಟ್ಟುಹಾಕಿದವು. ಮತ್ತು ನಮ್ಮ ಲಕ್ಷಾಂತರ ಕಾರ್ಯಕರ್ತರು, ನಮ್ಮ ಕೋಟಿಗಟ್ಟಲೆ ಮತದಾರರಲ್ಲಿ ವಿಶ್ವಾಸ ಹೆಚ್ಚಿಸಿತು ಎಂದು ಹೇಳಿದ್ದಾರೆ. ಇತರ ಯಾವುದೇ ವ್ಯಕ್ತಿಗಳಿಗಿಂತ ಹೆಚ್ಚಾಗಿ ರಾಹುಲ್ ಗಾಂಧಿಯವರ ಚುನಾವಣಾ ಪ್ರಚಾರ ಏಕ ಮನಸ್ಸು, ತೀಕ್ಷ್ಣ ಮತ್ತು ಮೊನಚಾಗಿತ್ತು ಈ ಪ್ರಚಾರ ನಮ್ಮ ಗಣರಾಜ್ಯದ ಸಂವಿಧಾನದ ರಕ್ಷಣೆಯನ್ನು ಚುನಾವಣೆಯ ಪ್ರಮುಖ ವಿಷಯವಾಯಿತು ಎಂದು ಹೇಳಿದ್ದಾರೆ.

ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷರಾಗಿ ಸೋನಿಯಾ ಗಾಂಧಿ ಮರು ಆಯ್ಕೆ



ನವದೆಹಲಿ: ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷರಾಗಿ ಸೋನಿಯಾ ಗಾಂಧಿ ಅವರನ್ನು ಶನಿವಾರ ಸರ್ವಾನುಮತದಿಂದ ಮರು ಆಯ್ಕೆ ಮಾಡಲಾಗಿದೆ ಎಂದು ಪಕ್ಷದ ಮುಖಂಡರು ತಿಳಿಸಿದ್ದಾರೆ. ಲೋಕಸಭಾ ಚುನಾವಣೆ ಫಲಿತಾಂಶ ಹಾಗೂ ಸಂಸದೀಯ ಪಕ್ಷದ ನಾಯಕರ ಆಯ್ಕೆ ವಿಚಾರವಾಗಿ ಚರ್ಚಿಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಹಾಗೂ ಸಂಸದೀಯ ಪಕ್ಷದ (ಸಿಪಿಪಿ) ಸಭೆಗಳು ಶನಿವಾರ ನಡೆದವು. ಸಭೆಯಲ್ಲಿ, ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಂಸದೀಯ ಪಕ್ಷದ ಅಧ್ಯಕ್ಷರಾಗಿ ಸೋನಿಯಾ ಗಾಂಧಿ ಅವರ ಹೆಸರನ್ನು ಪ್ರಸ್ತಾಪಿಸಿದರು. ಗೌರವ್ ಗೊಗೊಯ್, ಸುಧಾಕರನ್ ಮತ್ತು ತಾರಿಕ್ ಅನ್ವರ್ ಈ ಪ್ರಸ್ತಾಪವನ್ನು ಅನುಮೋದಿಸಿದರು. 77 ವರ್ಷದ ಸೋನಿಯಾ ಗಾಂಧಿ ಕಳೆದ ಫೆಬ್ರವರಿಯಲ್ಲಿ ರಾಜಸ್ಥಾನದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ.

ಇದಕ್ಕೂ ಮುನ್ನ, ರಾಹುಲ್ ಗಾಂಧಿ ಅವರನ್ನು ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕನ ಸ್ಥಾನ ವಹಿಸಿಕೊಳ್ಳುವಂತೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸರ್ವಾನುಮತದಿಂದ ಒತ್ತಾಯಿಸಿತು. ಈ ಬಗ್ಗೆ ಶೀಘ್ರ ನಿರ್ಧಾರ ತೆಗೆದುಕೊಳ್ಳುವುದಾಗಿ ರಾಹುಲ್ ಗಾಂಧಿ ಹೇಳಿದ್ದಾರೆ ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

ದೇಶದ ಮತದಾರರು ಪ್ರಜಾಪ್ರಭುತ್ವ, ಸಂವಿಧಾನ ಉಳಿಸುವ ಒಳ್ಳೆಯ ತೀರ್ಮಾನ ಕೈಗೊಂಡಿದ್ದಾರೆ

ಮೈಸೂರಿನಲ್ಲಿ ಬೂಸಾ ಚಳವಳಿ–50 ಒಂದು ಅವಲೋಕನ ಮತ್ತು ಸಂವಾದ ಕಾರ್ಯಕ್ರಮದಲ್ಲಿ ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಅಭಿಪ್ರಾಯ



ಮೈಸೂರಿನ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಶನಿವಾರ ಒಡಲು ಟ್ರಸ್ಟ್ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಸಂಶೋಧಕರ ಸಂಘ ಸಂಯುಕ್ತವಾಗಿ ಬೂಸಾ ಚಳವಳಿ–50 ಒಂದು ಅವಲೋಕನ ಮತ್ತು ಸಂವಾದ ಕಾರ್ಯಕ್ರಮ ಆಯೋಜಿಸಿತ್ತು.

ಮೈಸೂರು, ಜೂ.8(ಬಿಎಲ್‌ಯು)– ಲೋಕಸಭಾ ಚುನಾವಣೆಯಲ್ಲಿ ದೇಶದ ಜನರು ಮತದಾನದ ಮೂಲಕ ಪ್ರಜಾಪ್ರಭುತ್ವ ಹಾಗೂ ಸಂವಿಧಾನ ಉಳಿಸುವ ಒಳ್ಳೆಯ ತೀರ್ಮಾನ ಕೈಗೊಂಡಿದ್ದಾರೆ ಎಂದು ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಇಂದು ಒಡಲು ಟ್ರಸ್ಟ್ ಹಾಗೂ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಸಂಶೋಧಕರ ಸಂಘ ಸಂಯುಕ್ತವಾಗಿ ಆಯೋಜಿಸಿದ್ದ ಬೂಸಾ ಚಳವಳಿ –50 ಒಂದು ಅವಲೋಕನ ಮತ್ತು ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದ ಮತದಾರರು ಸೂಕ್ತ ತೀರ್ಮಾನ ಕೈಗೊಳ್ಳುವ ಮೂಲಕ ಕೊನೆಗೂ ಸಂವಿಧಾನ ರಕ್ಷಣೆ ಮಾಡಿದ್ದಾರೆ ಎಂದರು.

ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಸ್ಪಷ್ಟ ಬಹುಮತ ಗಳಿಸದಿರುವುದನ್ನು ಪರೋಕ್ಷವಾಗಿ ಉಲ್ಲೇಖಿಸಿದ ಅಗ್ರಹಾರ ಕೃಷ್ಣಮೂರ್ತಿ, ಬಿಜೆಪಿಗೆ ಸ್ಪಷ್ಟ ಬಹುಮತ ನೀಡದೆ ಮತದಾರರು ಒಳ್ಳೆಯ ತೀರ್ಮಾನ ಮಾಡಿದ್ದಾರೆ ಎಂದು ಸೂಚ್ಯವಾಗಿ ಹೇಳಿದರು.

ಬಸವಲಿಂಗಪ್ಪ ಅವರ ಬೂಸಾ ಚಳವಳಿಯ ಅಂದಿನ ಘಟನೆಗಳನ್ನು ಮೆಲುಕು ಹಾಕಿದ ಅಗ್ರಹಾರ ಕೃಷ್ಣಮೂರ್ತಿ, ಕನ್ನಡ ಸಾಹಿತ್ಯದ ಬಗ್ಗೆ ಬಸವಲಿಂಗಪ್ಪ ನೀಡಿದ ಹೇಳಿಕೆ ವಿರುದ್ಧ ದೊಡ್ಡ ಚಳವಳಿ ರೂಪುಗೊಂಡಿತು. ಬಸವಲಿಂಗಪ್ಪ ವಿರುದ್ಧ ವ್ಯಾಪಕ ಆಕ್ರೋಶ ವ್ಯಕ್ತವಾಯಿತು. ಆ ವೇಳೆ ಬೆಂಗಳೂರಿನಲ್ಲಿ ಸಿದ್ದಲಿಂಗಯ್ಯ ಸೇರಿದಂತೆ ನಾವೆಲ್ಲಾ ಬಸವಲಿಂಗಪ್ಪ ಅವರ ಬೆನ್ನಿಗೆ ನಿಂತೆವು ಎಂದರು.

ಬಸವಲಿಂಗಪ್ಪ ಅವರನ್ನು ಬೆಂಬಲಿಸಿ ಕರಪತ್ರ ಹಂಚಿದೆವು. ಆ ವೇಳೆ ಬಸವಲಿಂಗಪ್ಪ ವಿರೋಧಿಗಳು ನಮ್ಮನ್ನು ಗುರಿ ಮಾಡಿದರು. ಬಸವಲಿಂಗಪ್ಪ ಪರ ನಡೆಸಿದ ಸಭೆಗಳ ಮೇಲೆ ದಾಳಿ ಮಾಡಿದರು. ನಮ್ಮ ಮೇಲೆ ಹಲ್ಲೆ ನಡೆಸಿದರು. ನಮ್ಮನ್ನು ಹುಡುಕಿ ಹುಡುಕಿ ಹೊಡೆಯಲಾರಂಭಿಸಿದರು ಎಂದು ಹಿಂದಿನ ಘಟನೆಯನ್ನು ನೆನಪಿಸಿಕೊಂಡರು.

ಕನ್ನಡ ಸಾಹಿತ್ಯದಲ್ಲೇನಿದೆ ಬೂಸಾ ಎಂಬ ಬಸವಲಿಂಗಪ್ಪ ನೀಡಿದ ಹೇಳಿಕೆಯಿಂದ ಪರ ಹಾಗೂ ವಿರುದ್ಧ ದನಿಗಳು ಮೊಳಗಿತು. ಬಸವಲಿಂಗಪ್ಪ ಪರ ನಿಂತವರು ಜೀವ ಭಯದಲ್ಲಿ ಓಡಾಡುವ ಪರಿಸ್ಥಿತಿ ಎದುರಾಯಿತು. ಸಾಹಿತ್ಯದ ದೃಷ್ಟಿಯಿಂದ ಬಸವಲಿಂಗಪ್ಪ ನೀಡಿದ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಯಿತು. ಭಾಷೆಯ ವಿಚಾರದಲ್ಲಿ ನೀಡಿದ ಹೇಳಿಕೆ ಜಾತಿಯ ಬಣ್ಣಕ್ಕೆ ತಿರುಗಿತು ಎಂದು ಹೇಳಿದರು.

ತಲೆ ಮೇಲೆ ಮಲ ಹೊರುವ ಪದ್ಧತಿ ವಿರುದ್ಧ ಬಸವಲಿಂಗಪ್ಪ ದೇಶದಲ್ಲಿ ಮೊದಲ ಬಾರಿಗೆ ದನಿ ಎತ್ತಿದ್ದರು. ಅಮಾನವೀಯ ಪದ್ಧತಿಯನ್ನು ರದ್ದು ಮಾಡುವಂತೆ ಆಗ್ರಹಿಸಿದರು. ಸಚಿವರಾಗಿದ್ದ ಬಸವಲಿಂಗಪ್ಪ ಯಾವುದೇ ಭ್ರಷ್ಟಾಚಾರ ಹಗರಣಗಳಿಗೆ ಸಿಲುಕದೆ ಕೆಲಸ ಮಾಡುತ್ತಿದ್ದರು. ಈ ವೇಳೆ ಬಸವಲಿಂಗಪ್ಪ ಅವರ ಯಾವುದಾದರೊಂದು ಲೋಪ ಹುಡುಕಿ ಸಿಡಿದೇಳಲು ಮೇಲ್ಜಾತಿಯವರು ಸಮಯ ಕಾಯುತ್ತಿದ್ದರು. ಆ ವೇಳೆ ಕನ್ನಡ ಸಾಹಿತ್ಯದ ಬಗ್ಗೆ ಬಸವಲಿಂಗಪ್ಪ ನೀಡಿದ್ದ ಹೇಳಿಕೆಗೆ ಬೇರೆ ರೂಪ ಕೊಟ್ಟು ಅವರ ವಿರುದ್ಧ ಸಮರ ಸಾರಿದರು ಎಂದರು.

ಬಸವಲಿಂಗಪ್ಪ ನೀಡಿದ್ದ ಹೇಳಿಕೆಗೆ ಬೂಸಾ ಚಳವಳಿ ಎಂದೇ ನಾಮಕರಣ ಮಾಡಲಾಯಿತು. ಕರ್ನಾಟಕ ರಾಜಕೀಯ ಹಾಗೂ ಸಾಂಸ್ಕೃತಿಕತೆ ತಲ್ಲಣಗೊಂಡಿತು. ದಲಿತ ಚಳವಳಿ ಅಂದು ಜಾಗೃತವಾಗಿತ್ತು. ಬೂಸಾ ಚಳವಳಿ ಮೂಲಕ ದಲಿತ ಚಳವಳಿಗೆ ಹೊಸ ರೂಪ, ದಿಕ್ಕು ದೊರೆಯಿತು. ದಲಿತ ಚಳವಳಿ ಮತ್ತಷ್ಟು ಕಾವು ಪಡೆಯಲು ಸ್ಪಷ್ಟ ರೂಪ ನೀಡಿತು ಎಂದು ಅಗ್ರಹಾರ ಕೃಷ್ಣಮೂರ್ತಿ ಹೇಳಿದರು.

ಈ ವೇಳೆ ಮಾತನಾಡಿದ ಲೇಖಕ ಇಂದೂಧರ ಹೊನ್ನಾಪುರ, ಲೋಕಸಭಾ ಚುನಾವಣೆಯಲ್ಲಿ ದೇಶದ ಜನರು ಒಳ್ಳೆಯ ತೀರ್ಮಾನ ಮಾಡಿದ್ದಾರೆ. ಸಂಕಷ್ಟಕ್ಕೆ ಸಿಲುಕಿದ ಸಂದರ್ಭದಲ್ಲಿ ಭಾರತವನ್ನು ಪಾರು ಮಾಡಿದ್ದಾರೆ. ಜೂನ್ 4ರಂದು ಪ್ರಕಟವಾದ ಫಲಿತಾಂಶ ಬೇರೆಯದೆ ಆಗಿದ್ದರೆ ಇವತ್ತು ನಾವು ಸಭೆಯನ್ನೆ ಮಾಡಲು ಸಾಧ್ಯವಾಗುತ್ತಿರಲಿಲ್ಲ ಎಂದರು. ಒಡಲು ಟಸ್ಟ್‌ನ ಆರ್.ಎಸ್.ದೊಡ್ಡಣ್ಣ, ಕೆ.ಎನ್.ಶಿವಲಿಂಗಯ್ಯ, ರಾಜೇಶ್ ಚಾಕನಹಳ್ಳಿ, ರೈತ ಸಂಘದ ಮುಖಂಡರಾದ ಸುನಂದ ಜಯರಾಂ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬೂಸಾ ಚಳವಳಿ ಆರಂಭಕ್ಕೆ ಮೈಸೂರು ಕಾರಣ

ಕಳೆದ 50 ವರ್ಷದ ಹಿಂದೆ ನಡೆದ ಬೂಸಾ ಚಳವಳಿ ಬಗ್ಗೆ ಇಂದಿನ ಪೀಳಿಗೆಯವರಿಗೆ ಮಾಹಿತಿ ಇಲ್ಲ. ಕರ್ನಾಟಕದ ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ತಲ್ಲಣ ಉಂಟು ಮಾಡಿ ದಲಿತ ಚಳವಳಿಗೆ ಹೊಸ ರೂಪ ನೀಡಿದ ಬೂಸಾ ಚಳವಳಿ ಇವತ್ತಿಗೂ ಸದ್ದು ಮಾಡುತ್ತಿದೆ. ಮೈಸೂರು ವಿಶ್ವವಿದ್ಯಾನಿಲಯದ ಶತಮಾನೋತ್ಸವ ಭವನದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಥಾಟ್ಸ್ ಸಂಸ್ಥೆ ನವೆಂಬರ್ 19, 1973 ರಲ್ಲಿ ಹೊಸ ಅಲೆಗಳು ಕುರಿತ ವಿಚಾರ ಸಂಕಿರಣ ಏರ್ಪಡಿಸಿತ್ತು. ಮುಖ್ಯಮಂತ್ರಿ ಡಿ.ದೇವರಾಜ್ ಅರಸ್ ಸಚಿವ ಸಂಪುಟದಲ್ಲಿ ಪೌರಾಡಳಿತ ಮತ್ತು ವಸತಿ ಸಚಿವರಾಗಿದ್ದ ಬಿ.ಬಸವಲಿಂಗಯ್ಯ ಭಾಗವಹಿಸಿದ್ದರು. ವಿಚಾರ ಸಂಕಿರಣದಲ್ಲಿ ಲಾಯರ್ ಸಂಜೀವಯ್ಯ ಇಂಗ್ಲಿಷ್‌ನಲ್ಲಿ ಭಾಷಣ ಮಾಡಲು ಆರಂಭಿಸಿದರು. ಸಂಜೀವಯ್ಯ ಅವರ ಇಂಗ್ಲಿಷ್ ಭಾಷಣಕ್ಕೆ ಕೆಲವು ಸಭಿಕರು ತೀವ್ರ ವಿರೋಧ ವ್ಯಕ್ತಪಡಿಸಿದರು. ಕನ್ನಡ...ಕನ್ನಡ... ಎಂದು ಕೂಗಿದರೂ ತಲೆ ಕೆಡಿಸಿಕೊಳ್ಳದ ಸಂಜೀವಯ್ಯ ಇಂಗ್ಲಿಷ್‌ನಲ್ಲೇ ಭಾಷಣ ಮುಂದುವರೆಸಿದರು. ಆದರೆ ಅದಕ್ಕೆ ತೀವ್ರ ವಿರೋಧ ವ್ಯಕ್ತವಾಗುತ್ತಲೆ ಇತ್ತು. ಆ ಸಂದರ್ಭದಲ್ಲಿ ಮಧ್ಯ ಪ್ರವೇಶಿಸಿದ ಬಸವಲಿಂಗಯ್ಯ, ಕನ್ನಡದಲ್ಲೇನಿದೆ...ಅದರಲ್ಲಿರುವುದು ಬಹುಪಾಲು ಬೂಸಾ... ಎಂದು ಹೇಳಿದರು. ಬಸವಲಿಂಗಪ್ಪ ನೀಡಿದ ಆ ಹೇಳಿಕೆಗೆ ವ್ಯಾಪಕ ವಿರೋಧ ವ್ಯಕ್ತವಾಯಿತು. ಕೆಲವರು ಬಸವಲಿಂಗಪ್ಪ ಪರ ನಿಂತರೆ, ಕೆಲವರು ವಿರುದ್ಧವಾಗಿ ನಿಂತರು. ಭಾಷೆ ಕುರಿತು ಬಸವಲಿಂಗಪ್ಪ ನೀಡಿದ ಹೇಳಿಕೆ ಕ್ರಮೇಣ ಜಾತಿ ಜಗಳವಾಗಿ ರೂಪುಗೊಂಡಿತು.

ದೆಹಲಿಯಲ್ಲಿ ನೂತನ ಸಂಸದರಿಗೆ ಮಾಜಿ ಸಂಸದ ಪ್ರತಾಪ್‌ಸಿಂಹ ಅವರಿಂದ ಅಭಿನಂದನೆ





ದೆಹಲಿಯಲ್ಲಿ ನೂತನ ಸಂಸದರೂ ಆದ ಮಾಜಿ ಸಿಎಂ ಕುಮಾರಸ್ವಾಮಿ ಹಾಗೂ ಮಾಜಿ ಸಚಿವ ವಿ.ಸೋಮಣ್ಣ ಅವರನ್ನು ಮಾಜಿ ಸಂಸದ ಪ್ರತಾಪ್ ಸಿಂಹ ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ಜೆಡಿಎಸ್ ಹಿರಿಯ ನಾಯಕರೂ ಆದ ಮಾಜಿ ಸಚಿವ ಸಾ.ರಾ.ಮಹೇಶ್, ಗುರುಮಿಟ್ಕಲ್ ಶಾಸಕ ಶರಣ್‌ಗೌಡ, ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಸಚಿವ ಬಂಡೆಪ್ಪ ಕಾಶಪ್ಪನವರ್, ಮಾಜಿ ಎಂಎಲ್‌ಸಿ ಸಿದ್ದರಾಜು, ಬಿಜೆಪಿ ಮುಖಂಡ ಮೈ.ವಿ.ರವಿಶಂಕರ್, ಮೋಹನ್ ಇನ್ನಿತರರಿದ್ದರು.

ನಿಧನ

ಗೌಡಿಕೆ ಹೆಚ್.ವಿ.ಬಸವರಾಜು



ನಂಜನಗೂಡು, ಜೂ.8– ತಾಲೂಕಿನ ಹುಳಿಮಾವು ನಿವಾಸಿ ಗೌಡಿಕೆ ಹೆಚ್.ವಿ. ಬಸವರಾಜು(84) ಶನಿವಾರ ನಿಧನರಾದರು.ಮೃತರು ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಜೂ.9) ಮಧ್ಯಾಹ್ನ 2 ಗಂಟೆಗೆ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗ್ಯಾರಂಟಿ ಯೋಜನೆ ಗ್ಯಾರಂಟಿ ಬಗ್ಗೆ ಕಾಂಗ್ರೆಸ್‌ನಲ್ಲೇ ಗೊಂದಲ!



ಮೈಸೂರು, ಜೂ.8– ಲೋಕಸಭೆ ಚುನಾವಣೆ ಫಲಿತಾಂಶದ ಬಳಿಕ ರಾಜ್ಯ ಸರ್ಕಾರ ಮಹತ್ವದ ಪಂಚ ಗ್ಯಾರಂಟಿ ಯೋಜನೆಗಳ ಗ್ಯಾರಂಟಿ ಬಗ್ಗೆ ಗೊಂದಲ ಶುರುವಾಗಿದ್ದು, ಆಡಳಿತಾರೂಢ ಕಾಂಗ್ರೆಸ್ ನಾಯಕರಿಂದಲೇ ಪರ–ವಿರೋಧ ಅಭಿಪ್ರಾಯ ವ್ಯಕ್ತವಾಗುತ್ತಿವೆ.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಪರಾಜಿತ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಸುದ್ದಿಗೋಷ್ಠಿಯಲ್ಲಿ, ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಮತದಾರರು ಬಿಜೆಪಿ ಬೆಂಬಲಿಸುವ ಮೂಲಕ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳ ವಿರುದ್ಧ ಮತ ಚಲಾಯಿಸಿದ್ದಾರೆ. ಹೀಗಾಗಿ ಈ ಯೋಜನೆಗಳನ್ನು ನಿಲ್ಲಿಸುವುದು ಒಳ್ಳೆಯದು ಎಂದು ಹೇಳಿದ್ದಾರೆ.

ಹಾಗೆಯೇ ಚುನಾವಣೆ ಪೂರ್ವದಲ್ಲೂ ಗ್ಯಾರಂಟಿ ಯೋಜನೆಗಳ ಸಂಬಂಧ ವ್ಯತಿರಿಕ್ತ ಹೇಳಿಕೆ ನೀಡಿದ್ದ ಮಾಗಡಿ ಶಾಸಕ ಬಾಲಕೃಷ್ಣ ಮತ್ತೆ ಈ ವಿಚಾರ ಮಾತನಾಡಿದ್ದಾರೆ. ಮಾಧ್ಯಮವೊಂದಕ್ಕೆ ಪ್ರತಿಕ್ರಿಯಿಸಿ, ಜನರು ಗ್ಯಾರಂಟಿ ಯೋಜನೆ ಅಗತ್ಯವಿಲ್ಲ ಎಂದು ನಮಗೆ ಲೋಕಸಭೆ ಚುನಾವಣೆಯಲ್ಲಿ ಸೂಚನೆ ನೀಡಿದ್ದಾರೆ. ಯೋಜನೆಗಳನ್ನು ಮುಂದುವರೆಸುವುದು ಅಥವಾ ಸ್ಥಗಿತಗೊಳಿಸುವ ಬಗ್ಗೆ ನಿರ್ಧಾರ ಕೈಗೊಳ್ಳುವಷ್ಟು ನಾನು ದೊಡ್ಡವನಲ್ಲ. ಈ ಬಗ್ಗೆ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಕ್ಯಾಬಿನೆಟ್‌ನಲ್ಲಿ ಚರ್ಚಿಸಿ, ತೀರ್ಮಾನಿಸುತ್ತಾರೆ ಎಂದು ತಿಳಿಸಿದ್ದಾರೆ.

ಕಾಂಗ್ರೆಸ್ ನಾಯಕರ ಈ ಹೇಳಿಕೆಗಳ ಬಗ್ಗೆ ಗೃಹಸಚಿವ ಡಾ.ಜಿ.ಪರಮೇಶ್ವರ್ ಅವರು ಪ್ರತಿಕ್ರಿಯಿಸಿ, ಲೋಕಸಭಾ ಚುನಾವಣೆ ಮುನ್ನವೇ ಗ್ಯಾರಂಟಿ ಯೋಜನೆಗಳ ವಿಚಾರವಾಗಿ ಬಿಜೆಪಿ ಆರೋಪಿಸಿತ್ತು. ಚುನಾವಣೆ ಬಳಿಕ ಗ್ಯಾರಂಟಿ ನಿಲ್ಲಿಸುತ್ತಾರೆ ಎಂದಿದ್ದರು. ಆ ವೇಳೆಯೇ ಸಿಎಂ, ಡಿಸಿಎಂ, ನಾನು ಸೇರಿದಂತೆ ಹಲವು ಸಚಿವರು ಸ್ಪಷ್ಟನೆ ನೀಡಿದ್ದೆವು. ಬಡತನ ನಿರ್ಮೂಲನೆ ಉದ್ದೇಶದಿಂದ ಸಾಕಷ್ಟು ಚರ್ಚೆ ಮಾಡಿ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ ಎಂದು ನಿಖರವಾಗಿ ಹೇಳಿದ್ದೆವು. ಯಾರು ಏನೇ ಹೇಳಿದರೂ ಯೋಜನೆಗಳನ್ನು ಮುಂದುವರೆಸುವುದು ಪೂರ್ವ ನಿರ್ಧಾರ ಎಂದು ಸ್ಪಷ್ಟಪಡಿಸಿದ್ದಾರೆ. ಕಾಂಗ್ರೆಸ್ ಹಿರಿಯ ನಾಯಕ ಐವಾನ್ ಡಿಸೋಜಾ ಅವರೂ ಕೂಡ ಗ್ಯಾರಂಟಿ ಯೋಜನೆಗಳನ್ನು ಸರ್ಕಾರ ನಿಲ್ಲಿಸುವುದಿಲ್ಲ ಎಂದು ಹೇಳಿದ್ದಾರೆ. ಆದರೆ ಕಾಂಗ್ರೆಸ್‌ನ ಕೆಲ ನಾಯಕರು ಪದೇ ಪದೆ ಗ್ಯಾರಂಟಿ ಯೋಜನೆಗಳನ್ನು ಮುಂದಿಟ್ಟುಕೊಂಡು ಪರೋಕ್ಷವಾಗಿ ಜರಿಯುವ ಕೆಲಸ ಮಾಡುತ್ತಿದ್ದಾರೆ, ಮುಜುಗರ ಉಂಟು ಮಾಡುತ್ತಿದ್ದಾರೆ. ಈ ಬಗ್ಗೆ ಸ್ವಪಕ್ಷದಲ್ಲೇ ಆಕ್ಷೇಪ ವ್ಯಕ್ತವಾಗುತ್ತಿದೆ. ಈ ಗ್ಯಾರಂಟಿ ಗೊಂದಲ ಮುಂದುವರೆದರೆ ಇದನ್ನೇ ಪ್ರತಿಪಕ್ಷಗಳು ರಾಜಕೀಯ ಅಸ್ತ್ರವಾಗಿ ಬಳಸಿಕೊಳ್ಳ ಬಹುದು ಎನ್ನಲಾಗಿದೆ.

ಡಿ.ಕೆ.ಸುರೇಶ್ ಸೋಲಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಂ ಕಾರಣ

- ಪೂರ್ಣಾವಧಿಗೆ ಮುಖ್ಯಮಂತ್ರಿಯಾಗಿ ಮುಂದುವರೆಯುವ ಉದ್ದೇಶದಿಂದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಲ ಕುಗ್ಗಿಸುವ ಮೊದಲ ಯತ್ನ
- ಬಿಜೆಪಿ ಶಾಸಕ ಸುರೇಶ್‌ಗೌಡ ಗಂಭೀರ ಆರೋಪ
- ಅಹಿಂದ ಒಕ್ಕೂಟದ ಮೂಲಕ ತಮಗೆ ಆಗದವರ ಸೋಲಿಸುವ ಯತ್ನ ಮಾಡಿರುವುದಾಗಿ ಹೇಳಿಕೆ




ಸುರೇಶ್‌ಗೌಡ

ಬೆಂಗಳೂರು, ಜೂ.8(ಕೆಎಂಶಿ)–ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ.ಸುರೇಶ್ ಸೋಲಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರಣ ಎಂದು ಬಿಜೆಪಿ ಶಾಸಕ ಬಿ.ಸುರೇಶ್‌ಗೌಡ ಬಾಂಬ್ ಸಿಡಿಸಿದ್ದಾರೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ದೊರಕುವ ಮುಖ್ಯಮಂತ್ರಿ ಹುದ್ದೆ ತಪ್ಪಿಸಲು ಸಿದ್ದರಾಮಯ್ಯ ಹಿಂದಿರುವ ಅಹಿಂದ ಒಕ್ಕೂಟ ತಮಗೆ ಬೇಡವಾದವರನ್ನು ಚುನಾವಣೆಯಲ್ಲಿ ಸೋಲಿಸಲು ಪ್ರಮುಖ ಪಾತ್ರ ವಹಿಸಿತ್ತೆಂದು ದೂರಿದ್ದಾರೆ.


ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಪೂರ್ಣಾವಧಿ ಮುಖ್ಯಮಂತ್ರಿಯಾಗಿ ಇರಬೇಕೆಂಬ ಏಕೈಕ ಕಾರಣಕ್ಕಾಗಿ ಸುರೇಶ್ ಅವರನ್ನು ಸೋಲಿಸಿ ಶಿವಕುಮಾರ್ ಬಲ ಕುಗ್ಗಿಸುವ ಮೊದಲ ಪ್ರಯತ್ನ ಮಾಡಿದ್ದಾರೆ. ಸುರೇಶ್ ಸೇರಿದಂತೆ ರಾಜ್ಯದಲ್ಲಿ ಕೆಲವರನ್ನು ಸೋಲಿಸಲು ಸಿದ್ದರಾಮಯ್ಯ ಮತ್ತವರ ಬಳಗ ಚುನಾವಣೆಗೂ ಮುನ್ನವೇ ತಂತ್ರ ಹೂಡಿತ್ತು. ಇದೇ ಕಾರಣಕ್ಕಾಗಿ ಸಚಿವರಾದ ಡಾ.ಜಿ.ಪರಮೇಶ್ವರ್, ಸತೀಶ್ ಜಾರಕಿಹೊಳಿ, ರಾಜಣ್ಣ ಸೇರಿದಂತೆ ಅಹಿಂದ ಸಚಿವರು ನಿರಂತರ ಸಭೆ ನಡೆಸಿದ್ದರು. ನನಗೆ ಮೊದಲೇ ಈ ವಿಷಯ ತಿಳಿದಿತ್ತು ನಾನು ಚುನಾವಣೆಗೂ ಮುನ್ನವೇ ಸುರೇಶ್ ಅವರನ್ನು ಈ ಬಾರಿ ಎರಡು ಲಕ್ಷ ಮತಗಳ ಅಂತರಗಳಿಂದ ಸೋಲಿಸುತ್ತಾರೆ ಎಂದು ಹೇಳಿದ್ದೆ. ಅಂದು ಯಾರೂ ನಂಬಲಿಲ್ಲ, ಇದೀಗ ಅವರು ಎರಡು ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಪರಾಭವಗೊಂಡಿದ್ದಾರೆ ಎಂದು ಶಾಸಕ ಸುರೇಶ್ ಗೌಡ ಹೇಳಿದರು.

ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಫಲಿತಾಂಶವೇ ಕರ್ನಾಟಕದಲ್ಲಿ ರಾಜಕೀಯ ಧ್ರುವೀಕರಣಕ್ಕೆ ನಾಂದಿ ಹಾಡಲಿದೆ. ಈಗಾಗಲೇ ಬೆಳಗಾವಿಯಲ್ಲಿ ಇದರ ಕಿಚ್ಚು ಹೊತ್ತಿಕೊಂಡಿದೆ. ಮುಂದೆ ಅದು ಚಾಮರಾಜನಗರದವರೆಗೂ ಹಬ್ಬಿಕೊಳ್ಳುತ್ತದೆ ಕಾದು ನೋಡಿ ಎಂದಿದ್ದಾರೆ. ಈ ಸೋಲೇ ಸರ್ಕಾರದ ಪತನಕ್ಕೂ ನಾಂದಿ ಆಗುತ್ತದೆ ಎಂದರೆ ಅತಿಶಯೋಕ್ತಿಯೇನಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗುಂಪು ಯಾವುದೇ ಕಾರಣಕ್ಕೂ ಡಿಸಿಎಂ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಬಾರದು, ಅವರು ಆಗುವುದೇ ಆದರೆ, ಹಿಂದೆ ಕುಮಾರಸ್ವಾಮಿ ಆಡಳಿತದಲ್ಲಿ ಹೇಗೆ ಆಪರೇಷನ್ ಕಮಲ ವಾಯಿತೋ ಅದು ಮತ್ತೆ ಮರುಕಳಿಸಲಿದೆ ಎಂದು ಸುರೇಶ್‌ಗೌಡ ಭವಿಷ್ಯ ನುಡಿದಿದ್ದಾರೆ.

ಸುತ್ತೂರು ಶ್ರೀಗಳಿಂದ ಬಸವ ಜಯಂತಿ ಕಾರ್ಯಕ್ರಮದ ಸಿದ್ಧತೆ ಪರಿಶೀಲನೆ


ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಭಾನುವಾರ ನಡೆಯಲಿರುವ ಬಸವ ಜಯಂತಿ ಕಾರ್ಯಕ್ರಮದ ಸಿದ್ಧತಾ ಪರಿಶೀಲನೆಗಳನ್ನು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಪರಿಶೀಲಿಸಿದರು. ಈ ವೇಳೆ ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಪ್ರದೀಪ್‌ಕುಮಾರ್. ಹೆಚ್.ಎಸ್.ವೀರೇಶ್, ಎಂ.ಕೆ.ಸ್ವಾಮಿ, ವೇದಿಕೆ ನಿರ್ಮಾಣ ಮಾಡಿರುವ ಪೆಂಡಾಲ್ ಮಹೇಶ್, ಮಹದೇವ ಪ್ರಸಾದ್, ಮಾರ್ಬಳ್ಳಿ ಚಂದ್ರಶೇಖರ್, ಕಟ್ಟಹಳ್ಳಿ ಪ್ರಕಾಶ್, ಎಸ್.ಆರ್. ಶಿವಕುಮಾರ್, ದಾರಿಪುರ ಡಿ.ಚಂದ್ರಶೇಖರ್, ಬ್ಯಾತಹಳ್ಳಿ ಬಿ.ಕೆ.ನಾಗರಾಜು, ಹಡಜನ ಲಿಂಗರಾಜು, ದೂರ ಶಿವಕುಮಾರ್, ಜೀವಧಾರ ಗಿರೀಶ್, ಡಿ.ಪಿ.ಸುರೇಶ್ ಇನ್ನಿತರರಿದ್ದರು.

ನೂತನ ಸಂಸದ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಅಭಿನಂದನೆ


ಶನಿವಾರ ನವದೆಹಲಿಯಲ್ಲಿ ಸಂಸದ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಶಾಸಕ ಶ್ರೀವತ್ಸ, ಮಾಜಿ ಶಾಸಕ ಸಿದ್ದರಾಜು, ಬಿಜೆಪಿ ಮುಖಂಡರಾದ ಮೈ.ವಿ. ರವಿಶಂಕರ್, ಮೋಹನ್ ಇತರರು ಅಭಿನಂದಿಸಿದರು. ಈ ವೇಳೆ ಮಾಜಿ ಸಚಿವರಾದ ಸಾ.ರಾ. ಮಹೇಶ್, ಬಂಡೆಪ್ಪ ಕಾಶೆಂಪೂರ್ ಇತರರು ಉಪಸ್ಥಿತರಿದ್ದರು.

ಎಸ್ಪಿ, ಐಜಿಪಿ ಕಚೇರಿ ಜಾಗ ಮಾರಾಟ ಯತ್ನ; ಆರು ಮಂದಿ ಬಂಧನ



ಬೆಂಗಳೂರು: ನಕಲಿ ದಾಖಲೆ ಸೃಷ್ಟಿಸಿ ನಗರದ ಮಿಲ್ಲರ್ಸ್ ರಸ್ತೆಯಲ್ಲಿರುವ ಬೆಂಗಳೂರು ಗ್ರಾಮಾಂತರ ಎಸ್ಪಿ ಕಚೇರಿ ಹಾಗೂ ಕೇಂದ್ರ ವಲಯ ಐಜಿಪಿ ಕಚೇರಿ ಜಾಗ ಮಾರಾಟಕ್ಕೆ ಯತ್ನಿಸಿದ ಆರು ಮಂದಿಯನ್ನು ಹೈಗ್ರೌಂಡ್ಸ್ ಪೊಲೀಸರು ಬಂಧಿಸಿದ್ದಾರೆ.

ಐದು ಎಕರೆ ಜಾಗದ ಇಂದಿನ ಮಾರುಕಟ್ಟೆ ಮೌಲ್ಯ ಸುಮಾರು 200 ಕೋಟಿ. ಪೊಲೀಸ್ ಇಲಾಖೆಯ ಕಚೇರಿ ಇರುವ ಕಟ್ಟಡದ ಹೆಸರು ಓಂ ಮಹಲ್. ಬಂಧಿತರನ್ನು ವಿದ್ಯಾರಣ್ಯಪುರದ ಎಂಡಿ ಹನೀಫ್, ವಿಜಯನಗರದ ರಾಜಶೇಖರ್, ಉಳ್ಳಾಲದ ರಾಮಸಂದ್ರ ಮುಖ್ಯರಸ್ತೆಯ ಮೊಹಮ್ಮದ್ ನದೀಮ್, ಸಂಜಯನಗರದ ಮೋಹನ್ ಶೆಟ್ಟಿ ಮತ್ತು ಜಹೀರ್ ಅಹಮದ್ ಎಂದು ಗುರುತಿಸಲಾಗಿದೆ.

ಸೋಮವಾರ ಮಧ್ಯಾಹ್ನ 1ರಿಂದ 1.30ರ ನಡುವೆ ಈ ಘಟನೆ ನಡೆದಿದೆ. ಆರೋಪಿಗಳು ಎಸ್ಪಿ ಕಚೇರಿ ಆವರಣವನ್ನು ಅತಿಕ್ರಮ ಪ್ರವೇಶಿಸಿದ್ದು, ತಮ್ಮ ಮೊಬೈಲ್‌ನಿಂದ ಕಚೇರಿಯ ಕಟ್ಟಡ ಹಾಗೂ ಆವರಣವನ್ನು ಚಿತ್ರೀಕರಿಸಿ, ಫೋಟೋ ಸೆರೆಹಿಡಿಯಲು ಮುಂದಾಗಿದ್ದಾರೆ. ಅದನ್ನು ಗಮನಿಸಿದ ಎಸ್ಟೇಟ್ ಆಫೀಸರ್ ಸಂತೋಷ್ ಗೌಡ, ಏಕೆ ಕಚೇರಿ ಕಟ್ಟಡ ಚಿತ್ರೀಕರಿಸುತ್ತಿರುವಿರಿ ಎಂದು ಪ್ರಶ್ನಿಸಿದ್ದಾರೆ. ಆಗ ಸ್ವತ್ತಿನ ಮಾಲೀಕರಾದ ಗಣಪತಿ ಮತ್ತು ಜಹೀರ್ ಎಂಬುವರು ನಮಗೆ ಜಿಪಿಎ (ಜನರಲ್ ಪವರ್ ಆಫ್ ಅಟಾರ್ನಿ) ಮಾಡಿಕೊಟ್ಟಿದ್ದು, ಮಾರಾಟ ಮಾಡುವ ಹಕ್ಕಿದೆ ಎಂದು ಆರೋಪಿಗಳು ಹೇಳಿದ್ದಾರೆ.

ಈ ವಿಷಯವನ್ನು ಮೇಲಾಧಿಕಾರಿಗಳಿಗೆ ತಿಳಿಸಿದ ಇನ್ಸ್‌ಪೆಕ್ಟರ್ ಹೈಗ್ರೌಂಡ್ಸ್ ಪೊಲೀಸರಿಗೆ ದೂರು ನೀಡಿದ್ದಾರೆ. ಈ ಫ್ಲಾಟ್ ನೇಪಾಳದ ರಾಜಮನೆತನಕ್ಕೆ ಸೇರಿತ್ತು ಎಂದು ಹೇಳಲಾಗುತ್ತದೆ. ಆದರೆ, ಮಾಲೀಕತ್ವದ ವಿವರಗಳು ಸ್ಪಷ್ಟವಾಗಿಲ್ಲ.

ಪೊಲೀಸ್ ಇಲಾಖೆಯ ಕಚೇರಿಗಳು 1962ರಿಂದ ಕಾರ್ಯನಿರ್ವಹಿಸುತ್ತಿವೆ. ಆಸ್ತಿ ಮಾಲೀಕತ್ವದ ಬಗ್ಗೆ ಗೊಂದಲವಿದೆ. ನಿವೇಶನ ನೇಪಾಳಿ ರಾಜನಿಗೆ ಸೇರಿದ್ದು ಎಂದು ಹೇಳಲಾಗಿದೆ.

ರಾಜ್ಯ ಸರ್ಕಾರದಿಂದ ಆಸ್ತಿಯನ್ನು ನೋಂದಾಯಿಸಲು ಹಲವಾರು ಪತ್ರ ವ್ಯವಹಾರಗಳು ನಡೆದಿದೆ ಎಂದು ಬೆಂಗಳೂರು ಗ್ರಾಮಾಂತರ ಎಸ್ಪಿ ಮಲ್ಲಿಕಾರ್ಜುನ ಬಲದಂಡಿ ತಿಳಿಸಿದ್ದಾರೆ.

ಚುನಾವಣೆಯಲ್ಲಿ ಹಿನ್ನಡೆ; ಕಾಂಗ್ರೆಸ್ ಆತ್ಮಾವಲೋಕನ

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಹಿನ್ನಡೆಗೆ ಕಾರಣಗಳೇನು ಎಂದು ಕಾಂಗ್ರೆಸ್ ಪಕ್ಷ ಆತ್ಮಾವಲೋಕನ ಮಾಡಿಕೊಳ್ಳಲಿದೆ ಎಂದು ಪಕ್ಷದ ಹಿರಿಯ ನಾಯಕ ಮತ್ತು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಶನಿವಾರ ಹೇಳಿದ್ದಾರೆ.

ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ರಾಜ್ಯದಲ್ಲಿ ಕನಿಷ್ಠ ಪಕ್ಷ 14 ಸ್ಥಾನ ಗೆಲ್ಲುವ ನಿರೀಕ್ಷೆ ಇತ್ತು. ಆದರೆ 9 ಸ್ಥಾನಗಳಷ್ಟೇ ಬಂದಿವೆ. ಈ ಹಿನ್ನಡೆಗೆ ಕಾರಣಗಳೇನು ಎಂದು ಆತ್ಮಾವಲೋಕನ ಮಾಡಿಕೊಳ್ಳಲಿದೆ ಎಂದರು.

ಕಳೆದ ಒಂದು ವರ್ಷದಲ್ಲಿ ರಾಜ್ಯ ಸರಕಾರವು ಅನೇಕ ಜನಪರ ಯೋಜನೆಗಳನ್ನು ಜಾರಿಗೆ ತಂದು, ಜನರಿಗೆ ಅದರ ಲಾಭ ಸಿಗುವಂತೆ ಮಾಡಿತ್ತು. ಆದರೂ ನಾವು ಎಡವಿದ್ದೆಲ್ಲಿ ಎನ್ನುವುದನ್ನು ನಾವು ಕಂಡುಕೊಳ್ಳಲಿದ್ದೇವೆ. ಗೆಲ್ಲಬಹುದಾಗಿದ್ದ ಕೆಲವು ಕ್ಷೇತ್ರಗಳು ಕೈಜಾರಿರುವುದು ನಮಗೆ ಗೊತ್ತಾಗಿದೆ ಎಂದರು. ಚುನಾವಣೆ ಹಿನ್ನಡೆಗೆ ಯಾರೋ ಒಬ್ಬರನ್ನು ಹೊಣೆ ಮಾಡುವುದು ಸಾಧ್ಯವಿಲ್ಲ ಸಚಿವರ ಅಥವಾ ಶಾಸಕರ ಮೌಲ್ಯಮಾಪನ ಕೂಡ ನಡೆಯುವುದಿಲ್ಲ. ಪಕ್ಷದ ಮುಂದಿನ ಕಾರ್ಯತಂತ್ರ ಏನಿರಬೇಕು ಎಂದಷ್ಟೆ ಚಿಂತಿಸಲಾಗುವುದು ಎಂದು ಹೇಳಿದರು.

ಸಾರ್ವಜನಿಕರ ತೆರಿಗೆ ಹಣ ದುರ್ಬಳಕೆ
ಶ್ರೀರಾಂಪುರ ಪಟ್ಟಣ ಪಂಚಾಯಿತಿ ಕಂಪ್ಯೂಟರ್ ಆಪರೇಟರ್ ವಿರುದ್ಧ ಪ್ರಕರಣ ದಾಖಲು

ಮೈಸೂರು,ಜೂ.8(ಆರ್‌ಕೆ)– ಸಾರ್ವಜನಿಕರಿಂದ ಸಂಗ್ರಹಿಸಿದ ತೆರಿಗೆ ಹಣವನ್ನು ತನ್ನ ಖಾಸಗಿ ಖಾತೆಗೆ ವರ್ಗಾಯಿಸಿಕೊಂಡು ಸರ್ಕಾರಕ್ಕೆ ವಂಚಿಸುತ್ತಿದ್ದ ಶ್ರೀರಾಂಪುರ ಪಟ್ಟಣ ಪಂಚಾಯಿತಿ ಕಚೇರಿ ಕಂಪ್ಯೂಟರ್ ಆಪರೇಟರ್ ಎಂ.ವಿ. ನಮ್ರತಾ ವಿರುದ್ಧ ಮೈಸೂರಿನ ವಿದ್ಯಾರಣ್ಯಪುರಂ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಪಂಚಾಯಿತಿ ಮುಖ್ಯಾಧಿಕಾರಿ ಎಂ.ಕೆ. ಸುರೇಶ್ ನೀಡಿದ ಲಿಖಿತ ದೂರಿನನ್ವಯ ಇಂದು ಐಪಿಸಿ ಸೆಕ್ಷನ್ 420 ಅಡಿ ಪ್ರಕರಣ ದಾಖಲಿಸಲಾಗಿದೆ. ಈ ಹಿಂದೆ ಶ್ರೀರಾಂಪುರ ಗ್ರಾಮ ಪಂಚಾಯಿತಿಯಲ್ಲಿ ಕಂಪ್ಯೂಟರ್ ಆಪರೇಟರ್ (ದಿನಗೂಲಿ ನೌಕರರು) ಆಗಿ ಕೆಲಸ ಮಾಡುತ್ತಿದ್ದ ನಮ್ರತಾ, ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿದ ನಂತರವೂ ಅದೇ ಸ್ಥಾನದಲ್ಲಿ ಮುಂದುವರೆದಿದ್ದರು.

ಕಂಪ್ಯೂಟರ್ ಆಪರೇಟರ್, ಜೊತೆಗೆ ಸಾರ್ವಜನಿಕರ ತೆರಿಗೆ ಹಣಕ್ಕೆ ಇ–ಸ್ವೀಕೃತಿ ಸೃಜಿಸುತ್ತಿದ್ದ ಆಕೆ, ಸಂಗ್ರಹಿಸಿದ ಆಸ್ತಿ ತೆರಿಗೆ, ಖಾತಾ ನೋಂದಣಿ, ವರ್ಗಾವಣೆ ಶುಲ್ಕ ಹಾಗೂ ಕಂದಾಯದ ಹಣವನ್ನು ತನ್ನ ಖಾಸಗಿ ಖಾತೆಗೆ ವರ್ಗಾವಣೆ ಮಾಡಿಕೊಂಡಿದ್ದಾರೆ ಎಂದು ಸುರೇಶ್ ದೂರಿನಲ್ಲಿ ಆರೋಪಿಸಿದ್ದಾರೆ.

ಮೈಸೂರಿನ ಜಯನಗರ ನಿವಾಸಿ ವಿಶ್ವನಾಥ ಖಿಣಿ ಎಂಬುವರು ಮೇ 13ರಂದು ಆಸ್ತಿ ತೆರಿಗೆ ಪಾವತಿಸಲೆಂದು ಪಂಚಾಯಿತಿ ಕಚೇರಿಗೆ ಹೋಗಿದ್ದಾಗ 2023–24ನೇ ಸಾಲಿನ ಕಂದಾಯ ಬಾಕಿ ಇರುವುದಾಗಿ ಮಾಹಿತಿ ನೀಡಿದ್ದಾರೆ. ಅವರ ಬಳಿ ಇದ್ದ ತೆರಿಗೆ ಪಾವತಿ ಚಲನ್ ಪರಿಶೀಲಿಸಿದಾಗ ಖಿಣಿ ಅವರು ಪಾವತಿಸಿದ್ದ 47,900 ರೂ. ಹಣವನ್ನು ನಮ್ರತಾ ತಮ್ಮ ಬ್ಯಾಂಕ್ ಖಾತೆಗೆ ವರ್ಗಾಯಿಸಿಕೊಂಡಿರುವುದು ಬೆಳಕಿಗೆ ಬಂದಿತು.

ತದನಂತರ ಜಿಲ್ಲಾ ನಗರ ಅಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ಬಿ. ಶುಭಾ ಕಚೇರಿ ಕಡತ, ಲೆಕ್ಕ ಶಾಖೆ ದಾಖಲೆಗಳನ್ನು ಪರಿಶೀಲಿಸಲಾಗಿ ನಮ್ರತಾ ಹಲವು ಪ್ರಕರಣಗಳಲ್ಲಿ ಹಣ ದುರುಪಯೋಗ ಮಾಡಿಕೊಂಡಿರುವುದು ಪತ್ತೆಯಾಗಿದೆ. ಈ ಸಂಬಂಧ ಜಿಲ್ಲಾಧಿಕಾರಿಗಳಿಗೆ ತನಿಖಾ ವರದಿ ಸಲ್ಲಿಸಿದ್ದರು.

ಪೆನ್‌ಡ್ರೈವ್ ಲೀಕ್ ಮಾಡಿದ ಆರೋಪಿಗಳನ್ನೂ ವಿಚಾರಣೆಗೊಳಪಡಿಸಿ

ಎಸ್‌ಐಟಿಗೆ ಎಚ್.ಡಿ.ರೇವಣ್ಣ ಪರ ವಕೀಲ ಆಗ್ರಹ

ಹಾಸನ: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ಲೈಂಗಿಕ ಹಗರಣದ ಪೆನ್‌ಡ್ರೈವ್ ಅನ್ನು ಲೀಕ್ ಮಾಡಿದ ಕಾರ್ತಿಕ್ ಗೌಡ, ಪುಟ್ಟರಾಜ್ ಮತ್ತು ಶರತ್‌ಗೌಡರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸುವಂತೆ ಹೊಳೆನರಸೀಪುರ ಶಾಸಕ ಎಚ್.ಡಿ. ರೇವಣ್ಣ ಪರ ವಕೀಲ ಗೋಪಾಲ್ ವಿಶೇಷ ತನಿಖಾ ತಂಡವನ್ನು ಒತ್ತಾಯಿಸಿದ್ದಾರೆ.

ಹಾಸನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇತ್ತೀಚೆಗಷ್ಟೇ ನ್ಯಾಯಾಲಯ ಮೂವರು ಆರೋಪಿಗಳಿಗೆ ಜಾಮೀನು ತಿರಸ್ಕರಿಸಿದೆ. ಆದರೂ ಇವರನ್ನು ಬಂಧಿಸುವಲ್ಲಿ ಎಸ್‌ಐಟಿ ವಿಫಲವಾಗಿದೆ ಎಂದರು.

ಇತ್ತೀಚೆಗಷ್ಟೇ ಹಾಸನ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದ ಶ್ರೇಯಸ್ ಪಟೇಲ್ ವಿಜಯೋತ್ಸವದಲ್ಲಿ ಈ ಮೂವರು ಪಾಲ್ಗೊಂಡಿದ್ದರು. ಆದರೂ ಸ್ಥಳೀಯ ಪೊಲೀಸರು ಮೂಕಪ್ರೇಕ್ಷಕರಾಗಿದ್ದರು. ಎಸ್‌ಐಟಿ ಮೂವರನ್ನು ಬಂಧಿಸದೇ ಹೋದಲ್ಲಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸುವುದಾಗಿ ಎಚ್ಚರಿಕೆ ನೀಡಿದರು.

ಅಶ್ಲೀಲ ವಿಡಿಯೋಗಳ ಸೋರಿಕೆ ಕೂಡ ಲೈಂಗಿಕ ದೌರ್ಜನ್ಯದಂತೆಯೇ ಇರುತ್ತದೆ. ನ್ಯಾಯಾಲಯ ಜಾಮೀನು ತಿರಸ್ಕರಿಸಿದ ತಕ್ಷಣ ಎಸ್‌ಐಟಿ ಹೆಚ್‌ಡಿ ರೇವಣ್ಣ ಅವರನ್ನು ಬಂಧಿಸಿದೆ, ಆದರೆ, ಪ್ರಕರಣದಲ್ಲಿ ವೀಡಿಯೊವನ್ನು ಲೀಕ್ ಮಾಡಿದ ಆರೋಪದ ಮೂವರ ವಿರುದ್ಧ ಯಾವುದೇ ಪ್ರಕರಣ ದಾಖಲಾಗಿಲ್ಲ ಹೆಚ್.ಡಿ.ರೇವಣ್ಣ ಹಾಗೂ ಭವಾನಿ ರೇವಣ್ಣ ಪ್ರಕರಣದಲ್ಲಿ ಎಸ್‌ಐಟಿ ತಾರತಮ್ಯ ಎಸಗಿದೆ ಎಂದು ಆರೋಪಿಸಿದರು.

ಕೆ.ಎಸ್.ಶಿವರಾಮ್‌ಗೆ ಹುಟ್ಟುಹಬ್ಬದ ಸಂಭ್ರಮ


ಮೈಸೂರಿನ ಬಂಬೂಬಜಾರ್‌ನ ತಿಲಕನಗರದಲ್ಲಿರುವ ಅಂಧ ಮತ್ತು ಕಿವುಡ ಮಕ್ಕಳ ವಸತಿಶಾಲೆ ಹಾಗೂ ವಸತಿ ಗೃಹ ನಿಲಯದಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್ ಜನ್ಮದಿನವನ್ನು ಸರಳವಾಗಿ ಆಚರಿಸಲಾಯಿತು. ಈ ವೇಳೆ ಉಪ್ಪಾರ ಸಮಾಜದ ಜಿಲ್ಲಾಧ್ಯಕ್ಷ ಎಸ್.ಯೋಗೀಶ, ಉಪ್ಪಾರ ಮಡಿವಾಳ ಸಮಾಜದ ಜಿಲ್ಲಾಧ್ಯಕ್ಷ ಎಚ್.ಎಸ್.ಪ್ರಕಾಶ್, ಸವಿತಾ ಸಮಾಜದ ಜಿಲ್ಲಾಧ್ಯಕ್ಷ ಎನ್.ಆರ್.ನಾಗೇಶ್, ನಗರಾಧ್ಯಕ್ಷರಾದ ಹರೀಶ್‌ರೆಡ್ಡಿ, ಮಡಿವಾಳ ಸಮಾಜದ ಜಿಲ್ಲಾಧ್ಯಕ್ಷ ಎಸ್.ರವಿನಂದನ್, ಕೇಶವ್, ಹಿಂದುಳಿದ ವರ್ಗದ ಮುಖಂಡರಾದ ಲೋಕೇಶ್‌ಕುಮಾರ್, ಸುನಿಲ್, ನಾರಾಯಣ್, ಮಹೇಂದ್ರ, ರವಿ, ರಾಜಶೇಖರ್, ವಿನೋದ್, ಶ್ರೀನಿವಾಸ್, ಮಹದೇವಣ್ಣ, ಚಂದ್ರಣ್ಣ, ಸೋಮು, ಮಹೇಶ್ ಇದ್ದರು.

ನೆರೆದವರ ಮನಸೂರೆಗೊಂಡ ಒಡಿಸ್ಸಿ ಶಾಸ್ತ್ರೀಯ ನೃತ್ಯ



ಮೈಸೂರು, ಜೂ.8(ಎಂಕೆ)– ತುಂತುರು ಮಳೆ ಹನಿಯ ಸುಂದರ ಮುಸ್ಸಂಜೆಯಲ್ಲಿ ಒಡಿಸ್ಸಿ ಶಾಸ್ತ್ರೀಯ ನೃತ್ಯ ಪ್ರದರ್ಶನ ಕಲಾಭಿಮಾನಿಗಳ ಹೃನ್ಮನ ಸೆಳೆಯಿತು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಇಂಟರ್‌ನ್ಯಾಷನಲ್ ಒಡಿಸ್ಸಿ ಫೋರಂ ಭುವನೇಶ್ವರ್ ಹಾಗೂ ರುದ್ರ ನೃತ್ಯಯೋಗ ಶಾಲಾ ಮೈಸೂರು ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಮೈಸೂರು ಒಡಿಸ್ಸಿ ಉತ್ಸವ' ಮತ್ತು 'ಉತ್ಕಲ್ ದಿವಸ್ ಆಚರಣೆ'ಯಲ್ಲಿ ಒಡಿಸ್ಸಿ ನೃತ್ಯ ಹಿರಿಯ ಕಲಾವಿದೆ ಸಿಂಧು ಕಿರಣ್, ಮಂಗಳಾಚರಣ್ ನೃತ್ಯ ಪ್ರಕಾರವನ್ನು ಪ್ರಸ್ತುತ ಪಡಿಸುವ ಮೂಲಕ ಉತ್ಸವಕ್ಕೆ ಚಾಲನೆ ನೀಡಿದರು. ನಂತರ ಕಲಾವಿದ ಅವಿಜಿತ್ ಕುಂಡು 'ದಶವತಾರ', ಬಂಸಿ ಬಿಲಾಸ್ ತಂಡದ ವಿದ್ಯಾರ್ಥಿಗಳ 'ಬಸಂತ ಪಲ್ಲವಿ', ವಿದುಷಿ ಲೀಲಾ ಮೊಹಂತಿ 'ಜಗ ಮಹೇಶ್ವರ', ಅರಿಥಿಡ್ನಾ ಫೌಂಡೇಶನ್ ವಿದ್ಯಾರ್ಥಿಗಳಿಂದ 'ಶಿವ ಪಂಚಕ', ವಿದುಷಿ ಗೀತಿಕಾ ಪತ್ರ 'ಒಡಿಯ ಅಭಿನಯ' ಸೇರಿದಂತೆ 11 ಬಗೆಯ ಒಡಿಸ್ಸಿ ನೃತ್ಯ ಪ್ರಕಾರಗಳನ್ನು ಪ್ರಸ್ತುತಪಡಿಸಲಾಯಿತು.

ಇದಕ್ಕು ಮುನ್ನ ಕಾರ್ಯಕ್ರಮ ಉದ್ಘಾಟಿಸಿದ ಪುರಿ ಜಗನ್ನಾಥ ಸಾಂಸ್ಕೃತಿಕ ಮತ್ತು ಕಲ್ಯಾಣ ಸಮಾಜದ ಅಧ್ಯಕ್ಷ ಜ್ಞಾನಶ್ಯಾಮ್ ಪ್ರಧಾನ್ ಮಾತನಾಡಿ, ಮೈಸೂರಿನಲ್ಲಿ 3ನೇ ಬಾರಿಗೆ ಒಡಿಸ್ಸಿ ಉತ್ಸವ ಆಯೋಜಿಸಲಾಗಿದೆ. ಅದರೊಂದಿಗೆ 'ಉತ್ಕಲ್ ದಿವಸ್ ಆಚರಣೆ ನಡೆಯುತ್ತಿರುವುದು ಸಂತಸದ ಸಂಗತಿಯಾಗಿದೆ. ಒಡಿಸ್ಸಾ ದೇಶದ ಸಾಂಸ್ಕೃತಿಕ ರಾಜಧಾನಿಯಾಗಿದ್ದು, ವಿಷ್ಣುವಿನ ಅವತಾರವಾದ ಪುರಿ ಜಗನ್ನಾಥ ಸನ್ನಿಧಿಯಿಂದ ಒಡಿಸ್ಸಿ ನೃತ್ಯ ಆರಂಭವಾಯಿತೆಂಬ ನಂಬಿಕೆ ಇದೆ. ಒಡಿಸ್ಸಿ ನೃತ್ಯ ಜಗನ್ನಾಥರಿಗೆ ಇಷ್ಟವಾದ ನೃತ್ಯ. ಪುರಿ ಜಗನ್ನಾಥ ರಥೋತ್ಸವ ವಿಶ್ವ ಪ್ರಸಿದ್ಧಿಯಾಗಿದ್ದು, 20 ಲಕ್ಷಕ್ಕೂ ಅಧಿಕ ಭಕ್ತರು ಸೇರುತ್ತಾರೆ ಎಂದರು. ಮೈಸೂರು ಒಡಿಸ್ಸಿ ಅಶೋಸಿಯೇಷನ್‌ನ ರಾಬಿನಾರಾಯಣ ರಾವುತ್ ಮತ್ತಿತರರು ಉಪಸ್ಥಿತರಿದ್ದರು.

ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾದ ವಿವೇಕಾನಂದರಿಗೆ ಬಿಜೆಪಿ ಕಚೇರಿಯಲ್ಲಿ ಸನ್ಮಾನ

ದರ್ಪ ಮೆರೆದವರಿಗೆ ವಿವೇಕಾನಂದರ ಗೆಲುವಿನಿಂದ ತಕ್ಕ ಪಾಠ: ನಾಗೇಂದ್ರ



ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ ಸದಸ್ಯರಾಗಿ ಚುನಾಯಿತರಾದ ಕೆ.ವಿವೇಕಾನಂದರಿಗೆ ಬಿಜೆಪಿ ನಗರ ಮತ್ತು ಗ್ರಾಮಾಂತರ ವಿಭಾಗದಿಂದ ಅಭಿನಂದನೆ ಸಲ್ಲಿಸಲಾಯಿತು. ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಮಾಜಿ ಎಂಎಲ್‌ಸಿ ತೊಂಟದಾರ್ಯ

ಮೈಸೂರು, ಜೂ.8(ಎಂಕೆ)– ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ ಸದಸ್ಯರಾಗಿ ಚುನಾಯಿತರಾದ ಕೆ. ವಿವೇಕಾನಂದರಿಗೆ ಬಿಜೆಪಿ ನಗರ ಮತ್ತು ಗ್ರಾಮಾಂತರ ವಿಭಾಗದಿಂದ ಆತ್ಮೀಯ ಅಭಿನಂದನೆ ಸಲ್ಲಿಸಲಾಯಿತು.

ಮೈಸೂರಿನ ಚಾಮರಾಜಪುರಂನಲ್ಲಿರುವ ಬಿಜೆಪಿ ಕಚೇರಿಯಲ್ಲಿ ಶನಿವಾರ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಬಿಜೆಪಿ ನಗರಾಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ ನೂತನ ವಿಧಾನ ಪರಿಷತ್ ಸದಸ್ಯರನ್ನು ಅಭಿನಂದಿಸಿದರು. ಬಳಿಕ ಮಾತನಾಡಿದ ಅವರು, ಬಿಜೆಪಿ–ಜೆಡಿಎಸ್‌ನ ಎಲ್ಲಾ ಕಾರ್ಯಕರ್ತರು, ಮುಖಂಡರ ಪರಿಶ್ರಮದಿಂದ ಕೆ.ವಿವೇಕಾನಂದ ಅವರು ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ದಾಖಲೆಯ ಜಯ ಸಾಧಿಸಿದ್ದಾರೆ. ಒಂದು ಪಕ್ಷಕ್ಕೆ ಮೋಸ ಮಾಡಿ, ಇನ್ನೊಂದು ಪಕ್ಷಕ್ಕೆ ಹೋಗಿ ದರ್ಪ ತೋರಿದವರಿಗೆ ತಕ್ಕ ಪಾಠ ಕಲಿಸಿದ್ದಾರೆ. ಕೆ.ವಿವೇಕಾನಂದ ಅವರು, ವೈಯಕ್ತಿಕವಾಗಿ ಸ್ನೇಹಿತರೂ ಆಗಿದ್ದು, ಅವರ ಗೆಲುವು ನಮ್ಮೆಲ್ಲರ ಗೆಲುವಾಗಿದೆ. ಬಿ–ಫಾರಂ ಪಡೆದಾಗಿನಿಂದ ಚುನಾವಣೆಯನ್ನು ಗೌರವಯುತವಾಗಿ ನಡೆಸಿದ್ದಾರೆ ಎಂದರು.

ರಾಜ್ಯದ ಶಿಕ್ಷಣ ಸಚಿವರಿಗೆ ಶಿಕ್ಷಕರ ಸಂಖ್ಯೆ ಎಷ್ಟೆಂಬುದೇ ಗೊತ್ತಿಲ್ಲ. ಎನ್‌ಇಪಿ ಜಾರಿಗೊಳಿಸದೆ ಬ್ರಿಟಿಷರು ಕೊಟ್ಟಂತಹ ಶಿಕ್ಷಣ ವ್ಯವಸ್ಥೆಯನ್ನೇ ಪಾಲಿಸುತ್ತಿದ್ದಾರೆ. ಇದರಿಂದ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಲ್ಲಿ ಗೊಂದಲ ಉಂಟಾಗಿದ್ದು, ಕೂಡಲೇ ಶಿಕ್ಷಕರ ಸಮಸ್ಯೆಗಳು, ಗೊಂದಲಗಳು ನಿವಾರಣೆಯಾಗಬೇಕು. ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸುವ ಹಾಗೂ ಗೊಂದಲಗಳನ್ನು ನಿವಾರಿಸುವ ನಿಟ್ಟಿನಲ್ಲಿ ನೂತನ ವಿಧಾನ ಪರಿಷತ್ ಸದಸ್ಯರು ಕಾರ್ಯ ನಿರ್ವಹಿಸಲಿದ್ದಾರೆ ಎಂಬ ನಂಬಿಕೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ತೊಂಟದಾರ್ಯ ಮಾತನಾಡಿ, ಭಾರತವಿಂದು ವಿಶ್ವಮಾನ್ಯವಾಗಿದೆ. ಇದಕ್ಕೆ ಪ್ರಧಾನಿ ನರೇಂದ್ರ ಮೋದಿಯವರ ಅಭಿವೃದ್ಧಿ ಸಂಕಲ್ಪವೇ ಕಾರಣ. ಶಿಕ್ಷಣ ಕ್ಷೇತ್ರದಲ್ಲಿ ಹಲವು ಕಠಿಣ ಸವಾಲುಗಳಿವೆ. ಶಿಕ್ಷಣ ಕ್ಷೇತ್ರದಲ್ಲಿ ರಾಷ್ಟ್ರೀಯ ದೃಷ್ಟಿಕೋನ ಅಳವಡಿಸಿಕೊಂಡು ಅಭಿವೃದ್ಧಿ ಮಾಡಬೇಕಿದೆ. ನಮ್ಮ ವಿದ್ಯಾರ್ಥಿಗಳನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುವ ಜ್ಞಾನಶೀಲರನ್ನಾಗಿಸಬೇಕು ಎಂದರು. ಬಿಜೆಪಿ ನಗರ ಉಪಾಧ್ಯಕ್ಷ ರಮೇಶ್, ಗ್ರಾಮಾಂತರ ವಿಭಾಗದ ಉಪಾಧ್ಯಕ್ಷ ದಾಸಯ್ಯ, ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಮಹಿಳಾ ಮೋರ್ಚಾದ ಹೇಮ ನಂದೀಶ್, ಮುಖಂಡರಾದ ಬಿ.ಎಂ. ರಘು, ಕೇಬಲ್ ಮಹೇಶ್, ವಸಂತ್ ಕುಮಾರ್, ರೇಣುಕಾ, ದಿನೇಶ್‌ಗೌಡ, ಕಿರಣ್ ಜಯರಾಮ್ ಮತ್ತಿತರರಿದ್ದರು.

'ಆನೆ' ತರ ನಿಲ್ಲಿಸಿ, ಗೆಲ್ಲಿಸಿದ್ದೀರಿ...!

ಗ್ರಾಮ ಪಂಚಾಯಿತಿ ಚುನಾವಣೆಯಲ್ಲೂ ಗೆಲ್ಲದ ನನ್ನನ್ನು 24 ವರ್ಷದ ಅನುಭವಿ ಹುಲಿ–ಸಿಂಹದ ವಿರುದ್ಧ ಆನೆ ತರ ನಿಲ್ಲಿಸಿ, ಗೆಲ್ಲಿಸಿದ್ದೀರಿ ಎಂದು ವಿಧಾನ ಪರಿಷತ್ ನೂತನ ಸದಸ್ಯ ಕೆ.ವಿವೇಕಾನಂದ, ಬಿಜೆಪಿ–ಜೆಡಿಎಸ್ ಕಾರ್ಯಕರ್ತರು, ಮುಖಂಡರಿಗೆ ಧನ್ಯವಾದ ತಿಳಿಸಿದರು.

ಕೇವಲ 20 ದಿನಗಳಲ್ಲಿ ಎನ್‌ಡಿಎ ಅಭ್ಯರ್ಥಿಯಾಗಿ ಕಣಕ್ಕಿಳಿಸಿದ್ದೀರಿ. ನಾನು ಗ್ರಾಪಂ ಚುನಾವಣೆಯಲ್ಲೂ ಗೆದ್ದಿಲ್ಲ. 24 ವರ್ಷದ ಅನುಭವಿ ಹುಲಿ–ಸಿಂಹದ ವಿರುದ್ಧ ನೀನ್ ಹೆಂಗೇ ಗೆಲ್ತಿಯಾ...ಎನ್ನುತ್ತಿದ್ದರು. ಆದರೆ ನನ್ನಂತಹವನನ್ನು ನೀವೆಲ್ಲರೂ ಜೊತೆಗೂಡಿ ಶಕ್ತಿ ತುಂಬಿ ಆನೆ ತರ ನನ್ನನ್ನು ನಿಲ್ಲಿಸಿ ಗೆಲ್ಲಿಸಿದ್ದೀರಿ ಈ ಗೆಲುವು ನಿಮಗೆಲ್ಲರಿಗೂ ಅರ್ಪಿತ ಎಂದರು.

ದೊಡ್ಡಗೌಡ(ಹೆಚ್.ಡಿ.ದೇವೇಗೌಡ)ರನ್ನು ಗೆದ್ದ ನಂತರ ಭೇಟಿ ಮಾಡಲು ಹೋಗಿದ್ದಾಗ ಅವರು, ನನ್ನನ್ನು ಕರೆದು ನೀನು ಹುಲಿ ಮೇಲೆ ಗೆದ್ದಿದ್ದಿಯಾ ಎಂದು ಬೆನ್ನು ತಟ್ಟಿದರು. 24 ವರ್ಷದಿಂದ ಒಬ್ಬರೇ ಗೆಲ್ಲುತ್ತಿದ್ದವರ ವಿರುದ್ಧ ಧೈರ್ಯ ತುಂಬಿ ನಿಲ್ಲಿಸಿ, ಗೆಲ್ಲಿಸಿದ್ದೀರಿ. ಶಿಕ್ಷಕರ ಹಾಗೂ ನಿಮ್ಮೆಲ್ಲರ ಸೇವೆ ಮಾಡುತ್ತೇನೆ ಎಂದು ಭರವಸೆ ನೀಡಿದರಲ್ಲದೆ ನೆರೆದಿದ್ದವರಿಗೆ ದೀರ್ಘದಂಡ ನಮಸ್ಕರಿಸಿದರು.

ಕಾಡಾನೆ ದಾಳಿ: ಮಹಿಳೆ ಕೈಗೆ ಗಾಯ



ಸುಂಟಿಕೊಪ್ಪ, ಜೂ.8– ಮತ್ತಿಕಾಡುವಿನ ಕಾಫಿ ತೋಟವೊಂದರಲ್ಲಿ ಕೆಲಸ ನಿರ್ವಹಿಸುತ್ತಿದ್ದಸುನಿತಾ ಎಂಬಾಕೆಮೇಲೆ ಕಾಡಾನೆಯೊಂದು ದಾಳಿ ನಡೆಸಿದ್ದು ಮಹಿಳೆಯೋರ್ವರ ಕೈಗೆ ಗಾಯಗಳಾಗಿರುವ ಬಗ್ಗೆ ವರದಿಯಾಗಿದೆ. ಶನಿವಾರ ಬೆಳಿಗ್ಗೆ 10.30ರ ಸಮಯದಲ್ಲಿ ಮತ್ತಿಕಾಡುವಿನ ಮುನ್ಸಿಪ್ ತೋಟದಲ್ಲಿ 5 ಜನ ಕಾರ್ಮಿಕರು ಎಂದಿನಂತೆ ತೋಟದ ಕೆಲಸದಲ್ಲಿ ನಿರತರಾಗಿದ್ದರು. ಈ ಸಂದರ್ಭದಲ್ಲಿ ಏಕಾಏಕಿ ಕಾಡಾನೆಯೊಂದು ಪ್ರತ್ಯಕ್ಷಗೊಂಡಿದೆ. ಇದರಿಂದ ಗಾಬರಿಗೊಂಡ 4 ಮಂದಿ ಕಾರ್ಮಿಕರು ಕಿರುಚಿಕೊಂಡು ಓಡಿ ಹೋಗಿದ್ದು, ಅನತಿ ದೂರದಲ್ಲಿದ್ದ ಸುನಿತಾ(32) ಎಂಬಾಕೆಯ ಮೇಲೆ ಕಾಡಾನೆ ದಾಳಿ ನಡೆಸಲು ಮುಂದಾಗಿದೆ. ಜೊತೆಯಲ್ಲಿದ್ದ ಕಾರ್ಮಿಕರ ಚೀರಾಟಕ್ಕೆ ಕಾಡಾನೆ ಹೆಚ್ಚಿನ ಅನಾಹುತಕ್ಕೆ ಮುಂದಾಗದೆ ಮಹಿಳೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಗಾಯಗೊಂಡ ಮಹಿಳೆಯನ್ನು ಅರಣ್ಯ ಇಲಾಖೆಯ ಸಿಬ್ಬಂದಿಗಳು ಸುಂಟಿಕೊಪ್ಪ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿ ಜಿಲ್ಲಾಸ್ಪತ್ರೆಗೆ ಸ್ಥಳಾಂತರಿಸಿದರು.

ವಿಚಾರ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಅರಣ್ಯ ಇಲಾಖೆಯ ಅರಣ್ಯಾಧಿಕಾರಿಗಳು ಹಾಗೂ ಆರ್‌ಆರ್‌ಟಿ ತಂಡದವರು ಆಗಮಿಸಿ ಪರಿಶೀಲನೆ ನಡೆಸಿದರು. ಬಳಿಕ ಕಾಡಾನೆಗಳನ್ನು ಕಾಡಿಗೆ ಅಟ್ಟುವ ಕಾರ್ಯಾಚರಣೆ ನಡೆಸಿದರು.

ಭೂ ಪರಿವರ್ತನೆ ವಿರುದ್ಧ ನಾಳೆ ಸಿಎನ್‌ಸಿಯಿಂದ ಜನಜಾಗೃತಿ



ಎನ್.ಯು.ನಾಚಪ್ಪ

ಮಡಿಕೇರಿ, ಜೂ.8– ಸಿದ್ದಾಪುರದ ಕಾಫಿ ತೋಟದ ಬೃಹತ್ ಭೂ ಪರಿವರ್ತನೆ ಸೇರಿದಂತೆ ಕೊಡಗು ಜಿಲ್ಲೆಯಾದ್ಯಂತ ನಡೆಯುತ್ತಿರುವ ಭೂ ಪರಿವರ್ತನೆಗಳ ವಿರುದ್ಧ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಜೂ.10 ರಂದು ಬಾಳೆಲೆಯಲ್ಲಿ ಮಾನವ ಸರಪಳಿ ಜನ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ತಿಳಿಸಿದ್ದಾರೆ.

ಸೋಮವಾರ ಬೆಳಿಗ್ಗೆ 10.30 ಗಂಟೆಗೆ ಬಾಳೆಲೆ ಪಟ್ಟಣದಲ್ಲಿ ಮಾನವ ಸರಪಳಿ ನಿರ್ಮಿಸಿ ಜಿಲ್ಲೆಯಲ್ಲಿ ನಡೆಯುತ್ತಿರುವ ಭೂ ಪರಿವರ್ತನೆ ವಿರುದ್ಧ ಹಕ್ಕೊತ್ತಾಯ ಮಂಡಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಕಾಫಿ ತೋಟಗಳ ಭೂಪರಿವರ್ತನೆಯಿಂದ ಕೊಡಗಿನ ಎಲ್ಲಾ ಗ್ರಾಮಗಳು ನಾಶವಾಗುತ್ತಿವೆ. ಮಣ್ಣು ಅಗೆಯುವ ಕೆಲಸದಿಂದ ಬಹುವಾರ್ಷಿಕ ಜಲಮೂಲಗಳ ಕೇಂದ್ರಗಳು ಈಗಾಗಲೇ ಮುಚ್ಚಿವೆ. ಈ ಬಗ್ಗೆ ಜಿಲ್ಲೆಯ ಜನರಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ. ಇದರೊಂದಿಗೆ ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆ, ಎಸ್.ಟಿ ಟ್ಯಾಗ್, ಕೊಡವರ ಆಂತರಿಕ ರಾಜಕೀಯ ಸ್ವಯಂ ನಿರ್ಣಯದ ಹಕ್ಕುಗಳನ್ನು ಮಾನ್ಯ ಮಾಡಬೇಕು ಸೇರಿದಂತೆ ಇಡೀ ಕೊಡವ ಜನಾಂಗದ ಪರವಾಗಿ ಪ್ರತಿಜ್ಞಾ ವಿಧಿ ಸ್ವೀಕರಿಸಲಾಗುವುದು ಎಂದು ಹೇಳಿದ್ದಾರೆ.

ಕೊಡವ ಬುಡಕಟ್ಟು ಜನಾಂಗದ ಶ್ರೀಮಂತ ಜಾನಪದ ಪರಂಪರೆ ಮತ್ತು ಭೂಮಿಯೊಂದಿಗೆ ಬೆಸೆದುಕೊಂಡಿರುವ ಕೊಡವರ ಯೋಧರ ಪರಂಪರೆ ಮತ್ತು ಈ ಮಣ್ಣಿನಲ್ಲಿ ನಮ್ಮ ಐತಿಹಾಸಿಕ ನಿರಂತರತೆಗಾಗಿ ಸ್ವಯಂ–ಆಡಳಿತವನ್ನು ಸಂವಿಧಾನದ ವಿಧಿ 244, 371 ಆರ್/ಡಬ್ಲ್ಯೂ 6 ಮತ್ತು 8ನೇ ಶೆಡ್ಯೂಲ್ ಮತ್ತು ಆಂತರಿಕ ರಾಜಕೀಯ ಸ್ವ–ನಿರ್ಣಯ ಹಕ್ಕುಗಳು ವಿಶ್ವ ರಾಷ್ಟ್ರಸಂಸ್ಥೆ ಹೊರಡಿಸಿರುವ ಆದಿಮಸಂಜಾತ ಜನಾಂಗದ ಹಕ್ಕುಗಳ ಅಂತಾರಾಷ್ಟ್ರೀಯ ಕಾನೂನಿನಡಿಯಲ್ಲಿ ಕೊಡವರನ್ನು ರಕ್ಷಿಸಬೇಕಾದ ಅನಿವಾರ್ಯತೆ ಇದೆ ಎಂದು ನಾಚಪ್ಪ ಪ್ರತಿಪಾದಿಸಿದ್ದಾರೆ.

ಮುಂದಿನ ದಿನಗಳಲ್ಲಿ ಮಡಿಕೇರಿ, ಸುಂಟಿಕೊಪ್ಪ, ಮಾದಾಪುರ, ಚೆಟ್ಟಳ್ಳಿ, ಚೇರಂಬಾಣೆ, ಮೂರ್ನಾಡು, ಕಕ್ಕಬೆ, ನಾಪೋಕ್ಲು, ವಿರಾಜಪೇಟೆ, ಸಿದ್ದಾಪುರ, ಗೋಣಿಕೊಪ್ಪ, ತಿತಿಮತಿ, ಬಾಳೆಲೆ, ಪೊನ್ನಂಪೇಟೆ, ಹುದಿಕೇರಿ, ಕುಟ್ಟ, ಶ್ರೀಮಂಗಲ, ಟಿ.ಶೆಟ್ಟಿಗೇರಿ ಮತ್ತಿತರೆಡೆ ಕೂಡ ಶಾಂತಿಯುತ ಮಾನವ ಸರಪಳಿ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದ್ದಾರೆ.

ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಶಾಲಾ ಬಸ್ಸು

ವಿದ್ಯಾರ್ಥಿಗಳಿಲ್ಲದಿದ್ದರಿಂದ ತಪ್ಪಿದ ಭಾರಿ ಅನಾಹುತ



ಮಡಿಕೇರಿ, ಜೂ.8– ಚಾಲಕನ ನಿಯಂತ್ರಣ ಕಳೆದುಕೊಂಡು ಶಾಲಾ ಬಸ್ಸೊಂದು ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಘಟನೆ ನಾಪೋಕ್ಲು ಭಾಗಮಂಡಲ ಮುಖ್ಯ ರಸ್ತೆಯ ಹಳೇ ತಾಲೂಕಿನಲ್ಲಿ ಸಂಭವಿಸಿದ್ದು, ಬಸ್ಸಿನಲ್ಲಿ ವಿದ್ಯಾರ್ಥಿಗಳು ಇಲ್ಲದಿದ್ದರಿಂದ ಭಾರಿ ಅನಾಹುತ ತಪ್ಪಿದೆ.

ನಾಪೋಕ್ಲುವಿನ ಖಾಸಗಿ ವಿದ್ಯಾಸಂಸ್ಥೆಗೆ ಸೇರಿದ ಬಸ್, ಎಮ್ಮೆಮಾಡು ಪಡಿಯಾಣಿ ಭಾಗಕ್ಕೆ ವಿದ್ಯಾರ್ಥಿಗಳನ್ನು ಬಿಟ್ಟು ನಾಪೋಕ್ಲುವಿಗೆ ಹಿಂತಿರುಗಿ ಬರುವ ಸಂದರ್ಭ ಹಳೇ ತಾಲೂಕು ಬಳಿಯ ರಸ್ತೆ ತಿರುವಿನಲ್ಲಿ ಎದುರಿನಿಂದ ವಾಹನ ಬಂದ ಹಿನ್ನೆಲೆಯಲ್ಲಿ ಚಾಲಕನ ನಿಯಂತ್ರಣ ತಪ್ಪಿದ ಬಸ್ ರಸ್ತೆ ಬದಿಯಲ್ಲಿದ್ದ ವಿದ್ಯುತ್ ಕಂಬಕ್ಕೆ ಅಪ್ಪಳಿಸಿದೆ.

ಅಪಘಾತದಿಂದ ವಿದ್ಯುತ್ ಕಂಬ ಮುರಿದು ಹೋಗಿದ್ದು ಶಾಲಾ ವಾಹನಕ್ಕೂ ಹಾನಿಯಾಗಿದೆ. ಅದೃಷ್ಟವಶಾತ್ ಬಸ್ಸಿನಲ್ಲಿ ಯಾವುದೇ ವಿದ್ಯಾರ್ಥಿಗಳು ಇಲ್ಲದ ಪರಿಣಾಮ ಹೆಚ್ಚಿನ ಅನಾಹುತ ತಪ್ಪಿದ್ದು ಬಸ್ ಚಾಲಕ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸ್ಥಳಕ್ಕೆ ನಾಪೋಕ್ಲು ಸೆಸ್ಕ್ ಇಲಾಖೆಯ ಅಭಿಯಂತರ ಹರೀಶ್ ಹಾಗೂ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲಿಸಿ ವಿದ್ಯುತ್ ಕಂಬ ಮರು ಸ್ಥಾಪಿಸಲು ಕ್ರಮ ಕೈಗೊಂಡಿದ್ದಾರೆ.

ಕಾನೂನು ಗೌರವಿಸಿ, ರಸ್ತೆ ಸುರಕ್ಷತಾ ನಿಯಮ ಪಾಲಿಸಿ

ವಾಹನ ಸವಾರರಿಗೆ ಪೊಲೀಸ್ ಅಧಿಕಾರಿಯಿಂದ ಪಾಠ



ನಾಪೋಕ್ಲು ಚೆರಿಯಪರಂಬುವಿನ ಕರ್ನಾಟಕ ಪಬ್ಲಿಕ್ ಶಾಲಾ ಮೈದಾನದಲ್ಲಿ ಸ್ಥಳೀಯ ಯುವಕರಿಗೆ ಹಾಗೂ ವಾಹನ ಸವಾರರಿಗೆ ಪೊಲೀಸ್ ಠಾಣೆಯ ಠಾಣಾಧಿಕಾರಿ ಮಂಜುನಾಥ್ ರಸ್ತೆ ಸುರಕ್ಷತಾ ನಿಯಮಗಳನ್ನು ಎಲ್ಲರೂ ಕಡ್ಡಾಯವಾಗಿ ಪಾಲಿಸಿ ಕಾನೂನುಗಳನ್ನು ಗೌರವಿಸಬೇಕು ಎಂದು ಕಾನೂನು ಅರಿವು ಮೂಡಿಸಿದರು.

ನಾಪೋಕ್ಲು, ಜೂ.8– ಚಾಲನಾ ಪರವಾನಗಿ, ಸೂಕ್ತ ದಾಖಲೆಗಳು ಇಲ್ಲದೇ ವಾಹನಗಳನ್ನು ಚಲಾಯಿಸಬಾರದು ಎಂದು ನಾಪೋಕ್ಲು ಪೊಲೀಸ್ ಠಾಣೆಯ ಠಾಣಾಧಿಕಾರಿ ಮಂಜುನಾಥ್ ತಿಳಿಸಿದರು.

ಸಮೀಪದ ಚೆರಿಯಪರಂಬುವಿನ ಕರ್ನಾಟಕ ಪಬ್ಲಿಕ್ ಶಾಲಾ(kps) ಮೈದಾನದಲ್ಲಿ ಶನಿವಾರ ಸ್ಥಳೀಯ ಯುವಕರಿಗೆ ಹಾಗೂ ವಾಹನ ಸವಾರರಿಗೆ ತಿಳಿಹೇಳಿದ ಅವರು ಜೀವ ಅಮೂಲ್ಯವಾದುದು. ರಸ್ತೆ ಸುರಕ್ಷತಾ ನಿಯಮಗಳನ್ನು ಎಲ್ಲರೂ ಕಡ್ಡಾಯವಾಗಿ ಪಾಲಿಸಿ ಕಾನೂನುಗಳನ್ನು ಗೌರವಿಸಬೇಕು ಎಂದರು.

ವಾಹನ ಸವಾರರನ್ನು ತಪಾಸಣೆ ಮಾಡಿ ಹೆಲ್ಮೆಟ್ ಹಾಕದೇ ಚಲಾಯಿಸದವರಿಗೆ, ಇನ್ಸೂರೆನ್ಸ್ ಇಲ್ಲದ, ಸೀಟ್ ಬೆಲ್ಟ್ ಇಲ್ಲದೆ ಚಾಲನೆ ಮಾಡಿದವರಿಗೆ, ಬೈಕ್‌ಗಳಲ್ಲಿ ಎರಡಕ್ಕಿಂತ ಹೆಚ್ಚು ಮಂದಿ ಕುಳಿತು ಪ್ರಮಾಣಿಸುವವರಿಗೆ ಸಾಗಿದವರಿಗೆ ತಿಳುವಳಿಕೆ ಮೂಡಿಸಿ, ಎಚ್ಚರಿಕೆ ನೀಡಲಾಯಿತು. ಚಾಲನಾ ಪರವಾನಗಿ ಇಲ್ಲದೆ ವಾಹನ ಚಲಾಯಿಸುವುದು, ಪಟ್ಟಣ ವ್ಯಾಪ್ತಿಯಲ್ಲಿ ಎಲ್ಲೆಂದರಲ್ಲಿ ವಾಹನ ನಿಲುಗಡೆ ಮಾಡಿ ಸಂಚಾರಿ ವಾಹನಗಳಿಗೆ ಜನಸಾಮಾನ್ಯರಿಗೆ ಅಡ್ಡಿಪಡಿಸುವುದು, ಅಪ್ರಾಪ್ತ ಯುವಕರು ವಾಹನ ಚಾಲನೆ ಮಾಡುವುದು ಕಂಡುಬಂದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಈ ಸಂದರ್ಭ ಎಚ್ಚರಿಕೆ ನೀಡಲಾಯಿತು.

ಯುವಕರು ನಾವು ಹೆಲ್ಮೆಟ್ ಹಾಕಿ ಕಾನೂನು ಪಾಲನೆ ಮಾಡಿ ಸಹಕರಿಸುವುದಾಗಿ ಠಾಣಾಧಿಕಾರಿಗೆ ಭರವಸೆಯನ್ನು ನೀಡಿದರು.

ಮೋದಿ ಮತ್ತೆ ಪ್ರಧಾನಿಯಾಗಿ ಅಧಿಕಾರ ಸ್ವೀಕಾರ: ಇಂದು ಜಿಲ್ಲೆಯಾದ್ಯಂತ ಶ್ರಮದಾನ

ಮಡಿಕೇರಿ, ಜೂ.8– ದೇಶದ ಹೆಮ್ಮೆಯ ಸಮರ್ಥ ನಾಯಕ ನರೇಂದ್ರ ಮೋದಿ ಅವರು ಜೂ.9ರಂದು ಮೂರನೇ ಬಾರಿಗೆ ಪ್ರಧಾನಮಂತ್ರಿಯಾಗಿ ಅಧಿಕಾರವಹಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಬಿಜೆಪಿ ವತಿಯಿಂದ ಕೊಡಗು ಜಿಲ್ಲೆಯಾದ್ಯಂತ ಸ್ವಚ್ಛತಾ ಕಾರ್ಯ ಮತ್ತು ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪಕ್ಷದ ಜಿಲ್ಲಾ ವಕ್ತಾರ ಸುಬ್ರಮಣ್ಯ ಉಪಾಧ್ಯಾಯ ತಿಳಿಸಿದ್ದಾರೆ.

ಭಾನುವಾರ ಸಂಜೆ ದೇಶದ ಪ್ರಧಾನಿಯಾಗಿ ನರೇಂದ್ರ ಮೋದಿ ಅವರು ಪ್ರಮಾಣ ವಚನ ಸ್ವೀಕರಿಸುವುದಕ್ಕೂ ಮೊದಲು ಜಿಲ್ಲೆಯ ನಗರ, ಗ್ರಾಮಾಂತರ ಮಂಡಲ ಸೇರಿದಂತೆ ಎಲ್ಲಾ ಮಂಡಲ ಮತ್ತು ಎಲ್ಲಾ ಶಕ್ತಿ ಕೇಂದ್ರಗಳಲ್ಲಿ, ಶಕ್ತಿ ಕೇಂದ್ರದ ಹಾಗೂ ಮಂಡಲದ ಪ್ರಮುಖರು, ಸಹ ಪ್ರಮುಖರು, ಚುನಾಯಿತ ಜನಪ್ರತಿನಿದಿನಗಳು, ಎಲ್ಲಾ ಮೋರ್ಚಾಗಳ ಅಧ್ಯಕ್ಷರು, ಪದಾಧಿಕಾರಿಗಳು, ಮಂಡಲದ ಪದಾಧಿಕಾರಿಗಳು, ಜಿಲ್ಲಾ ಪದಾಧಿಕಾರಿಗಳು, ಬೂತ್ ಅಧ್ಯಕ್ಷರು, ಸಮಿತಿ ಸದಸ್ಯರು, ಪಕ್ಷದ ಹಿರಿಯ, ಕಿರಿಯ ಕಾರ್ಯಕರ್ತರು, ಹಿತೈಷಿಗಳು ಸ್ವಚ್ಛತಾ ಕಾರ್ಯ ಮತ್ತು ಗಿಡ ನೆಡುವ ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳಲಿದ್ದಾರೆ.

ಆ ಮೂಲಕ ವಿಶ್ವಗುರು ನರೇಂದ್ರ ಮೋದಿ ಅವರಿಗೆ ಬೆಂಬಲ ಸೂಚಿಸಿ ಅಭಿನಂದನೆಯನ್ನು ಸಲ್ಲಿಸಲಾಗುವುದು ಎಂದು ಸುಬ್ರಮಣ್ಯ ಉಪಾಧ್ಯಾಯ ಪತ್ರಿಕಾ ಹೇಳಿಕೆ ನೀಡಿದ್ದಾರೆ.

ಕ್ರೀಡಾ ಚಟುವಟಿಕೆಗಳಿಂದ ಮಕ್ಕಳಲ್ಲಿ ಬದಲಾವಣೆ ಸಾಧ್ಯ



ವಿರಾಜಪೇಟೆ, ಜೂ.8– ಪುಟ್ಟ ಮಕ್ಕಳ ಭವಿಷ್ಯವನ್ನು ರೂಪಿಸಲು ಬೇಸಿಗೆ ಶಿಬಿರಗಳು ಅಗತ್ಯ. ಗ್ರಾಮೀಣ ಪ್ರದೇಶದಲ್ಲಿರುವ ಮಕ್ಕಳು ವೃತ್ತಿಪರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಅತ್ಯಂತ ಉಪಯುಕ್ತ ಎಂದು ವಿರಾಜಪೇಟೆ ರೋಟರಿ ಶಾಲೆಯ ಮುಖ್ಯೋಪಾಧ್ಯಾಯಿನಿ ವಿಶಾಲಾಕ್ಷಿ ಅಭಿಪ್ರಾಯಪಟ್ಟರು.

ನಾಟ್ಯಾಂಜಲಿ ನೃತ್ಯ ಸಂಸ್ಥೆ ವತಿಯಿಂದ ವಿದ್ಯಾರ್ಥಿಗಳಿಗೆ ರೋಟರಿ ಶಾಲಾ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಒಂದು ತಿಂಗಳ 'ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ'ದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ಪರೀಕ್ಷೆಗಳ ನಂತರ ಬೇಸಿಗೆ ಶಿಬಿರಗಳನ್ನು ಆಯೋಜಿಸುವ ಪರಿಪಾಠ ವಿವಿಧೆಡೆ ನಡೆಯುತ್ತಿದೆ. ಹಾಕಿ, ಕ್ರಿಕೆಟ್ ಸೇರಿದಂತೆ ಇತರ ಕ್ರೀಡಾ ಚಟುವಟಿಕೆಗಳಿಂದ ಮಕ್ಕಳಲ್ಲಿ ಬದಲಾವಣೆ ನಿರೀಕ್ಷಿಸಬಹುದು. ಸ್ವತಂತ್ರವಾಗಿ ಬದುಕುವ ವ್ಯವಸ್ಥೆಯನ್ನು ಇಂತಹ ಶಿಬಿರದಲ್ಲಿ ಕಲಿಸಿಕೊಡುವುದು ಶ್ಲಾಘನೀಯ ಎಂದರು.

ಸಾಹಿತಿ ರಜಿತ ಕಾರ್ಯಪ್ಪ ಮಾತನಾಡಿ, ಮಕ್ಕಳ ಭವಿಷ್ಯ ನಿರ್ಮಿಸುವ ಕಾರ್ಯಕ್ಕೆ ಮುಂದಾಗಿರುವ ನೃತ್ಯ ಸಂಸ್ಥೆಯ ಉತ್ತಮ ಕಾರ್ಯ. ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಮಕ್ಕಳು ಮೊಬೈಲ್ ಮೊರೆ ಹೋಗುತ್ತಿದ್ದಾರೆ. ಅಳುವ ಮಗುವನ್ನು ಸಮಾಧಾನಗೊಳಿಸಲು ಪೋಷಕರೇ ಇಂದು ಮಕ್ಕಳ ಕೈಗೆ ಮೊಬೈಲ್ ಕೊಡುವ ವ್ಯವಸ್ಥೆಗೆ ತಲುಪಿದೆ. ಶಿಬಿರಗಳಲ್ಲಿ ಪಾಲ್ಗೊಳ್ಳುವುದರಿಂದ ಉತ್ತಮ ಹವ್ಯಾಸಗಳನ್ನು ವೃದ್ಧಿಸಿಕೊಳ್ಳಬಹುದು ಎಂದರು. ಶಿಬಿರದ ಆಯೋಜಕರಾದ ನಾಟ್ಯಾಂಜಲಿ ನೃತ್ಯ ಸಂಸ್ಥೆಯ ಸಂಸ್ಥಾಪಕಿ ವಿದುಷಿ ಹೇಮಾವತಿ ಕಾಂತರಾಜ್ ಅಧ್ಯಕ್ಷತೆ ವಹಿಸಿ ಮಾತನಾಡಿ ಶಿಬಿರದಲ್ಲಿ ಪಡೆದ ತರಬೇತಿ ಮಕ್ಕಳ ಜೀವನದ ಮೇಲೆ ಸಾಕಷ್ಟು ಪರಿಣಾಮ ಬೀರಲಿದೆ ಎಂದರು.

ಶಿಬಿರಾರ್ಥಿಗಳ ಪೋಷಕರು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ಶಿಬಿರದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ಹಾಗೂ ಅರ್ಹತಾ ಪತ್ರ ವಿತರಿಸಿ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ನೃತ್ಯ ತರಬೇತುದಾರರಾದ ಕಾವ್ಯಶ್ರೀ ಕಾಂತರಾಜ್, ಸಂಸ್ಥೆಯ ಹಿರಿಯ ವಿದ್ಯಾರ್ಥಿಗಳಾದ ಕೌಶಿ ಕಾವೇರಮ್ಮ, ದೃಶ್ಯ, ಧನ್ಯಶ್ರೀ, ಬಿಯಾಂಕಾ, ತಷ್ಮ ತಂಗಮ್ಮ, ಗಹನ, ಶ್ರೇಯ, ರೋಹನ್ ಮತ್ತು ಶಿಬಿರಾರ್ಥಿಗಳು ಉಪಸ್ಥಿತರಿದ್ದರು. ಅಧಿಕ ವಿದ್ಯಾರ್ಥಿಗಳು ಶಿಬಿರದಲ್ಲಿ ಪಾಲ್ಗೊಂಡಿದ್ದರು.

ಅಪಘಾತದಲ್ಲಿ ಜಿಂಕೆ, ಸೀಳುನಾಯಿ ಸಾವು: ವಾಹನ ಸಹಿತ ಇಬ್ಬರು ವಶಕ್ಕೆ



ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿರುವ ಸೀಳುನಾಯಿ ಹಾಗೂ ಜಿಂಕೆ.

ಗುಂಡ್ಲುಪೇಟೆ, ಜೂ.8– ತಾಲೂಕಿನ ಬಂಡೀಪುರ ಅರಣ್ಯದ ಕೇರಳ ರಸ್ತೆಯಲ್ಲಿ ಕಾರು ಡಿಕ್ಕಿ ಹೊಡೆದು ಜಿಂಕೆ ಹಾಗೂ ಸೀಳುನಾಯಿಗಳ ಸಾವಿಗೆ ಕಾರಣನಾದ ಆರೋಪಿಯನ್ನು ಬಂಧಿಸಿದೆ.

ಗುಂಡ್ಲುಪೇಟೆ ಉಪ ವಿಭಾಗ ಬತ್ತೇರಿ ರಾಷ್ಟ್ರೀಯ ಹೆದ್ದಾರಿಯ ಮೊದಲನೇ ಚೈನ್‌ಗೇಟ್ ಬಳಿ ಶುಕ್ರವಾರ ಮುಸ್ಸಂಜೆ ವೇಳೆಯಲ್ಲಿ ಕೇರಳ ಕಡೆ ತೆರಳುತ್ತಿದ್ದ ಇನ್ನೋವಾ ಕಾರು ಡಿಕ್ಕಿ ಹೊಡೆದ ಪರಿಣಾಮ 5 ವರ್ಷದ ಒಂದು ಗಂಡು ಕಾಡುನಾಯಿ (ಡೋಲ್) ಹಾಗೂ 3 ವರ್ಷದ ಒಂದು ಗಂಡು ಜಿಂಕೆ ಸಾವನ್ನಪ್ಪಿರುತ್ತವೆ. ವಿಷಯ ತಿಳಿದ ಕೂಡಲೇ ಕಾರನ್ನು ಬೆನ್ನಟ್ಟಿದ ಸಿಬ್ಬಂದಿಗಳು ಅಪಘಾತ ನಡೆಸಿದ ಸುಲ್ತಾನ್ ಭತ್ತೇರಿ ನಿವಾಸಿ ಚಾಲಕ ಸನ್ನಿಯನ್ನು ವಶಕ್ಕೆ ಪಡೆದರು. ಬಂಡೀಪುರ ಹುಲಿಯೋಜನೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಎಸ್. ಪ್ರಭಾಕರನ್ ಮಾರ್ಗದರ್ಶನದಂತೆ ಗುಂಡ್ಲುಪೇಟೆ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಜಿ. ರವೀಂದ್ರ ಬಂಧಿತ ಆರೋಪಿಯನ್ನು ವಿಚಾರಣೆ ನಡೆಸಿ ಮೃತ ವನ್ಯಪ್ರಾಣಿಗಳಾದ ಕಾಡುನಾಯಿ ಹಾಗೂ ಜಿಂಕೆಯ ಕಳೇಬರಗಳನ್ನು ಶನಿವಾರ ಇಲಾಖಾ ಪಶುವೈದ್ಯಾಧಿಕಾರಿಗಳಿಂದ ಮರಣೋತ್ತರ ಪರೀಕ್ಷೆಗೆ ಒಳಪಡಿಸಿದ ನಂತರ ಮೃತ ದೇಹಗಳನ್ನು ಅರಣ್ಯ ಪ್ರದೇಶದಲ್ಲಿ ಪ್ರಕೃತಿಗೆ ಬಿಡಲಾಯಿತು. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು

ಈ ಸಂದರ್ಭದಲ್ಲಿ ಮದ್ದೂರು ವಲಯ ಅರಣ್ಯಾಧಿಕಾರಿ ಬಿ.ಎಂ.ಮಲ್ಲೇಶ್, ಉಪ ವಲಯ ಅರಣ್ಯಾಧಿಕಾರಿ ರವಿಕುಮಾರ್ ಸಂಗೂರ, ವನಪಾಲಕರಾದ ಬಾಹುಬಲಿ, ಮಹಮ್ಮದ್ ನಡಾಫ್, ನವೀನ, ವಾಹನ ಚಾಲಕ ಜೀವನ್ ಮತ್ತು ಮನು ಹಾಗೂ ಸಿಬ್ಬಂದಿಗಳು ಹಾಜರಿದ್ದರು


ಕರವೇ ಪದಾಧಿಕಾರಿಗಳಿಗೆ ಸನ್ಮಾನ



ಗುಂಡ್ಲುಪೇಟೆ ಪಟ್ಟಣದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ (ಪ್ರವೀಣ್‌ಶೆಟ್ಟಿ ಬಣ) 10ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಹಿರಿಯ ಪತ್ರಕರ್ತ ಸೋಮಶೇಖರ್ ಸೇರಿದಂತೆ ಜಿಲ್ಲಾ ಘಟಕ ಹಾಗೂ ತಾಲೂಕು ಘಟಕದ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು. ಜಿಲ್ಲಾ ಅಧ್ಯಕ್ಷ ಆರ್.ಮೋಹನ್, ಕಾರ್ಯದರ್ಶಿ ರಿಯಾಜ್ ಪಾಷ, ಇಮ್ರಾನ್, ಮಹಮದ್ ರಫಿ, ಅರುಣ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಉಪ್ಪಾರ ಸಮುದಾಯಕ್ಕೆ ಶಿಕ್ಷಣವೇ ಆಸ್ತಿ

ಭಗೀರಥ ಫೌಂಡೇಷನ್ನಿಂದ ಶ್ರೀ ಮಹರ್ಷಿ ಭಗೀರಥ ಜಯಂತಿ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮ



ಚಾಮರಾಜನಗರದ ಚೆನ್ನಿಪುರ ಮೋಳೆಯಲ್ಲಿರುವ ಭಗೀರಥ ಫೌಂಡೇಷನ್ ಕಚೇರಿಯಲ್ಲಿ ನಡೆದ ಶ್ರೀಮಹರ್ಷಿ ಭಗೀರಥ ಜಯಂತಿ ಕಾರ್ಯಕ್ರಮದಲ್ಲಿ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದಿದ್ದ ಹರ್ಷಿತ, ಸಂಜನಶ್ರೀ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಚಾಮರಾಜನಗರ, ಜೂ. 8– ಉಪ್ಪಾರ ಸಮುದಾಯಕ್ಕೆ ಶಿಕ್ಷಣವೇ ಆಸ್ತಿಯಾಗಿರುವುದರಿಂದ ಸಮುದಾಯದವರು ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕು. ತಾಲೂಕು ಉಪ್ಪಾರ ಸಂಘದ ಅಧ್ಯಕ್ಷ ಪಿ.ಲಿಂಗರಾಜು ಸಲಹೆ ನೀಡಿದರು.

ನಗರದ ಚೆನ್ನಿಪುರ ಮೋಳೆಯಲ್ಲಿರುವ ಭಗೀರಥ ಫೌಂಡೇಷನ್ ಕಚೇರಿಯಲ್ಲಿ ನಡೆದ ಶ್ರೀ ಮಹರ್ಷಿ ಭಗೀರಥ ಜಯಂತಿ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಭಗೀರಥರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು. ಪ್ರಸ್ತುತ ದಿನಗಳಲ್ಲಿ ಸಮುದಾಯದ ಮಕ್ಕಳು ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ.90 ರಷ್ಟು ಫಲಿತಾಂಶ ಪಡೆಯುತ್ತಿರುವುದು ತುಂಬಾ ಖುಷಿಯಾಗಿದೆ. ವಿದ್ಯಾರ್ಥಿಗಳು ದೊಡ್ಡಕನಸ್ಸುನ್ನು ಇಟ್ಟುಕೊಂಡು ಶ್ರದ್ಧೆ, ಭಕ್ತಿಯಿಂದ ವ್ಯಾಸಂಗ ಮಾಡಬೇಕು. ಪೋಷಕರು ಕೂಡ ಮಕ್ಕಳ ವಿದ್ಯಾರ್ಜನೆ ಪ್ರೋತ್ಸಾಹ ನೀಡ ಬೇಕಿದೆ ಎಂದರು.

ಸಮಾಜದಲ್ಲಿ ಉನ್ನತ ಸ್ಥಾನಮಾನ ಗಳಿಸಿ ಬದುಕು ಹಸನು ಮಾಡಿಕೊಳ್ಳಬೇಕಾದರೆ ಶಿಕ್ಷಣ ಅತ್ಯಗತ್ಯವಾಗಿದೆ. ಯಾವುದೇ ಸಮಾಜ ಅಭಿವೃದ್ಧಿ ಹೊಂದಬೇಕಾದರೆ ಡಾ.ಬಿ.ಆರ್. ಅಂಬೇಡ್ಕರ್ ಅವರ ಆಶಯದಂತೆ ಶಿಕ್ಷಣವೇ ಮೂಲವಾಗಿದೆ. ಸರ್ಕಾರ ಅನೇಕ ಸವಲತ್ತುಗಳನ್ನು ನೀಡುತ್ತಿದ್ದರೂ ಕೂಡ ಉಪ್ಪಾರ ಸಮುದಾಯ ಶಿಕ್ಷಣದಿಂದ ವಂಚಿತರಾಗಿರುವುದು ಬಹಳ ನೋವಿನ ಸಂಗತಿಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಬೇರೆ ಬೇರೆ ಸಮಾಜಗಳು ಶಿಕ್ಷಣಕ್ಕೆ ಒತ್ತು ನೀಡಿದ ಕಾರಣದಿಂದ ಅಭಿವೃದ್ಧಿ ಹೊಂದಿ ಉನ್ನತ ಸ್ಥಾನಮಾನ ಪಡೆದು ಮಕ್ಕಳ ಜೀವನವನ್ನು ಹಸನು ಮಾಡುತ್ತಿದ್ದಾರೆ. ಹಾಗಾಗಿ ಉಪ್ಪಾರ ಸಮಾಜವು ಕೂಡ ಬದಲಾವಣೆಯಾಗಬೇಕು. ಮಕ್ಕಳಿಗೆ ಪ್ರೋತ್ಸಾಹ ಕೊಟ್ಟರೆ ಸಮಾಜದಲ್ಲಿ ಒಳ್ಳೆಯ ವಿದ್ಯಾವಂತರಾಗಿ ಸರ್ಕಾರಿ ಹುದ್ದೆಗಳನ್ನು ಅಲಂಕರಿಸಿ ಸಮಾಜಕ್ಕೆ ಕೀರ್ತಿ ತರುವಂತಹ ಪ್ರತಿಭಾವಂತ ಮಕ್ಕಳು ಇದ್ದಾರೆ, ಕಂದಚಾರ, ಮೂಢನಂಬಿಕೆಗಳನ್ನು ತ್ಯಜಿಸಿ ಶಿಕ್ಷಣಕ್ಕೆ ಆದ್ಯತೆ ನೀಡುವ ಸಮಾಜ ಮುಖ್ಯವಾಹಿನಿಗೆ ಬರಬೇಕಿದೆ ಎಂದರು.

ಜಿಲ್ಲಾ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ರಂಗಸ್ವಾಮಿ ದೊಡ್ಡಮೋಳೆ ಮಾತನಾಡಿ, ಎಲ್ಲಕ್ಕಿಂತ ಮಿಗಿಲಾದದ್ದು ಶಿಕ್ಷಣ. ಶಿಕ್ಷಣ ಕಲಿತರೆ ಹೆಚ್ಚಿನ ಗೌರವ ಲಭಿಸುತ್ತದೆ. ಸಮುದಾಯದ ಮಕ್ಕಳು ಚೆನ್ನಾಗಿ ಓದಿ ಅಧಿಕಾರಿಗಳಾಗುತ್ತಿದ್ದಾರೆ. ಈಗಾಗಲೇ ವೈದ್ಯರು, ನ್ಯಾಯಾಧೀಶರು, ವಕೀಲರು, ಎಂಜಿನಿಯರ್ ಆಗಿದ್ದಾರೆ. ಮುಂದಿನ ದಿನಗಳಲ್ಲಿ ಉನ್ನತ ಶಿಕ್ಷಣ ಪಡೆದು ಅಧಿಕಾರಿಗಳಾಗಿ ಸಮಾಜ ಸೇವೆ ಮಾಡಬೇಕು. ನಮ್ಮ ವತಿಯಿಂದ ಸಹಾಯ, ಸಹಕಾರ ಮಾಡಲಾಗುವುದು. ಈಗ ಪ್ರತಿಭಾ ಪುರಸ್ಕಾರ ಪಡೆದಿರುವ ವಿದ್ಯಾರ್ಥಿಗಳು ಇತರ ವಿದ್ಯಾರ್ಥಿಗಳ ಓದಿಗೆ ಮಾದರಿಯಾಗಿದ್ದಾರೆ. ನಿಮ್ಮ ಜೀವನ ಉಜ್ವಲವಾಗಲಿ ಎಂದು ಆಶಿಸಿದರು.

ಪ್ರತಿಭಾ ಪುರಸ್ಕಾರ: ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಹರ್ಷಿತ, ಸಂಜನಶ್ರೀ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಭಗೀರಥ ಫೌಂಡೇಶನ್ ಅಧ್ಯಕ್ಷ ಡೇರಿ ಮಹದೇವಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ತಾಲೂಕು ಉಪ್ಪಾರ ಸಂಘದ ಉಪಾಧ್ಯಕ್ಷ ಆರ್.ಮಹದೇವಶೆಟ್ಟಿ, ಗೌರವಾಧ್ಯಕ್ಷ ಸಿ.ಬಿ. ನಾಗರಾಜು, ಸಿ.ರಾಜು, ಮಹದೇವಶೆಟ್ಟಿ, ನಾಗರಾಜು, ಕೋರಿಯರ್ ಮಹದೇವಸ್ವಾಮಿ, ಪ್ರವೀಣ್ ಕುಮಾರ್ ಇತರರು ಹಾಜರಿದ್ದರು.

ಮೊಸಳೆ ದಾಳಿಯಿಂದ ಯುವಕನಿಗೆ ಗಾಯ



ಕೊಳ್ಳೇಗಾಲ, ಜೂ.8– ಬಹಿರ್ದೆಸೆಗೆ ಹೋಗಿದ್ದ ಯುವಕನೋರ್ವನಿಗೆ ಮೊಸಳೆಯೊಂದು ದಾಳಿ ಮಾಡಿ ಗಾಯಗೊಳಿಸಿರುವ ಘಟನೆ ಸತ್ತೇಗಾಲದ ಯಡಕುರಿಯಾ ಕಾವೇರಿ ನದಿ ಬಳಿ ಶನಿವಾರ ಜರುಗಿದೆ.

ಸತ್ತೇಗಾಲ ಗ್ರಾಮದ ವಾಸಿ ಪಾಪಣ್ಣ ಎಂಬುವರ ಪುತ್ರ ನಂಜುಂಡಸ್ವಾಮಿ(35) ಎಂಬಾತನೇ ಮೊಸಳೆ ದಾಳಿಯಿಂದ ಗಾಯಗೊಂಡವನಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಗ್ರಾಪಂ ನೌಕರರ ಸಮಸ್ಯೆ ನಿವಾರಣೆ

ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ಭರವಸೆ



ಗುಂಡ್ಲುಪೇಟೆ ಪಟ್ಟಣದಲ್ಲಿ ನಡೆದ ಕಾರ್ಯಾಗಾರವನ್ನು ಉದ್ದೇಶಿಸಿ ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ಮಾತನಾಡಿದರು.

ಗುಂಡ್ಲುಪೇಟೆ, ಜೂ.8– ಗ್ರಾಮ ಪಂಚಾಯಿತಿ ನೌಕರರ ಸಮಸ್ಯೆಗಳನ್ನು ಪರಿಹರಿಸುವ ಬಗ್ಗೆ ಸರ್ಕಾರದ ಗಮನಕ್ಕೆ ತರಲಾಗುವುದು ಎಂದು ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ಹೇಳಿದರು.

ಪಟ್ಟಣದ ಲ್ಯಾಂಪ್ಸ್ ಸೊಸೈಟಿಯಲ್ಲಿ ಶನಿವಾರ ಸಿಐಟಿಯು ಸಂಘಟನೆಯ ವತಿಯಿಂದ ಆಯೋಜಿಸಿದ್ದ ಎರಡು ದಿನಗಳ ರಾಜ್ಯಮಟ್ಟದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಗ್ರಾಮೀಣ ಅಭಿವೃದ್ಧಿಯಲ್ಲಿ ಪಂಚಾಯಿತಿಗಳ ಪಾತ್ರ ದೊಡ್ಡದಾಗಿದೆ. ಎಲ್ಲಾ ಕೆಲಸ ಕಾರ್ಯಗಳನ್ನು ಪಂಚಾಯಿತಿ ಮಟ್ಟದಲ್ಲಿಯೇ ಅನುಷ್ಠಾನಗೊಳಿಸಬೇಕಾಗಿದೆ. ಇದರಿಂದ ಎಲ್ಲಾ ಪಂಚಾಯಿತಿಗಳಲ್ಲಿಯೂ ನೌಕರರ ಮೇಲೆ ತುಂಬಾ ಒತ್ತಡಗಳಿವೆ. ಈ ಬಗ್ಗೆ ಸರ್ಕಾರದ ಗಮನಕ್ಕೆ ತಂದು ಸಮಸ್ಯೆಗಳ ಪರಿಹಾರಕ್ಕೆ ಕ್ರಮಕೈಗೊಳ್ಳಲಾಗುವುದು ಎಂದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ನೌಕರರ ಸಂಘದ ರಾಜ್ಯಾಧ್ಯಕ್ಷ ನಾಡಗೌಡ, ಜಿಲ್ಲಾಧ್ಯಕ್ಷ ಸಿದ್ದರಾಜು, ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಉಪಾಧ್ಯಕ್ಷ ಮಲ್ಲು, ತಾಲೂಕು ಅಧ್ಯಕ್ಷ ಮಹೇಂದ್ರ ಮತ್ತು ಪದಾಧಿಕಾರಿಗಳು ಇದ್ದರು.


ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ನಿರ್ದೇಶಕ ಸ್ಥಾನಕ್ಕೆ ನೇಮಕ



ಚಾಮರಾಜನಗರ: ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಕಾರ್ಯಕಾರಣಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ಜಿಲ್ಲಾ ಘಟಕದ ನಿರ್ದೇಶಕ ಸ್ಥಾನಕ್ಕೆ ಸುದ್ದಿ ಸಂಜೆ ದಿನಪತ್ರಿಕೆಯ ಜಿಲ್ಲಾ ವರದಿಗಾರ ಬಸವರಾಜು ವೈ.ಕೆ.ಮೊಳೆ ನೇಮಕ ಮಾಡಲಾಗಿದೆ ಎಂದು ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಕ್ಕೂರು ಪ್ರಸಾದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ

ನಂಜಪ್ಪ



ನಂಜನಗೂಡು: ತಾಲೂಕಿನ ಬಸವಟ್ಟಿಗೆ ಗ್ರಾಮದ ನಂಜಪ್ಪ (93) ಶನಿವಾರ ಮಧ್ಯಾಹ್ನ ಮೈಸೂರಿನಲ್ಲಿ ನಿಧನರಾಗಿದ್ದಾರೆ.

ಮೃತರು ಪತ್ನಿ ಪುಟ್ಟಮ್ಮ, ಚಾಮರಾಜನಗರದ ಗಣಿ ಉದ್ಯಮಿಗಳಾದ ಬಸವರಾಜು, ಶ್ರೀಕಂಠಮೂರ್ತಿ ಸೇರಿದಂತೆ ನಾಲ್ವರು ಪುತ್ರರು, ಓರ್ವ ಪುತ್ರಿಯನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಬಸವಟ್ಟಿಗೆಯಲ್ಲಿ ಭಾನುವಾರ ಮಧ್ಯಾಹ್ನ ಅವರ ತೋಟದಲ್ಲಿ ನಡೆಯಲಿದೆ.

ಒಂದನೇ ಪುಟದಿಂದ

ಅಣ್ಣನ ಇರಿದು ಕೊಂದ ಭಾವ

(25) ಅವರನ್ನು ರಾಮಕೃಷ್ಣನಗರ ಐ ಬ್ಲಾಕ್‌ನ ದಿವಂಗತ ಬಸವರಾಜು ಅವರ ಮೊದಲ ಮಗ ರವಿಚಂದ್ರನೊಂದಿಗೆ ವಿವಾಹ ಮಾಡಿಕೊಟ್ಟಿದ್ದು, ದಂಪತಿಗೆ ಮೂರು ವರ್ಷದ ಗಂಡು ಮಗುವಿದೆ. ಹಾರ್ಡಿಂಜ್ ವೃತ್ತದ ಬಳಿಯಿರುವ ತೋಟಗಾರಿಕೆ ಇಲಾಖೆ ಕಚೇರಿಯಲ್ಲಿ ಉದ್ಯೋಗಿಯಾಗಿರುವ ರವಿಚಂದ್ರನಿಗೆ 100 ಗ್ರಾಂ ಚಿನ್ನ ಹಾಗೂ 5 ಲಕ್ಷ ರೂ. ವರದಕ್ಷಿಣೆ ನೀಡಿ, ಅದ್ಧೂರಿಯಾಗಿ ಮದುವೆ ಮಾಡಿಕೊಡಲಾಗಿತ್ತು. ಆದರೆ ಮದುವೆಯಾದ 6 ತಿಂಗಳಲ್ಲೇ ವರದಕ್ಷಿಣೆ ದಾಹ ಹೆಚ್ಚಾಗಿ ವಿದ್ಯಾ ಅವರಿಗೆ ಪತಿ ರವಿಚಂದ್ರ ಅತ್ತೆ ಶಾರದಾ ಹಾಗೂ ಮೈದುನ ಕುಮಾರ ಕಿರುಕುಳ ನೀಡಲಾರಂಭಿಸಿದ್ದರು. ಇವರಿಗೆ ರವಿಚಂದ್ರ ಚಿಕ್ಕಮ್ಮ ಪದ್ಮ ಹಾಗೂ ಆಕೆ ಮಗ ಕಾರ್ತಿಕ್ ಸಹಕಾರ ನೀಡಿ, ಆಗಾಗ್ಗೆ ಗಲಾಟೆ ಮಾಡುತ್ತಿದ್ದರು ಎಂದು ತಿಳಿದುಬಂದಿದೆ.

ವರ್ಷದ ಹಿಂದೆ ವ್ಯಾಪಾರ ಮಾಡಲು ಹಣ ಬೇಕೆಂದು ರವಿಚಂದ್ರ ಒತ್ತಾಯಿಸಿದ್ದರಿಂದ ವಿದ್ಯಾ ತವರು ಮನೆಯವರು 2 ಲಕ್ಷ ರೂ. ಹಣ ನೀಡಿದ್ದರು. ಆದರೂ ಸುಮ್ಮನಾಗದ ಗಂಡನ ಮನೆಯವರು ಮನೆ ಹಾಗೂ ನಿವೇಶನವನ್ನು ತನ್ನ ಹೆಸರಿಗೆ ಬರೆಸಿಕೊಳ್ಳುವಂತೆ ವಿದ್ಯಾಗೆ ಹಿಂಸಿಸುತ್ತಿದ್ದರು. ಆಗ ವಿದ್ಯಾ ತವರು ಮನೆಯವರು ಮುಂದೆ ಮೊಮ್ಮಗನ ಹೆಸರಿಗೆ ಮಾಡಿಕೊಡುವುದಾಗಿ ತಿಳಿಸಿದ್ದರಂತೆ. ಆದರೆ ಮನೆ ಹಾಗೂ ನಿವೇಶನಕ್ಕಾಗಿ ನಿತ್ಯ ಗಲಾಟೆ ಮಾಡಿ, ಕೊಲೆ ಬೆದರಿಕೆ ಹಾಕುತ್ತಿದ್ದರು ಎನ್ನಲಾಗಿದೆ.

ಬೆಳಗ್ಗೆ ಗಲಾಟೆ-ಮಧ್ಯಾಹ್ನ ಹತ್ಯೆ: ಶನಿವಾರ ಬೆಳಗ್ಗೆ ರವಿಚಂದ್ರ ನಿನ್ನೆ ಎಲ್ಲಿ ಹೋಗಿದ್ದೆ ಎಂದು ಪತ್ನಿ ವಿದ್ಯಾ ಅವರನ್ನು ಪ್ರಶ್ನಿಸಿದ್ದಾನೆ. ಆಗ ಆಕೆ ಕಣ್ಣಿನ ಶಸ್ತ್ರಚಿಕಿತ್ಸೆಯಾಗಿರುವ ತಾತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗಿ ತಿಳಿಸಿದ್ದಾರೆ. ಆ ವೇಳೆ ರವಿಚಂದ್ರ ಅವಾಚ್ಯವಾಗಿ ಬೈದು, ಅಪ್ಪ-ಅಮ್ಮನನ್ನು ಕರೆಸು, ಇಲ್ಲದಿದ್ದರೆ ಸಾಯಿಸುತ್ತೇನೆಂದು ಬೆದರಿಕೆ ಹಾಕಿದ್ದಾನೆ. ಆಗ ವಿದ್ಯಾ ತಾಯಿಗೆ ಕರೆ ಮಾಡಿ, ವಿಷಯ ತಿಳಿಸುತ್ತಿದ್ದಂತೆ ತಾಯಿ ಭಾಗ್ಯ ಹಾಗೂ ಅಣ್ಣ ಅಭಿಷೇಕ್ ಬೆಳಗ್ಗೆ 9 ಗಂಟೆ ವೇಳೆಗೆ ವಿದ್ಯಾ ಮನೆ ಬಳಿಗೆ ಬಂದಿದ್ದಾರೆ. ತವರಿಗೆ ಬರುವಂತೆ ಕರೆದಾಗ ಗಲಾಟೆಯಾಗಿ ಭಾಗ್ಯ ಹಾಗೂ ಅಭಿಷೇಕ್‌ಗೆ ಪತಿ ಹಾಗೂ ಮನೆಯವರು ಥಳಿಸಿದ್ದಾರೆ. ವಿದ್ಯಾ ತನ್ನ ತಾಯಿ ಹಾಗೂ ಅಣ್ಣನನ್ನು ಬಿಡಿಸಿಕೊಂಡು ಮನೆ ಹೊರಗೆ ಕರೆತಂದು ಬಾಗಿಲ ಚಿಲಕ ಹಾಕಿಕೊಂಡಿದ್ದಾರೆ. ಅಷ್ಟರಲ್ಲಿ ಪತಿ ಚಿಕ್ಕಮ್ಮ ಪದ್ಮಾ ಹಾಗೂ ಕಾರ್ತಿಕ್ ಬಂದು ಚಿಲಕ ತೆಗೆದಿದ್ದಾರೆ. ಗಲಾಟೆ ವಿಷಯ ತಿಳಿದು ಪೊಲೀಸರೂ ಭೇಟಿ ನೀಡಿ, ಜಗಳ ಮಾಡಬೇಡಿ, ಠಾಣೆಗೆ ಬಂದು ದೂರು ಕೊಡಿ ಎಂದು ಎಲ್ಲರಿಗೂ ತಿಳಿಹೇಳಿ ಬಂದಿದ್ದಾರೆ.

ವಿದ್ಯಾ ಅಮ್ಮ ತಾಯಿ ಹಾಗೂ ಅಣ್ಣನನ್ನು ಊರಿಗೆ ಕಳುಹಿಸಿ, ತಾವು ಸುಮಾರು ಹೊತ್ತು ಹೊರಗೆ ಇದ್ದು ನಂತರ ಪತಿಯ ಮನೆ ಬಾಗಿಲು ಬಡಿದಿದ್ದಾರೆ. ಪತಿ ಬಾಗಿಲು ತೆಗೆದಾಗ ತವರಿಗೆ ಹೋಗಲೆಂದು ಬಟ್ಟೆ ತೆಗೆದುಕೊಳ್ಳುತ್ತಿದ್ದಾಗ ಪತಿ, ಅತ್ತೆ ಹಾಗೂ ಮೈದುನ ಆಕೆಯನ್ನು ಥಳಿಸಿದ್ದಾರೆ. ನಿನ್ನ ಅಣ್ಣನನ್ನು ಕರೆಸು, ಅವನನ್ನು ಸುಮ್ಮನೆ ಬಿಡುವುದಿಲ್ಲ ಎಂದು ಹೆದರಿಸಿದ್ದಾರೆ. ಆ ವೇಳೆಗೆ ವಿದ್ಯಾಗೆ ಅಣ್ಣಾ ಅಭಿಷೇಕ್ ಫೋನ್ ಮಾಡಿದ್ದಾರೆ. ಮತ್ತೆ ತಂಗಿಗೆ ಕಿರುಕುಳ ನೀಡುತ್ತಿದ್ದಾರೆಂದು ತಿಳಿದು ಈಗಲೇ ಬರುವುದಾಗಿ ಹೇಳಿದ್ದಾರೆ. ಆಗ ವಿದ್ಯಾ ನೀನು ಬರಬೇಡ ಇವರೆಲ್ಲಾ ಚಾಕು, ಸ್ಕ್ರೂ ಡ್ರೈವರ್ ಹಾಗೂ ದೊಣ್ಣೆಗಳನ್ನು ಹಿಡಿದುಕೊಂಡಿದ್ದಾರೆ ಎಂದು ಹೇಳುತ್ತಲೇ ಮನೆಹೊರಗೆ ಬಂದಿದ್ದಾರೆ.

ಕೆಲ ಹೊತ್ತಿನಲ್ಲೇ ಅಭಿಷೇಕ್ ತನ್ನ ಸ್ನೇಹಿತರಾದ ಗೌತಮ್ ಹಾಗೂ ಕೌಶಿಕ್‌ನೊಂದಿಗೆ ತಂಗಿ ಮನೆ ಬಳಿ ಬಂದಿದ್ದಾರೆ. ಅಭಿಷೇಕ್, ಗೆಳೆಯ ಗೌತಮ್‌ನೊಂದಿಗೆ ಮೂರನೇ ಮಹಡಿಯಲ್ಲಿದ್ದ ತಂಗಿ ಮನೆಗೆ ಓಡಿದ್ದಾರೆ. ಕೌಶಿಕ್ ಬೈಕ್ ನಿಲ್ಲಿಸಿ ಹೋಗುವಷ್ಟರಲ್ಲಿ ಅನಾಹುತ ನಡೆದಿದೆ. ಬಾಗಿಲು ತೆಗೆದ ರವಿಚಂದ್ರ ಚಾಕುವಿನಿಂದ ತನ್ನ ಬಾಮೈದ ಅಭಿಷೇಕ್‌ನ ಎದೆಗೆ ಚುಚ್ಚಿದ್ದಾನೆ. ನಂತರ ಆತನ ಸೋದರ ಕುಮಾರ, ತಾಯಿ ಶಾರದಾ, ಚಿಕ್ಕಮ್ಮ ಪದ್ಮಾ ಹಾಗೂ ಕಾರ್ತಿಕ್ ಐವರೂ ಸೇರಿಕೊಂಡು ಮನಬಂದಂತೆ ಹಲ್ಲೆ ನಡೆಸಿದ್ದಾರೆ. ರಕ್ಷಣೆಗೆ ದಾವಿಸಿದ ಅಭಿಷೇಕ್ ಸ್ನೇಹಿತ ಗೌತಮ್ ಮೇಲೂ ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ರಕ್ತದ ಮಡುವಿನಲ್ಲಿ ಬಿದಿದ್ದ ಅಭಿಷೇಕ್‌ನನ್ನು ಸಮೀಪದ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಪರೀಕ್ಷಿಸಿದ ವೈದ್ಯರು, ಅದಾಗಲೇ ಮೃತಪಟ್ಟಿರುವುದಾಗಿ ತಿಳಿಸಿದ್ದಾರೆ.

ನಗರ ಪೊಲೀಸ್ ಆಯುಕ್ತ ಬಿ. ರಮೇಶ್, ಡಿಸಿಪಿ ಮುತ್ತುರಾಜ್, ಕೆ.ಆರ್. ಉಪವಿಭಾಗದ ಎಸಿಪಿ ರಮೇಶ್ ಕುಮಾರ್ ಸ್ಥಳ ಪರಿಶೀಲನೆ ನಡೆಸಿದರು. ಅಭಿಷೇಕ್ ದೇಹವನ್ನು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿಡಲಾಗಿದ್ದು, ವೈದ್ಯಕೀಯ ಪರೀಕ್ಷೆ ನಂತರ ವಾರಸುದಾರರಿಗೆ ಒಪ್ಪಿಸಲಾಗುವುದು. ಈ ಸಂಬಂಧ ವಿದ್ಯಾ ನೀಡಿರುವ ದೂರಿನನ್ವಯ ಆಕೆಯ ಪತಿ ರವಿಚಂದ್ರ ಮೈದುನ ಕುಮಾರ್, ಅತ್ತೆ ಶಾರದಾ, ಚಿಕ್ಕತ್ತೆ ಪದ್ಮಾ ಹಾಗೂ ಆಕೆಯ ಮಗ ಕಾರ್ತಿಕ್ ವಿರುದ್ಧ ಕುವೆಂಪುನಗರ ಠಾಣೆ ಇನ್‌ಸ್ಪೆಕ್ಟರ್ ಡಿ.ಯೋಗೀಶ್ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ವಿವಿಧ ಆಸ್ಪತ್ರೆಗಳಲ್ಲಿ 11 ಮಂದಿ ಚಿಕಿತ್ಸೆ

6 ಸಿಲಿಂಡರ್‌ಗಳಲ್ಲಿ ಒಂದರ ನಟ್ ತೆಗೆಯುತ್ತಿದ್ದಾಗ ಅದರ ಲ್ಲಿದ್ದ ಕ್ಲೋರಿನ್ ಅನಿಲ ಸೋರಿಕೆಯಾಗಿತ್ತು. ಅನಿಲ ಸೋರಿಕೆಯಾಗುತ್ತಿದ್ದಂತೆಯೇ ಸಮೀಪದಲ್ಲಿದ್ದ ಗುಜರಿಯ ಇತರ ಅಂಗಡಿ ಗಳು, ಕೆಸರೆ ಮತ್ತು ವರುಣಾ ನಾಲಾ ಪಕ್ಕ ದಲ್ಲಿ ನಿರ್ಮಿಸಿರುವ ನಮ್ಮ ಮನೆಗಳಲ್ಲಿ ವಾಸಿಸುತ್ತಿದ್ದವರಿಗೆ ಉಸಿರಾಟದ ಸಮಸ್ಯೆ, ತಲೆ ಸುತ್ತು, ವಾಂತಿ ಕಾಣಿಸಿಕೊಂಡಿದೆ. ವಿಷಯ ತಿಳಿಯುತ್ತಿದ್ದಂತೆಯೇ ಜಿಲ್ಲಾಡಳಿತ, ಆರೋಗ್ಯ ಇಲಾಖೆ, ಪೊಲೀಸ್ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಅಸ್ವಸ್ಥರಾದವರನ್ನು ಆಂಬುಲೆನ್ಸ್ ಮೂಲಕ ಆಸ್ಪತ್ರೆಗಳಿಗೆ ದಾಖಲಿಸಿದ್ದರು.

ಘಟನೆಯಲ್ಲಿ ಒಟ್ಟು 37 ಮಂದಿ ಅಸ್ವಸ್ಥರಾಗಿದ್ದರು. ಇಂದು ಬೆಳಗ್ಗೆ ವೇಳೆಗೆ ಗುಣಮುಖರಾಗಿ 26 ಮಂದಿ ಮನೆಗೆ ಮರಳಿದ್ದಾರೆ. ವಿವಿಧ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರನ್ನು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಪಿ.ಸಿ. ಕುಮಾರಸ್ವಾಮಿ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು.

ಮುಂಜಾಗ್ರತಾ ಕ್ರಮವಾಗಿ ಗುಜರಿ, ನರ್ಮ್ ಯೋಜನೆ ಗುಂಪು ಮನೆಗಳಲ್ಲಿ ವಾಸಿಸುತ್ತಿರುವವರು, ಹಳೇ ಕೆಸರೆ ಗ್ರಾಮ, ಸಮೀಪದ ಕಾಮನಕೆರೆಹುಂಡಿ ಬಳಿಯ ನರ್ಮ್ ಗುಂಪು ಮನೆ ನಿವಾಸಿಗಳ ಆರೋಗ್ಯ ಪರೀಕ್ಷೆ ಮಾಡುತ್ತಿರುವ ಆರೋಗ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಅಗತ್ಯ ಕ್ರಮ ವಹಿಸಿದ್ದಾರೆ.

ಮೈಸೂರಿನ ಕೆಆರ್ ಆಸ್ಪತ್ರೆ, ಮಕ್ಕಳ ಆಸ್ಪತ್ರೆ, ಜಿಲ್ಲಾಸ್ಪತ್ರೆ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಹಾಸಿಗೆ, ಔಷಧಿಯನ್ನು ಮೀಸಲಾಗಿರಿಸಿದ್ದು, ವೈದ್ಯರು, ಸಿಬ್ಬಂದಿ ಹಾಜರಿರುವಂತೆ ಸೂಚಿಸಲಾಗಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಪಿ.ಸಿ. ಕುಮಾರಸ್ವಾಮಿ ತಿಳಿಸಿದ್ದಾರೆ.

ಸಿಲಿಂಡರ್‌ಗಳು ಕಾರವಾರಕ್ಕೆ ಸ್ಥಳಾಂತರ

ಅನಿಲವನ್ನು ಸುರಕ್ಷಿತವಾಗಿ ವೈಜ್ಞಾನಿಕ ವಿಧಾನ ಅನುಸರಿಸಿ ವಿಲೇವಾರಿ ಮಾಡಬೇಕೆಂದು ಸೂಚಿಸಿದರು. ಈ ಸಂಬಂಧ ವಿಕೋಪ ನಿರ್ವಹಣೆಯಲ್ಲಿ ಪರಿಣಿತಿ ಹೊಂದಿರುವ ಇಂಜಿ ನಿಯರ್‌ಗಳನ್ನು ಕರೆಸಿ ಚರ್ಚಿಸಿದಾಗ ಇಷ್ಟು ದೊಡ್ಡ ಪ್ರಮಾಣದ ಕ್ಲೋರಿನ್ ಅನಿಲವನ್ನು ಸಿಲಿಂಡರ್‌ಗಳಲ್ಲಿನ ಕ್ಲೋರಿನ್ ನಿಷ್ಕ್ರಿಯಗೊಳಿಸಲು ಮೈಸೂರು, ಸುತ್ತಮುತ್ತಲ ಜಿಲ್ಲೆಗಳಲ್ಲೂ ವ್ಯವಸ್ಥೆಗಳಿಲ್ಲ. ಹಾಗೆಂದು ಬೇಕಾಬಿಟ್ಟಿ ಕ್ರಮ ಸಾಧ್ಯವಿಲ್ಲ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ನಿಷ್ಕ್ರಿಯಗೊಳಿಸುವ ಪ್ರಕ್ರಿಯೆ ಕ್ಲಿಷ್ಟಕರವಾಗಿದ್ದು, ಅದಕ್ಕಾಗಿಯೇ ಕಾರವಾರದಲ್ಲಿ ಘಟಕವೊಂದಿದ್ದು, ಅಲ್ಲಿಗೇ ಸಾಗಿಸಬೇಕೆಂದು ಸಲಹೆ ಕೇಳಿಬಂದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು, ಇಂದು ಬೆಳಗ್ಗೆ ಕಾರವಾರ ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ, ಚರ್ಚಿಸಿದ್ದಾರೆ.

ಸಿಲಿಂಡರ್‌ಗಳನ್ನು ಸ್ಥಳಾಂತರಿಸಲು ಮೈಸೂರು ಜಿಲ್ಲಾಧಿಕಾರಿಗಳು ನಿರಾಕ್ಷೇಪಣಾ ಪತ್ರ ನೀಡಬೇಕು, ಹಾಗೆಯೇ ಅವುಗಳನ್ನು ನಿಷ್ಕ್ರಿಯಗೊಳಿಸಲು ಕಾರವಾರ ಜಿಲ್ಲಾಧಿಕಾರಿಗಳು ಅನುಮತಿ ನೀಡಬೇಕಾಗಿರುವುದರಿಂದ ಆ ನಿಟ್ಟಿನಲ್ಲಿ ಪ್ರಕ್ರಿಯೆ ನಡೆಯುತ್ತಿದೆ. ಮೈಸೂರಿನ ಹಳೇ ಕೆಸರೆ ಗುಜರಿಯಿಂದ ನಾಳೆ (ಜೂ. 9) ಕ್ರೇನ್ ಮೂಲಕ ಟ್ರಕ್‌ಗೆ ತುಂಬಿ ಕಾರವಾರಕ್ಕೆ ರವಾನಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಈ ಹಿನ್ನೆಲೆಯಲ್ಲಿ ಸ್ಥಳದಲ್ಲಿ ಎನ್‌ಆರ್ ಠಾಣೆ ಪೊಲೀಸರು ಹಾಗೂ ಸಿಎಆರ್ ತುಕಡಿಯನ್ನು ನಿಯೋಜಿಸಲಾಗಿದೆ.

ಸೇರ್ಪಡೆ ಖಚಿತ

ಅಧಿಕಾರದಲ್ಲಿ ಸೇವೆ ಸಲ್ಲಿಸಿದ್ದರೂ ಲೋಕಸಭೆಗೆ ಇದೇ ಪ್ರಥಮ ಬಾರಿಗೆ ಆಯ್ಕೆಗೊಂಡಿದ್ದಾರೆ. ಪುತ್ರ ರಾಘವೇಂದ್ರನಿಗೆ ಮಂತ್ರಿ ಸ್ಥಾನ ಕೊಡಿಸಲು ಯಡಿಯೂರಪ್ಪ ಪಣ ತೊಟ್ಟಂತಿದೆ. ಈ ಕಾರಣಕ್ಕಾಗಿಯೇ ಅವರು ದೆಹಲಿಗೆ ತೆರಳಿದ್ದಾರೆ. ಲೋಕಸಭೆಗೆ ಸತತವಾಗಿ ನಾಲ್ಕನೇ ಬಾರಿ ಆಯ್ಕೆಗೊಂಡಿರುವ ರಾಘವೇಂದ್ರ ಅವರಿಗೆ ಹಿಂದಿನ ಸರ್ಕಾರದಲ್ಲೂ ಮಂತ್ರಿ ಆಗುವುದು ಕೊನೆ ಗಳಿಗೆಯಲ್ಲಿ ತಪ್ಪಿದೆ. ಈ ಬಾರಿಯಾದರೂ ಅವಕಾಶ ಮಾಡಿಕೊಡಿ ಎಂದು ಯಡಿಯೂರಪ್ಪ ಮನವಿ ಮಾಡಲಿದ್ದಾರಂತೆ.

ಚುನಾವಣೆಗೂ ಮುನ್ನ ಬೊಮ್ಮಾಯಿ ಮತ್ತು ಸೋಮಣ್ಣಗೆ ನೀವು ಗೆದ್ದು ಬನ್ನಿ ದೆಹಲಿಯಲ್ಲಿ ನಿಮಗೆ ಒಳ್ಳೆ ಅವಕಾಶ ಸಿಗಲಿದೆ ಎಂದು ಅಮಿತ್ ಷಾ ಭರವಸೆ ನೀಡಿದ್ದರಂತೆ. ಕಾಂಗ್ರೆಸ್‌ಗೆ ತೆರಳಿದ ಜಗದೀಶ್ ಶೆಟ್ಟರ್ ಅವರನ್ನು ಹಿಂದಕ್ಕೆ ಕರೆತರುವ ಸಮಯದಲ್ಲಿ ಬಿಜೆಪಿ ವರಿಷ್ಠರು ಸಚಿವ ಸ್ಥಾನದ ಭರವಸೆ ನೀಡಿದ್ದರಂತೆ, ಇದನ್ನೇ ಮುಂದಿಟ್ಟುಕೊಂಡು ಇವರೆಲ್ಲರೂ ಪ್ರಯತ್ನ ನಡೆಸಿದ್ದಾರೆ. ಕರ್ನಾಟಕದಿಂದ ಅತೀ ಹೆಚ್ಚು ಬಾರಿ ಲೋಕಸಭೆಗೆ ಆಯ್ಕೆಗೊಂಡಿರುವ ಪರಿಶಿಷ್ಟ ಜಾತಿಗೆ ಸೇರಿದ ರಮೇಶ್ ಜಿಗಜಿಣಗಿ ಲಾಬಿ ಮಾಡದಿದ್ದರೂ ತಮಗೂ ಅವಕಾಶ ಸಿಗಬಹುದೆಂಬ ಆಶಾಭಾವನೆ ಹೊಂದಿದ್ದಾರೆ.

ವೀರಶೈವ ಸಮುದಾಯದ ಗದ್ದಿಗೌಡರ್ ಐದನೇ ಬಾರಿಗೆ ಲೋಕಸಭೆ ಪ್ರವೇಶಿಸಿರುವುದರಿಂದ ಹಿರಿತನದಲ್ಲಿ ಮಂತ್ರಿ ಸ್ಥಾನ ದಕ್ಕಲಿದೆ ಎಂದು ತಮ್ಮ ಆಪ್ತರ ಬಳಿ ಹೇಳಿಕೊಂಡಿದ್ದಾರೆ. ಯಡಿಯೂರಪ್ಪ ಮಾತ್ರ ಪುತ್ರನಿಗೆ ಅಧಿಕಾರ ಕೊಡಿಸಲು ತಮ್ಮ ಪ್ರಭಾವ ಬೀರಿದ್ದಾರೆ, ಆದರೆ ಕರ್ನಾಟಕಕ್ಕೆ ಮೂರನೇ ಸ್ಥಾನ ಕೊಡುವ ಬಗ್ಗೆ ಇಂದು ತಡರಾತ್ರಿ ನಿರ್ಧಾರವಾಗಲಿದೆ.

ಲೋಕಸಭಾ ಚುನಾವಣೆಯಲ್ಲಿ ಗ್ಯಾರಂಟಿ 'ಕೈ' ಹಿಡಿದಿಲ್ಲ; ಸರ್ಕಾರ ಯೋಜನೆ ನಿಲ್ಲಿಸುವುದೇ ಒಳ್ಳೆಯದು

● ಕಾಂಗ್ರೆಸ್ ವಕ್ತಾರ ಲಕ್ಷ್ಮಣ್ ಅಭಿಮತ ● ಗ್ಯಾರಂಟಿ ವಿರೋಧಿಸಿದವರ ಕೈ ಹಿಡಿಯಲಾಗಿದೆ ● ಸಿದ್ದರಾಮಯ್ಯರಿಗೆ ಪದೇ ಪದೇ ಅವಮಾನಿಸುತ್ತಲೇ ಇದ್ದಾರೆ ● ನನಗೆ ಅದೃಷ್ಟ ಇರಲಿಲ್ಲ; ಹಾಗಾಗಿ ಸೋತೆ

ಮೈಸೂರು, ಜೂ.8(ಎಂಟಿವೈ)- ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳು ಜನರಿಗೆ ಇಷ್ಟ ಇಲ್ಲ ಎನ್ನುವುದು ಲೋಕಸಭಾ ಚುನಾವಣೆಯಿಂದ ಖಚಿತವಾಗಿದೆ. ಹಾಗಾಗಿ ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳ ಮರು ಪರಿಶೀಲಿಸುವಂತೆ ಕಾಂಗ್ರೆಸ್ ವಕ್ತಾರರೂ ಆದ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಪರಾಜಿತ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಮನವಿ ಮಾಡಿದ್ದಾರೆ.



ಮೈಸೂರು ನಗರ ಕಾಂಗ್ರೆಸ್ ಭವನದಲ್ಲಿ ಶನಿವಾರ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಪರಾಜಿತ ಅಭ್ಯರ್ಥಿ ಎಂ.ಲಕ್ಷ್ಮಣ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ನುಡಿದಂತೆ ನಡೆಯುವ ಉದ್ದೇಶದಿಂದ ಬಡವರು, ಶೋಷಿತರು ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ಎಲ್ಲಾ ವರ್ಗದವರ ಹಿತ ಕಾಯುವ ನಿಟ್ಟಿನಲ್ಲಿ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದೆ. ಈ ಯೋಜನೆಗಳನ್ನು ಬಹುತೇಕ ಕುಟುಂಬಸ್ಥರು ಪಡೆದುಕೊಳ್ಳುತ್ತಿದ್ದಾರೆ. ಗ್ಯಾರಂಟಿ ಯೋಜನೆಗಳ ಮೊದಲಿನಿಂದಲೂ ಬಿಜೆಪಿ ಹಾಗೂ ಜೆಡಿಎಸ್ ವಿರೋಧಿಸುತ್ತಲೇ ಬಂದಿವೆ. ಆದರೂ, ಜನರ ಹಿತ ಕಾಯುವುದಕ್ಕಾಗಿ ಸರ್ಕಾರ ಮುಂದುವರೆಸುತ್ತಾ ಬಂದಿದೆ. ಆದರೆ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಜನತೆ ಗ್ಯಾರಂಟಿ ಯೋಜನೆಗಳನ್ನು ಒಪ್ಪಿಲ್ಲ ಎಂದು ತಿಳಿಯುತ್ತಿದೆ. ಅದರಲ್ಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆಯಲ್ಲಿಯೇ ಗ್ಯಾರಂಟಿ ಯೋಜನೆಗಳಿಂದ ಜನ ಸೋಮಾರಿಗಳಾಗುತ್ತಿದ್ದಾರೆ ಎಂದು ಹೇಳುತ್ತಿದ್ದ ಬಿಜೆಪಿಗೆ ಬೆಂಬಲ ನೀಡುವ ಮೂಲಕ ಪರೋಕ್ಷವಾಗಿ ಗ್ಯಾರಂಟಿ ಯೋಜನೆಯ ವಿರೋಧಿಸುತ್ತಿರುವವರಿಗೆ ಬೆಂಬಲ ನೀಡಿದ್ದಾರೆ ಎಂದು ವಿಷಾದಿಸಿದರು.

ಜಾತಿ ರಾಜಕಾರಣ ಅಥವಾ ಮತ್ತಾವುದೋ ಕಾರಣಕ್ಕಾಗಿ ಜಿಲ್ಲೆಯ ಜನರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಪಮಾನ ಮಾಡಿದ್ದಾರೆ. ಬಿಟ್ಟಿ ಭಾಗ್ಯಗಳೆಂದು ಲೇವಡಿ ಮಾಡುತ್ತಿದ್ದವರನ್ನೆ ಬೆಂಬಲಿಸಿದ್ದಾರೆ. ಹಾಗಾಗಿ ಜನರಿಗೆ ನಮ್ಮ ಗ್ಯಾರಂಟಿ ಇಷ್ಟ ಆಗಿಲ್ಲ ಎಂದು ಭಾವಿಸಬೇಕಾಗಿದೆ. ಹೀಗಾಗಿ ಗ್ಯಾರಂಟಿ ನಿಲ್ಲಿಸುವುದೇ ಒಳಿತು. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಸ್ತವತೆ ಅರಿಯಬೇಕು. ಶೇ.70ರಷ್ಟು ಮೇಲ್ವರ್ಗದ ಜನ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳಾಗಿದ್ದಾರೆ. ದುಬಾರಿ ಬೆಲೆಯ ಬೆಂಜ್ ಕಾರ್ ಹೊಂದಿರುವವನು, 25 ಸಾವಿರ ಸಂಬಳ ಪಡೆಯುವವರಿಗೆ ಉಚಿತ ಕರೆಂಟ್ ಕೊಟ್ಟರೆ ಹೇಗೆ. ಈಗಲೂ ಗ್ಯಾರಂಟಿ ಹಣದಿಂದಲೇ ಜೀವನ ನಡೆಸುವ ಜನರು ನಮ್ಮಲ್ಲಿ ಲಕ್ಷಾಂತರ ಮಂದಿ ಇದ್ದಾರೆ. ಅಂತಹವರನ್ನು ನೋಡಿ ಗ್ಯಾರಂಟಿ ರೀ ಲುಕ್ ಮಾಡುವ ಅಗತ್ಯ ಇದೆ ಎಂದು ಅಭಿಪ್ರಾಯಪಟ್ಟರು.

ಒಕ್ಕಲಿಗನೇ ಅಲ್ಲ ಎಂದರು: ಹುಣಸೂರಿನ ಹಲವು ಗ್ರಾಮಗಳಲ್ಲಿ ಕೇವಲ ಒಂದೇ ಸಮುದಾಯದ ಜನರಿದ್ದಾರೆ. ಅಲ್ಲಿ ಬಿಜೆಪಿಗೆ 600 ಕ್ಕೂ ಹೆಚ್ಚು ಮತ ನೀಡಿದರೆ ನನಗೆ ಕೇವಲ ಮೂರು, ಏಳು ಮತಗಳನ್ನು ನೀಡಿದ್ದಾರೆ. ಒಕ್ಕಲಿಗರು ನನಗೆ ಮತ ಹಾಕಿಲ್ಲ. ನನ್ನನ್ನು ಒಕ್ಕಲಿಗನೇ ಅಲ್ಲ ಎಂದು ಅಪಪ್ರಚಾರ ಮಾಡಿದರು. ನಾನು ಒಕ್ಕಲಿಗನೆಂದು ಹಣೆಯಲ್ಲಿ ಬರೆದುಕೊಂಡು ಓಡಾಡಿಲ್ಲ. ಈ ಚುನಾವಣೆಯಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ಬಲದಿಂದ ಅವರ ಅಭ್ಯರ್ಥಿ ಗೆಲುವು ಸಾಧಿಸಿದ್ದಾರೆ. ಕಾಂಗ್ರೆಸ್ ಎಂದಿಗೂ ಜಾತಿ ರಾಜಕಾರಣ ಮಾಡಿಲ್ಲ. ಹಳೆಯ ಮೈಸೂರು ಭಾಗದಲ್ಲಿ ಕಾಂಗ್ರೆಸ್ 8 ಮಂದಿ ಸಮುದಾಯದ ಅಭ್ಯರ್ಥಿಗಳಿಗೆ ಟಿಕೆಟ್ ನೀಡಿತ್ತು. ಆದರೆ, ಒಕ್ಕಲಿಗ ಸಮುದಾಯ ಒಬ್ಬನನ್ನು ಆಯ್ಕೆ ಮಾಡಿಕೊಳ್ಳಲಿಲ್ಲ. ಮೈಸೂರಿನಲ್ಲಿ ಹಲವು ವರ್ಷಗಳ ನಂತರ ಒಕ್ಕಲಿಗ ಸಮುದಾಯಕ್ಕೆ ಟಿಕೆಟ್ ನೀಡಿದ್ದರೂ ಕೆಲ ಕಾರಣದಿಂದಾಗಿ ಸೋಲುಂಟಾಗಿದೆ. ವೀರಶೈವರು, ಲಿಂಗಾಯತರಿಗೆ ಸಚಿವ ಸ್ಥಾನದಲ್ಲಿ ಸಿಂಹಪಾಲು ನೀಡಲಾಗಿದೆ. ಎಂಟು ಜಿಲ್ಲೆಗಳಲ್ಲಿ ಒಕ್ಕಲಿಗ ಸಮುದಾಯದ ಡಿಸಿಗಳನ್ನು ನೇಮಿಸಲಾಗಿದೆ. ಅದೇ ರೀತಿ ವೀರಶೈವ ಸಮುದಾಯಕ್ಕೂ ಸರ್ಕಾರ ಪ್ರಾತಿನಿಧ್ಯತೆ ನೀಡಿದೆ ಎಂದು ಸ್ಪಷ್ಟಪಡಿಸಿದರು.

ಪದೇ ಪದೆ ಅವಮಾನ: ಮೈಸೂರು ಜಿಲ್ಲೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಲವು ಯೋಜನೆಗಳನ್ನು ನೀಡಿದ್ದಾರೆ. ಜಯದೇವ ಹೃದ್ರೋಗ ಆಸ್ಪತ್ರೆ, ಜಿಲ್ಲಾಸ್ಪತ್ರೆ, ಟ್ರಾಮಾ ಕೇರ್ ಸೆಂಟರ್, ಪಂಚಕರ್ಮ ಆಸ್ಪತ್ರೆ, ಮಹಾರಾಣಿ ಕಾಲೇಜು, ಹಲವು ಹಾಸ್ಟೆಲ್ ಸೇರಿದಂತೆ ಅನೇಕ ಕೊಡುಗೆ ನೀಡಿದ್ದಾರೆ. ಆದರೂ ಜಿಲ್ಲೆಯ ಜನ ಸಿದ್ದರಾಮಯ್ಯ ಅವರಿಗೆ ಅವಮಾನ ಮಾಡುತ್ತಲೇ ಇದ್ದಾರೆ. ನನ್ನನ್ನ ಎಷ್ಟು ಬಾರಿ ಸೋಲಿಸಿದರೂ ಬೇಸರವಿಲ್ಲ. ಆದರೆ, ಸಿದ್ದರಾಮಯ್ಯ ಅವರಿಗೆ ಎಷ್ಟು ಬಾರಿ ಅನ್ಯಾಯ ಮಾಡುತ್ತೀರಾ. ಜಿಲ್ಲೆಯ ಅಭಿವೃದ್ಧಿಗೆ ಸಾಕಷ್ಟು ಅನುದಾನ ಕೊಡುತ್ತಲೇ ಇದ್ದಾರೆ. ಸಿದ್ದರಾಮಯ್ಯ ಅವರಿಗೂ ಇದರ ಬಗ್ಗೆ ನೋವಿದೆ. ಆದರೆ ಅವರು ಎಲ್ಲಿಯೂ ಸಾರ್ವಜನಿಕವಾಗಿ ಹೇಳಿಕೊಳ್ಳುತ್ತಿಲ್ಲ. ಸಿದ್ದರಾಮಯ್ಯ ರಾಜ್ಯ ಕಂಡ ಕ್ಲೀನ್ ಇಮೇಜ್ ಮುಖ್ಯಮಂತ್ರಿ. ಅಂತಹವರ ಕೈ ಬಲಪಡಿಸದೆ ಹಿನ್ನಡೆಯುಂಟು ಮಾಡುತ್ತಿರುವುದು ಸರಿಯಲ್ಲ ಎಂದು ಭಾವುಕರಾದರು.


ಹಿಂದಿನ ಸಂಸದರಂತಾಗಬೇಡಿ: ನೂತನ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಈ ಹಿಂದೆ ಇದ್ದ ಸಂಸದರ ರೀತಿ ನಡೆದುಕೊಳ್ಳಬಾರದು. ಕಳೆದ ಹತ್ತು ವರ್ಷಗಳಲ್ಲಿ ಕೇಂದ್ರ ಸರ್ಕಾರದ ಯಾವುದೇ ಹೊಸ ಯೋಜನೆ ಮೈಸೂರಿಗೆ ತಂದಿಲ್ಲ. ಕೇಂದ್ರ ಸರ್ಕಾರದ ಯೋಜನೆಗಳ ಬಗ್ಗೆ ಗಮನಹರಿಸಿ. ಮೈಸೂರು ವಿಮಾನ ನಿಲ್ದಾಣ ವಿಸ್ತರಣೆ. ರೈಲ್ವೆ ಟರ್ಮಿನಲ್‌ಗಳ ನಿರ್ಮಾಣದ ಕಡೆ ಗಮನ ಕೊಡುವಂತೆ ಸಲಹೆ ನೀಡಿದರಲ್ಲದೆ, ಯದುವೀರ್ ಜನರನ್ನು ಎಷ್ಟರ ಮಟ್ಟಿಗೆ ಅರಮನೆಗೆ ಬಿಟ್ಟುಕೊಳ್ತಾರೋ ಇಲ್ಲವೋ ಗೊತ್ತಿಲ್ಲ.

ಸುದ್ದಿಗೋಷ್ಠಿಯಲ್ಲಿ ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರಾಧ್ಯಕ್ಷ ಆರ್. ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ವಕ್ತಾರ ಕೆ.ಮಹೇಶ್ ಇದ್ದರು.

ಡಿ.ಕೆ.ಶಿವಕುಮಾರ್ ಸಹಕಾರ

ಲೋಕಸಭಾ ಚುನಾವಣೆಯಲ್ಲಿ ನನಗೆ ಮತ ಹಾಕಿದವರಿಗೆ ಶಿರ ಸಾಷ್ಟಾಂಗ ನಮಸ್ಕಾರ. ಮತ ಹಾಕದವರಿಗೆ ಬರೀ ನಮಸ್ಕಾರ. ಟಿಕೆಟ್ ನೀಡಿದ್ದಕ್ಕಾಗಿ ಸಿದ್ದರಾಮಯ್ಯ ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಮೈಸೂರು- ಕೊಡಗು ಕ್ಷೇತ್ರದಲ್ಲಿ 6.5 ಲಕ್ಷ ಜನ ಮತ ನೀಡಿದ್ದಾರೆ. 7.9ಲಕ್ಷ ಜನ ಮತ ನೀಡಿಲ್ಲ. ಇವರಿಗೂ ಧನ್ಯವಾದ ಹೇಳುತ್ತೇನೆ. ಚುನಾವಣೆಯಲ್ಲಿ ಜನರಿಗೆ ಭರವಸೆ ನೀಡಿದ್ದೆ. ನಿಮ್ಮ ಸಮಸ್ಯೆಗಳಿಗೆ ಸ್ಪಂದಿಸುತ್ತೇನೆ ಎಂದು ಹೇಳಿದ್ದೆ ಈಗ ನಾನು ಎಲ್ಲೂ ಓಡಿ ಹೋಗಲ್ಲ. ನಮ್ಮ ಪಕ್ಷದ ಸರ್ಕಾರ ಅಧಿಕಾರದಲ್ಲಿದೆ. ಪ್ರಾಮಾಣಿಕವಾಗಿ ನಿಮ್ಮ ಜೊತೆ ಇದ್ದು ಕೆಲಸ ಮಾಡುತ್ತೇನೆ. ನನಗೆ ಸಿದ್ದರಾಮಯ್ಯ ಅವರೇ ದೇವರು. ನನಗೆ ಟಿಕೆಟ್ ಕೊಟ್ಟರು. ಅದಕ್ಕೆ ಡಿ.ಕೆ.ಶಿವಕುಮಾರ್ ಸಹಕಾರ ನೀಡಿದರು. ಎಂಟು ಕ್ಷೇತ್ರದ ಶಾಸಕರು, ಮಾಜಿ ಶಾಸಕರು ನನಗೆ ಸಹಕಾರ ನೀಡಿದ್ದಾರೆ. ನನಗೆ ಅದೃಷ್ಟ ಇರಲಿಲ್ಲ, ನನ್ನ ಹಣೆಬರಹ ಸರಿ ಇರಲಿಲ್ಲ, ಹಾಗಾಗಿ ನಾನು ಸೋತಿದ್ದು ಎಂದು ಬೇಸರ ವ್ಯಕ್ತಪಡಿಸಿದರು.

ಎಂಎಲ್‌ಸಿ ಯತೀಂದ್ರಗೆ ಅಭಿನಂದನೆ...



ವಿಧಾನಪರಿಷತ್ ಸದಸ್ಯರಾಗಿ ಆಯ್ಕೆಯಾದ ಡಾ.ಯತೀಂದ್ರ ಅವರನ್ನು ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೃಷ್ಣಕುಮಾರ್ ಸಾಗರ್, ವರುಣ ಬ್ಲಾಕ್ ಉಪಾಧ್ಯಕ್ಷ ರಾಯನಹುಂಡಿ ರವಿ, ಎಪಿಎಂಸಿ ಮಾಜಿ ಅಧ್ಯಕ್ಷ ಹೊಸಹುಂಡಿ ರಘು, ವರುಣ ಮಹೇಶ್, ವರಕೋಡು ಉಮೇಶ್ ಅಭಿನಂದಿಸಿದರು.

ಬಡಾವಣೆ ನಿರ್ಮಾಣದ ವೇಳೆ ಪರಿಸರ ಸಂರಕ್ಷಣೆಗೂ ಆದ್ಯತೆ ನೀಡಬೇಕು

● ಇನ್ಸ್‌ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್ ಅಂಡ್ ಕಮಿಷನರ್ ಆಫ್ ಸ್ಟಾಂಪ್ಸ್ ಡಾ.ಬಿ.ಆರ್.ಮಮತಾ ಸಲಹೆ ● ಮೈಸೂರಲ್ಲಿ ರಿಯಲ್ ಎಸ್ಟೇಟ್ ಪ್ರದರ್ಶನ 'ಮೈ ರಿಯಾಲಿಟಿ-2024' ಕ್ಕೆ ಚಾಲನೆ





ಮೈಸೂರಿನ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಮೈದಾನದಲ್ಲಿ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಘಟಕ, ಕ್ರೆಡಾಯ್ ಸಂಸ್ಥೆ ವತಿಯಿಂದ ಆಯೋಜಿಸಿರುವ ನಾಲ್ಕು ದಿನಗಳ ರಿಯಲ್ ಎಸ್ಟೇಟ್ ಉದ್ಯಮಕ್ಕೆ ಸಂಬಂಧಿಸಿದ 'ಮೈ ರಿಯಾಲಿಟಿ-2024' ವಸ್ತುಪ್ರದರ್ಶನವನ್ನು ಇನ್ಸ್‌ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್ ಡಾ.ಬಿ.ಆರ್.ಮಮತಾ ಉದ್ಘಾಟಿಸಿದರು.

ಮೈಸೂರು,ಜೂ.8(ಎಂಟಿವೈ)- ರಾಷ್ಟ್ರದಲ್ಲಿ ರಿಯಲ್ ಎಸ್ಟೇಟ್ ಉದ್ಯಮ ನಿರೀಕ್ಷೆಗೂ ಮೀರಿದ ಪ್ರಮಾಣದಲ್ಲಿ ಪ್ರಗತಿ ಕಾಣುತ್ತಿದ್ದು, ಬಡಾವಣೆ ನಿರ್ಮಾಣದ ವೇಳೆ ಪರಿಸರ ಸಂರಕ್ಷಣೆಗೆ ಆದ್ಯತೆ ನೀಡಬೇಕು ಎಂದು ಇನ್ಸ್‌ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್ ಅಂಡ್ ಕಮಿಷನರ್ ಆಫ್ ಸ್ಟಾಂಪ್ಸ್ ಡಾ.ಬಿ. ಆರ್.ಮಮತಾ ಸಲಹೆ ನೀಡಿದ್ದಾರೆ.

ಮೈಸೂರಿನ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಮೈದಾನದಲ್ಲಿ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಘಟಕ, ಕ್ರೆಡಾಯ್ ಹಾಗೂ ಮೈಸೂರು ಬಿಲ್ಡರ್ಸ್ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿರುವ ನಾಲ್ಕು ದಿನಗಳ 'ಮೈ ರಿಯಾಲಿಟಿ-2024' ರಿಯಲ್ ಎಸ್ಟೇಟ್ ವಸ್ತುಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯ ಹಾಗೂ ದೇಶದಲ್ಲಿ ರಿಯಲ್ ಎಸ್ಟೇಟ್ ಉದ್ಯಮ ವೇಗವಾಗಿ ಬೆಳೆಯುತ್ತಿದೆ. 2025ರ ಮಾರ್ಚ್ ವೇಳೆಗೆ ಇನ್ನಷ್ಟು ಪ್ರಗತಿ ಸಾಧಿಸಲಿದೆ. ದೇಶದಲ್ಲಿ ಮುಂದಿನ ಹತ್ತು ವರ್ಷದಲ್ಲಿ ರಿಯಲ್ ಎಸ್ಟೇಟ್ ಉದ್ಯಮ 1.3 ಟ್ರಿಲಿಯನ್ ಡಾಲರ್ ವಹಿವಾಟು ನಡೆಸುತ್ತದೆ. ಈ ವರ್ಷ ಸ್ಟಾಂಪ್ಸ್ ಅಂಡ್ ರಿಜಿಸ್ಟ್ರೇಷನ್‌ನಲ್ಲಿ ಶೇ.15ರಷ್ಟು ಗ್ರೋಥ್ ರೇಟ್ ದಾಖಲಾಗಿದೆ. ಆದಾಯ ಸಂಗ್ರಹದಲ್ಲಿ ಈ ವರ್ಷ 20 ಸಾವಿರ ಕೋಟಿ ರೂ. ಸಂಗ್ರಹಿಸುವ ಗುರಿ ಇಲಾಖೆ ಮುಂದೆ ಇತ್ತು. ಆದರೆ 20,287 ಕೋಟಿ ಆದಾಯ ಸಂಗ್ರಹಿಸಲಾಗಿದೆ. 2022-23ನೇ ಸಾಲಿನಲ್ಲಿ 15 ಸಾವಿರ ಕೋಟಿ ಆದಾಯ ಸಂಗ್ರಹಿಸುವ ಗುರಿ ನೀಡಲಾಗಿತ್ತು. ಆದರೆ, 17,874 ಕೋಟಿ ರೂ. ಸಂಗ್ರಹವಾಗಿದೆ. ಇದರಿಂದ ಗ್ರೋಥ್ ರೇಟ್ ಶೇ.20ರಷ್ಟು ಹೆಚ್ಚಳವಾಗಿದೆ. ಈ ಹಿನ್ನೆಲೆಯಲ್ಲಿ ಮುಂಬರುವ ವರ್ಷಗಳಲ್ಲೂ ರಿಯಲ್ ಎಸ್ಟೇಟ್ ಉದ್ಯಮ ಇನ್ನಷ್ಟು ಚುರುಕುಗೊಳ್ಳಲಿದೆ ಎಂದು ತಿಳಿಸಿದರು.

ಸೂರು ನೀಡಲು ಅನ್ನ ಕಿತ್ತುಕೊಳ್ಳುತ್ತಿದ್ದೇವೆ

ಜನರಿಗೆ ಬೇಕಾದ ಮನೆ ನಿರ್ಮಿಸಿಕೊಡಲು ನಾವು ಅನ್ನ ಕಿತ್ತುಕೊಳ್ಳುವ ಪರಿಸ್ಥಿತಿಗೆ ಬಂದು ನಿಂತಿದ್ದೇವೆ. ಬಡಾವಣೆಗಳ ನಿರ್ಮಾಣಕ್ಕಾಗಿ ನೋಂದಣಿ ಕಚೇರಿಗೆ ಕೃಷಿ ಭೂಮಿಯನ್ನೆ ಅನ್ಯಕ್ರಾಂತ ಮಾಡಿಸಲು ಅರ್ಜಿ ಸಲ್ಲಿಕೆಯಾಗುತ್ತಿವೆ. ಇದನ್ನು ಕಂಡಾಗ ನೋವುಂಟಾಗುತ್ತದೆ. ಬಡಾವಣೆ ನಿರ್ಮಾಣಕ್ಕೂ ಮುನ್ನ ಆ ಭೂಮಿಯಲ್ಲಿ ಕೃಷಿ ಚಟುವಟಿಕೆ ನಡೆಯುತ್ತಿರುತ್ತವೆ. ದವಸ ಧಾನ್ಯ ಬೆಳೆಯುತ್ತಿರುತ್ತಾರೆ. ಬಡಾವಣೆ ನಿರ್ಮಾಣಗೊಂಡರೆ ಆ ಭೂಮಿಯಲ್ಲಿ ಏನನ್ನೂ ಬೆಳೆಯಲು ಸಾಧ್ಯವಿಲ್ಲ. ಇದರಿಂದ ಮನೆ ನಿರ್ಮಾಣಕ್ಕೆ ಅನ್ನವನ್ನು ಕಿತ್ತುಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

- ಡಾ.ಬಿ.ಆರ್.ಮಮತಾ, ಇನ್ಸ್‌ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್

ದೇಶದ ಜನತೆ ಭದ್ರತೆಯನ್ನು ಬಯಸುತ್ತಿದ್ದಾರೆ. ಅದರಲ್ಲೂ ಕೋವಿಡ್ ಸಮಸ್ಯೆ ಕಾಣಿಸಿಕೊಂಡ ನಂತರ ಇವರ ಸಂಖ್ಯೆಯೂ ಹೆಚ್ಚಾಗಿದೆ. ವಾಸ ಮಾಡಲು ಒಂದು ಸೂರು (ಮನೆ) ಬೇಕೆಂದು ಬಯಸುತ್ತಿರುವ ಜನರಿಗೆ ರಿಯಲ್ ಎಸ್ಟೇಟ್ ಉದ್ಯಮ ಭದ್ರತೆ (ಮನೆ) ಒದಗಿಸುವತ್ತ ಮುಂದಾಗಿದೆ. ಇದರಿಂದ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಪ್ರಿಡಿಕ್ಷನ್ ಹೆಚ್ಚಾಗುತ್ತಿದೆ ಎಂದರು.

ರಾಜ್ಯದಲ್ಲಿಯೇ ಮೈಸೂರಲ್ಲಿ ಆಸ್ತಿ ನೊಂದಣಿ ವಿಚಾರದಲ್ಲಿ ನೋಂದಣಿ ಕಚೇರಿಗೆ ಕಟ್ಟುನಿಟ್ಟಾದ ಅಗತ್ಯವುಳ್ಳ ದಾಖಲೆಗಳನ್ನು ಸಲ್ಲಿಸುತ್ತಿರುವುದು ಶ್ಲಾಘನೀಯ. ಇದಕ್ಕೆ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಘಟಕ, ಕ್ರೆಡಾಯ್, ಬಿಲ್ಡರ್ಸ್ ಚಾರಿಟೆಬಲ್ ಟ್ರಸ್ಟ್ ಸದಸ್ಯರ ಬದ್ಧತೆ ಕಾರಣ. ಬೆಂಗಳೂರು ಸೇರಿದಂತೆ ಬೇರೆ ಬೇರೆ ಜಿಲ್ಲೆಗಳಲ್ಲಿ ಆಸ್ತಿ ನೋಂದಣಿಗೆ ಬರುವ ಡೆವಲಪರ್ಸ್‌ಗಳು ಅಗತ್ಯ ದಾಖಲೆಗಳನ್ನು ತರುವುದೇ ಇಲ್ಲ. ಇದರಿಂದ ನೋಂದಣಿ ಪ್ರಕ್ರಿಯೆ ವಿಳಂಬವಾಗುತ್ತದೆ ಅಲ್ಲದೆ, ಆದಾಯ ಸಂಗ್ರಹವೂ ಕುಂಠಿತವಾಗುತ್ತದೆ. ಮೈಸೂರಲ್ಲಿ ಆಸ್ತಿ ನೋಂದಣಿಗೆ ಬೇಕಾದ ದಾಖಲೆಗಳನ್ನು ನೀಡುತ್ತಿರುವುದು ಶ್ಲಾಘನೀಯ ಎಂದು ಅಭಿಪ್ರಾಯಪಟ್ಟರು.

ಮಾತೃ ದಾಖಲೆ ಪರಿಶೀಲಿಸಿಕೊಳ್ಳಿ: ಡೆವಲಪರ್ಸ್‌ಗಳು ಬಡಾವಣೆ ಹಾಗೂ ವಸತಿ ಸಮುಚ್ಚಯ ನಿರ್ಮಿಸಲು ಆಸ್ತಿ ಖರೀದಿಸುವ ಮುನ್ನ ದಾಖಲೆಗಳನ್ನು ಪರಿಶೀಲಿಸುವುದು ಅಗತ್ಯ. ಕೆಲವು ಆಸ್ತಿಗಳು ವಿವಾದಾತ್ಮಕವಾಗಿರುತ್ತವೆ. ಇಂತಹ ಸಂದರ್ಭದಲ್ಲಿ ಮಾರಾಟ ಮಾಡುವವರು ಸುಲಭವಾಗಿ ಮಾರಾಟ ಮಾಡಿ, ಸಮಸ್ಯೆಯಿಂದ ಬಿಡುಗಡೆಗೊಳ್ಳಲು ಪ್ರಯತ್ನಿಸುತ್ತಾರೆ. ಇದರಿಂದ ಖರೀದಿಸಿದ್ದವರು ಸಮಸ್ಯೆಗೆ ತುತ್ತಾಗಲಿದ್ದಾರೆ. ಈ ಹಿನ್ನೆಲೆಯಲ್ಲಿ ಆಸ್ತಿಗೆ ಸಂಬಂಧಿಸಿದ ಮೂಲ ದಾಖಲೆ ಪರಿಶೀಲಿಸಬೇಕು. ಅಲ್ಲದೆ, ಕಾನೂನು ತಜ್ಞರ ಅಭಿಪ್ರಾಯ ಪಡೆದುಕೊಳ್ಳುವುದು ಅನಿವಾರ್ಯ. ಒಂದು ವೇಳೆ ದಾಖಲೆ ಪರಿಶೀಲಿಸದೆ ಖರೀದಿಸಿದ ಜಾಗದಲ್ಲಿ ಕೋಟ್ಯಾಂತರ ರೂ. ವೆಚ್ಚ ಮಾಡಿ ಕಟ್ಟಡ ನಿರ್ಮಾಣ, ಬಡಾವಣೆ ನಿರ್ಮಾಣ ಮಾಡಿದರೆ ಕೈ ಸುಟ್ಟುಕೊಳ್ಳಬೇಕಾದ ಪರಿಸ್ಥಿತಿ ಎದುರಾಗುವ ಸಾಧ್ಯತೆ ಇದೆ ಎಂದು ಎಚ್ಚರಿಸಿದರು.

ಕಾವೇರಿ-2 ತಂತ್ರಾಂಶ: ಈ ಹಿಂದೆ ರಾಜ್ಯದ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಆಸ್ತಿ ನೋಂದಣಿ ಪ್ರಕ್ರಿಯೆಯಲ್ಲಿ ವಿಳಂಬವಾಗುತ್ತಿದೆ ಎಂಬ ದೂರು ಕೇಳಿ ಬರುತ್ತಿತ್ತು. ಅದನ್ನು ಜನಸ್ನೇಹಿಗೊಳಿಸುವ ನಿಟ್ಟಿನಲ್ಲಿ ಕಾವೇರಿ ತಂತ್ರಾಂಶ ಅಭಿವೃದ್ಧಿಪಡಿಸಿ, ನೋಂದಣಿ ಪ್ರಕ್ರಿಯೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಆದರೂ, ಸಣ್ಣಪುಟ್ಟ ಲೋಪದೋಷಗಳಿರುವ ಬಗ್ಗೆ ಗಮನಕ್ಕೆ ಬಂದಿದ್ದು, ಅದನ್ನು ಸರಿಪಡಿಸಿ ಸುಲಲಿತವಾದ ಸೇವೆ ನೀಡುವ ನಿಟ್ಟಿನಲ್ಲಿ ಕಾವೇರಿ-2 ತಂತ್ರಾಂಶ ಅಳವಡಿಸಿಕೊಳ್ಳಲಾಗಿದೆ. ಶೀಘ್ರವೇ ಎಲ್ಲಾ ಸಮಸ್ಯೆಗಳು ಬಗೆ ಹರಿಯುತ್ತದೆ ಎಂದು ಭರವಸೆ ನೀಡಿದರು.

ಸಾಮಾಜಿಕ ಜವಾಬ್ದಾರಿ ಬಿಲ್ಡರ್ಸ್‌ಗೆ ಇರಬೇಕು: ಇತ್ತೀಚಿನ ವರ್ಷಗಳಲ್ಲಿ ಪರಿಸರದ ಮೇಲಿನ ದೌರ್ಜನ್ಯ ಹೆಚ್ಚಾಗುತ್ತಿದೆ ವಿವಿಧ ಕಾರಣಗಳಿಂದ ಮರಗಳ ಹನನ ಯಥೇಚ್ಛವಾಗಿ ನಡೆಯುತ್ತಿದೆ. ಇದರ ಪರಿಣಾಮವಾಗಿ ಹವಾಮಾನ ವೈಪರೀತ್ಯ ಉಂಟಾಗುತ್ತಿದೆ. ಈ ವರ್ಷ ಮೈಸೂರು, ಬೆಂಗಳೂರು ಸೇರಿದಂತೆ ಎಲ್ಲೆಡೆ ತೀವ್ರ ಸ್ವರೂಪದ ಉಷ್ಣಾಂಶ ದಾಖಲಾಗಿದೆ. ಮುಂದಿನ ದಿನಗಳಲ್ಲಿ ಮರಗಳ ಹನನ ನಿಲ್ಲಿಸದಿದ್ದರೆ ಹವಾಮಾನದ ದುಷ್ಪರಿಣಾಮ ತೀವ್ರಗತಿಯಲ್ಲಿ ಕಾಡಬಹುದು. ಈ ಹಿನ್ನೆಲೆಯಲ್ಲಿ ಬಿಲ್ಡರ್ಸ್‌ಗಳು ಬಡಾವಣೆ ನಿರ್ಮಾಣಕ್ಕೆ ಖರೀದಿಸುವ ಜಾಗದಲ್ಲಿ ಮರಗಳು ಬೆಳೆದಿದ್ದರೆ ಸಾಧ್ಯವಾದಷ್ಟು ಉಳಿಸಿಕೊಳ್ಳುವುದಕ್ಕೆ ಮುಂದಾಗಬೇಕು. ಪರಿಸರ ಸಂರಕ್ಷಣೆಯಲ್ಲಿ ಸಾಮಾಜಿಕ ಜವಾಬ್ದಾರಿ ಪ್ರದರ್ಶಿಸಬೇಕು ಎಂದು ಸಲಹೆ ನೀಡಿದರು.

ಇದಕ್ಕೂ ಮುನ್ನ ಟೌನ್ ಪ್ಲಾನಿಂಗ್ ಹಾಗೂ ಕಂಟ್ರಿ ಪ್ಲಾನಿಂಗ್ ಜಂಟಿ ನಿರ್ದೇಶಕರಾದ ಡಾ.ಪಂಕಜ ಮಾತನಾಡಿ, ಮೈಸೂರು ನಗರ ವ್ಯವಸ್ಥಿತವಾಗಿ ಬೆಳೆಯಲು ಇಲ್ಲಿನ ಬಿಲ್ಡರ್ಸ್‌ಗಳ ಬದ್ಧತೆಯೇ ಕಾರಣ. ಇದರಿಂದ ಮೈಸೂರಲ್ಲಿ ಅಚ್ಚುಕಟ್ಟಾದ ವ್ಯವಸ್ಥೆ ಇದೆ. ನಾಗರಿಕರಿಗೆ ಯಾವುದೇ ತೊಂದರೆಯಾಗದಂತೆ ನಗರ ಬೆಳೆಯುತ್ತಿದೆ. ಮುಂದಿನ ದಿನಗಳಲ್ಲಿ ಬಡಾವಣೆಗಳು ಇನ್ನಷ್ಟು ಸುಸಜ್ಜಿತವಾಗಿ ಬೆಳೆಯುವುದಕ್ಕೆ ಬಿಲ್ಡರ್ಸ್ ಅಸೋಸಿಯೇಷನ್‌ಗೆ ಇಲಾಖೆ ಸಹಕಾರ ನೀಡುತ್ತದೆ ಎಂದು ತಿಳಿಸಿದರು.

ವಸ್ತುಪ್ರದರ್ಶನಕ್ಕೆ ಚಾಲನೆ: ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಮೈದಾನದಲ್ಲಿ ಆಯೋಜಿಸಿರುವ ರಿಯಲ್ ಎಸ್ಟೇಟ್ ವಸ್ತು ಪ್ರದರ್ಶನ 'ಮೈ ರಿಯಾಲಿಟಿ-2024'ಕ್ಕೆ ಚಾಲನೆ ನೀಡಲಾಯಿತು. ಈ ಪ್ರದರ್ಶನದಲ್ಲಿ 30 ಮಳಿಗೆಗಳಲ್ಲಿ ವಿವಿಧ ಬಿಲ್ಡರ್ಸ್‌ಗಳು ತಮ್ಮ ಬಡಾವಣೆ, ವಸತಿ ಸಮುಚ್ಚಯ, ಮನೆ ನಿರ್ಮಾಣ ಸೇರಿದಂತೆ ರಿಯಲ್ ಎಸ್ಟೇಟ್‌ಗೆ ಸಂಬಂಧಿಸಿದ ಮಾಹಿತಿ ನೀಡಲಾಗುತ್ತಿದೆ. ಮೈಸೂರಲ್ಲಿ ಮನೆ, ನಿವೇಶನ ಖರೀದಿಸಲು ಬಯಸುವವರಿಗೆ ಒಂದೇ ಸೂರಿನಡಿ ಉಪಯುಕ್ತ ಮಾಹಿತಿ ಒದಗಿಸಲಾಗುತ್ತಿದೆ. ಜೂ.10ರವರೆಗೆ ಪ್ರತಿದಿನ ಬೆಳಗ್ಗೆ 10ರಿಂದ ರಾತ್ರಿ 8.30 ರವರೆಗೆ ಪ್ರದರ್ಶನ ವೀಕ್ಷಿಸಬಹುದಾಗಿದೆ. ಈ ಪ್ರದರ್ಶನದಲ್ಲಿ ವಿವಿಧ ಕಂಪನಿಗಳ ಕಾರು ಹಾಗೂ ದ್ವಿಚಕ್ರ ವಾಹನ ಪ್ರದರ್ಶನ, ಸಾಲ ಸೌಲಭ್ಯದ ಮಾಹಿತಿ ನೀಡುವ ಮಳಿಗೆಯೂ ಇದೆ.

ಕಾರ್ಯಕ್ರಮದಲ್ಲಿ ಮೈ ರಿಯಾಲಿಟಿ ಪ್ರದರ್ಶನ ಅಧ್ಯಕ್ಷ ಕೆ.ಎನ್.ರವಿಶಂಕರ್, ಕಾರ್ಯದರ್ಶಿ ಅಶ್ವಿನ್ ಆರ್.ಪಾಳೆಗಾರ್, ಬಿಎಐ ಮೈಸೂರು ಅಧ್ಯಕ್ಷ ಎ.ಎಸ್.ಒಬೇರಾಯ್‌ಸಿಂಗ್, ಕಾರ್ಯದರ್ಶಿ ಕೆ.ಆರ್.ಪ್ರಭಾಕರ್ ರಾವ್, ಕ್ರೆಡಾಯ್ ಅಧ್ಯಕ್ಷ ಶ್ರೀಹರಿ, ಕಾರ್ಯದರ್ಶಿ ಎಲ್.ಅರುಣ್ ಪಂಡಿತ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ

ಭಾನುವಾರ 9–6–2024

■ಪ್ರೊ.ಎಸ್.ಶಿವರಾಜಪ್ಪ
e-mail:shivarajappa876@gmail.com



“ಬಸವಣ್ಣನವರ ಬದುಕು, ಸಾಧನೆ, ಸಿದ್ಧಿಗಳನ್ನು ಗಮನಿಸಿದರೆ ಅವರು ಒಬ್ಬ ಮಹಾಚಿಂತಕ, ವಿಮರ್ಶಕ, ಭೂಲೋಕವನ್ನು ಕೈಲಾಸವನ್ನಾಗಿ ಮಾಡಿದ ಅಪ್ರತಿಮ ಸಾಧಕ, ವಿಶ್ವಕ್ಕೆ ಕಾಯಕ ದಾಸೋಹದ ಮಹತ್ವವನ್ನು ತೋರಿಸಿದ ಮಹಾ ಕ್ರಾಂತಿದರ್ಶಿ. ಬಸವಣ್ಣನವರು ತತ್ವಕ್ಕಾಗಿ ಮಾಡಿದ ಮೊದಲ ಕ್ರಾಂತಿ ಮಾನವ ಕುಲಕ್ಕೆ ದಾರಿದೀಪವಾಯಿತು. ಆಧ್ಯಾತ್ಮಿಕ ಚರಿತ್ರೆಯಲ್ಲೊಂದು ಹೊಸ ಅಧ್ಯಾಯಕ್ಕೆ ನಾಂದಿಯಾಯಿತು.

ಮಹಾ ಮಾನವತಾವಾದಿ
ಬಸವಣ್ಣ

ಮಹಾ ಮಾನವತಾವಾದಿ ಬಸವಣ್ಣನವರು ಬಿಜಾಪುರ ಜಿಲ್ಲೆಯ ಬಾಗೇವಾಡಿಯ ಅಗ್ರಹಾರ (ಅರಸರು ಬ್ರಾಹ್ಮಣರಿಗಾಗಿ ಕೊಟ್ಟಿದ್ದ ಗ್ರಾಮ)ದವರಾದರೂ ಜನಿಸಿದುದು ತಾಯಿಯ ತವರು ಮನೆಯಾದ ಇಂಗಳೇಶ್ವರದಲ್ಲಿ. ತಂದೆ ಮಾದರಸ, ತಾಯಿ ಮಾದಲಾಂಬಿಕೆ. ಇವರ ಕಾಲ ಕ್ರಿ.ಶ.1131.

ಎಂಟನೆಯ ವಯಸ್ಸಿನಲ್ಲಿಯೇ ವೈದಿಕ ಕಂದಾಚಾರಗಳಿಂದ ದೂರವಾಗಿ ಮನೆತನದ ಗುರುಗಳಾದ ಈಶಾನ್ಯ ಗುರುಗಳ ಕೂಡಲ ಸಂಗಮ ಗುರುಕುಲವನ್ನು ಆಯ್ಕೆ ಮಾಡಿಕೊಂಡರು. ಜಾತ ವೇದ ಮುನಿಗಳ ಮಾರ್ಗದರ್ಶನದಲ್ಲಿ ವೇದೋಪನಿಷತ್, ಸುಮಾ ಶಾಸ್ತ್ರಾದಿಗಳನ್ನು ಅಧ್ಯಯನ ಮಾಡಿ ತಮ್ಮ 24ರ ವಯಸ್ಸಿನಲ್ಲಿ ಅಂದಿನ ಕಳಚೂರ ಅರಸು ಬಿಜ್ಜಳನ ರಾಜಧಾನಿ ಮಂಗಳವಾಡವನ್ನು ಪ್ರವೇಶ ಮಾಡಿದರು. ಬಸವಣ್ಣನವರ ಸೋದರ ಮಾವಂದಿರಾದ ಸಿದ್ಧರಸ ಮತ್ತು ಬಲದೇವ ಅರಸರು ಪ್ರಮುಖ ಸ್ಥಾನದಲ್ಲಿದ್ದರು. ಅವರ ಪ್ರಭಾವ ಹಾಗೂ ಕರ್ತೃತ್ವ ಸಾಮರ್ಥ್ಯದಿಂದ ಬಿಜ್ಜಳನ ಆಸ್ಥಾನದಲ್ಲಿ ಅರ್ಥಮಂತ್ರಿಯಾಗಿ ಕೆಲಸ ಮಾಡುವ ಅವಕಾಶ ಪಡೆದ ಇವರು, ತಮ್ಮ ಸತ್ಯ, ಶುದ್ಧ, ಪ್ರಾಮಾಣಿಕ ಜೀವನದಿಂದ ದಿನ ಕಳೆದಂತೆ ಉನ್ನತ ಸ್ಥಾನವಾದ ಪ್ರಧಾನಿ ಪಟ್ಟವನ್ನು ತಲುಪಿದರು.

ನಂತರ ಬಲದೇವರಸರ ಮಗಳು ಗಂಗಾಂಬಿಕೆಯನ್ನು ಸಿದ್ಧರಸರ ಮಗಳು ನೀಲಾಂಬಿಕೆಯನ್ನು ಮದುವೆಯಾದರು. ತಾಯಿಯ ವಾತ್ಸಲ್ಯ ತೋರಿಸುತ್ತಿದ್ದ ಸ್ವಂತ ಅಕ್ಕನಾದ ಅಕ್ಕ ನಾಗಮ್ಮನವರ ಏಕಮಾತ್ರ ಮಗ ಚೆನ್ನಬಸವಣ್ಣನವರನ್ನು ಕಲ್ಯಾಣಕ್ಕೆ ಕರೆಯಿಸಿಕೊಂಡಾಗ ಗೃಹಸ್ಥಾಶ್ರಮದ ಅನುಭವವನ್ನು ಪಡೆದುಕೊಂಡರು. ಕಲ್ಯಾಣದಲ್ಲಿ ಅವರು ಕೆಲವೇ ವರ್ಷಗಳಿದ್ದರೂ ಧಾರ್ಮಿಕ, ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಹಿತ್ಯ ರಂಗಗಳಲ್ಲಿ ಹಲವು ಮಹತ್ಕಾರ್ಯಗಳನ್ನು ಮಾಡಿ ಮಹಾಕ್ರಾಂತಿಕಾರರಾದರು.

ಉತ್ತಮ ಕುಲದಲ್ಲಿ ಹುಟ್ಟಿದರೂ ಶಿವ ಮೊದಲು, ಅಂತ್ಯ, ಕಡೆಯದಾಗಿ ಒಂದೇ ಎಂದು ನಂಬಿ ಬಾಳಿದರು. ಹಾಗೇ ಬಾಳುವಂತೆ ಎಲ್ಲರಿಗೂ ಹೇಳಿದರು. ತಾವು ಪ್ರಧಾನಮಂತ್ರಿ ಸ್ಥಾನಕ್ಕೇರಿದರೂ ನಮ್ಮ ಅಮ್ಮು ಗುಟ್ಟದೆ ಎನಗಿಂತ ಕಿರಿಯರಿಲ್ಲ. ಶಿವಭಕ್ತರಿಗಿಂತ ಹಿರಿಯರಿಲ್ಲ. ಬಾಗಿದ ತಲೆಯ ಮುಗಿದ ಕೈಯಾಗಿರಿಸು ಕೂಡಲ ಸಂಗಮ ದೇವಾ... ಎಂಬ ವಿನಯ ಸಂಪನ್ನತೆಯನ್ನು ತೋರಿದರು.

ಮುಂದೆ ಊರನ್ನು ಬಿಟ್ಟ ಬಸವಣ್ಣನವರು ಅಕ್ಕ ನಾಗಮ್ಮನವರ ಜೊತೆಯಲ್ಲಿ ಕೂಡಲ ಸಂಗಮಕ್ಕೆ ಬರುತ್ತಾರೆ. ಕೂಡಲ ಸಂಗಮ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಮಲಪ್ರಭಾ ಮತ್ತು ಕೃಷ್ಣಾ ನದಿಗಳ ಸಂಗಮ ಸ್ಥಾನದಲ್ಲಿದೆ. ಅಂದು ಬಸವಣ್ಣನವರ ದಾಸೋಹದ ಮನೆಯಲ್ಲಿ (ಇದನ್ನೇ ಇಂದು ಮಹಾ ಮನೆ ಎನ್ನುತ್ತಾರೆ) ಪ್ರತಿ ನಿತ್ಯ ಲಕ್ಷದ ಮೇಲೆ ತೊಂಭತ್ತಾರು ಸಾವಿರ ಶರಣರು ಜಾತಿ ಭೇದವಿಲ್ಲದೆ ಆ ಮಹಾ ಮನೆಯಲ್ಲಿ ಎಲ್ಲರೂ ಒಟ್ಟಾಗಿ ಸೇರಿ ಪ್ರಸಾದ ಸ್ವೀಕಾರ ಮಾಡುತ್ತಿದ್ದರು. ಮೇಲ್ವರ್ಗದವರ ತುಳಿತಕ್ಕೆ ಒಳಗಾದ ಅಮಾಯಕರನ್ನು ಮೇಲೆತ್ತುವ ತವಕ ಅವರದಾಗಿತ್ತು. ಜೀವನದುದ್ದಕ್ಕೂ ಅವರ ಮಾತಿನಲ್ಲಿ ಹೊಗಳಿ ಹೊಗಳಿ ಹೊನ್ನ ಶೂಲಕ್ಕೇರಿಸದಿರಿ. ಬಲಿಯಾದ ಮುನ್ನ ಕೊಯ್ಯದಿ... ಎಂಬ ಸೌಜನ್ಯ ನುಡಿ ತುಂಬಿತ್ತು. ಕೂಡಲ ಸಂಗಮ ದೇವಾ ಎಂಬ ಅಂಕಿತನಾಮದ ಮೂಲಕ 1426 ವಚನಗಳನ್ನು ರಚಿಸಿ ಕನ್ನಡ ಸಾಹಿತ್ಯಕ್ಕೆ ವರದಾನವಾಗಿದ್ದಾರೆ.

ಜಗತ್ತಿನ ಚರಾಚರವೆಲ್ಲವೂ ಭಗವಂತನದೆಂಬ ಅಚಲ ವಿಶ್ವಾಸ ಇವರದು. ಇಡೀ ಮಾನವ ಸಮಾಜವನ್ನು ಏಕ ದೇವೋಪಾಸನೆಯ ಮೂಲಕ ಒಂದುಗೂಡಿಸಿ, ಸಮಾಜದ ಮೇಲು–ಕೀಳುಗಳನ್ನು ನಿವಾರಿಸಿ, ಸಮಾನ ಹಾಗೂ ಗೌರವಾನ್ವಿತ ನೆಲೆಯ ಮೇಲೆ ಎಲ್ಲರನ್ನೂ ನಿಲ್ಲಿಸಬೇಕೆಂಬ ಮಹೋದ್ದೇಶ ಬಸವಣ್ಣನವರದಾಗಿತ್ತು.

ತಮ್ಮ ಮನೆಯ ಹಸುಗಳನ್ನು ಕದ್ದೊಯ್ದಾಗ 'ಕರುಗಳನ್ನು ಬಿಟ್ಟುಬಿಡಿ. ಅವು ತಮ್ಮ ತಾಯಿ ಹಸುಗಳನ್ನು ಸೇರಿಕೊಳ್ಳಲಿ' ಎಂದ ಮಾತು ಅವರ ವ್ಯಕ್ತಿತ್ವದ, ಬಡವರ ಬಗ್ಗೆ ಅವರಿಗಿರುವ ಅಂತರಾಳದ ಪ್ರೀತಿಯನ್ನು ಸೂಚಿಸುತ್ತದೆ.

ಈ ಎಲ್ಲಾ ಕಾರಣಗಳಿಂದ ಬಸವಣ್ಣನವರ ಜನನವೇ ಒಂದು ಮಹಾ ಘಟನೆಯಾಗಿದೆ. ಇವರ ಒಟ್ಟಾರೆ ಜೀವನ ಸಂದೇಶಗಳನ್ನು ಗಮನಿಸಿದಾಗ ಐದು ಅಂಶಗಳು ನಮ್ಮ ಗಮನಕ್ಕೆ ಬಂದು ಹೃದಯಾಂತರಾಳವನ್ನು ತಟ್ಟುತ್ತವೆ. ಇದು ಅವರ ಗುರಿಯೂ ಸಹ ಆಗಿತ್ತು.

- **ಜಗತ್ತಿನ ಲೇಸಿಗಾಗಿ ಸಾಮಾಜಿಕ ಕ್ರಾಂತಿ ಮಾಡಿದ್ದು**
- **ಧರ್ಮದ ಹಾದಿಯಲ್ಲಿ ನಡೆದಾಗ ರಾಜಕೀಯಕ್ಕೆ ಜಯ ಸಿಗುತ್ತದೆ**
- **ಸ್ತ್ರೀ ಸಮಾನತೆಯನ್ನು ಜಾಗೃತಿಗೊಳಿಸಿದ್ದು (ಶ್ರೀ ಕುಲೋದ್ಧಾರ ಮಾಡಿದ್ದು)**
- **ಧರ್ಮಕ್ಕೆ, ವೈಚಾರಿಕತೆಯ ದಾರಿ ಧೀನವೆಂದು ತೋರಿಸಿದ್ದು**
- **ಸಾಮಾಜಿಕ ಬದ್ಧತೆ ಸಾಹಿತ್ಯದ ಗುರಿ ಎಂಬುದನ್ನು ವಚನಗಳ ರಚನೆಯ ಮೂಲಕ ತೋರಿಸಿಕೊಟ್ಟಿದ್ದು.**

ಒಟ್ಟಿನಲ್ಲಿ ಬಸವಣ್ಣನವರ ಜೀವನ, ಸಾಧನೆ ಮತ್ತು ಸಂದೇಶಗಳು ದೀಪ್ತಿಗಳಾಗಿ ಅತಿಶಯವನ್ನುಂಟು ಮಾಡಿವೆ. ಈ ಎಲ್ಲಾ ಅಂಶಗಳನ್ನು ಅವಲೋಕಿಸಿದಾಗ ಹನ್ನೆರಡನೆಯ ಶತಮಾನವನ್ನು ಬಸವ ಯುಗವೆಂದೇ ಹೇಳಬಹುದು. ಈ ಯುಗದ ಯುಗ ಪುರುಷನೆಂದರೆ ಮಹಾ ಮೇರು ಬಸವಣ್ಣ. ಧಾರ್ಮಿಕ, ಸಾಮಾಜಿಕ ಹಾಗೂ ರಾಜಕೀಯ ಮಹಾ ಕ್ರಾಂತಿಗೆ ಮೂಲ ಪುರುಷನು ಈತನೇ ಎಂಬುದಕ್ಕೆ ಅವರ ವಚನಗಳು ಸಾಕ್ಷಿಯಾಗಿವೆ.

ಜನ ಜೀವನದಲ್ಲಿ ಜಾತಿ, ಮತ, ಕುಲ, ಗೋತ್ರ, ಹೆಣ್ಣು–ಗಂಡು, ಮೇಲು–ಕೀಳು, ಬಡವ–ಶ್ರೀಮಂತ ಎಂಬ ಭೇದ ಭಾವನೆಯನ್ನು ಹೋಗಲಾಡಿಸಿ ಮಾನವರೆಲ್ಲ ಸರ್ವ ಸಮಾನರು ಎಂಬ ಉದಾತ್ತ ತತ್ವವನ್ನು ಆಚರಿಸಿ, ಬೋಧಿಸಿ, ಮಾನವನ ಕಲ್ಯಾಣವನ್ನು ಸಾಧಿಸಿದ ಕೀರ್ತಿ ಬಸವಣ್ಣನವರದು. ಅಂದು ಕಲ್ಯಾಣದಲ್ಲಿ ಬಸವಣ್ಣನವರು ಸಂಸ್ಥಾಪಿಸಿದ ಅನುಭವ ಮಂಟಪ ಇಂದು ವಿಶ್ವಧರ್ಮದ ಸಂಕೇತವಾಗಿದೆ. ಬಸವಣ್ಣನವರು ವಚನಗಳ ಮೂಲಕ ಭಕ್ತಿ, ಪ್ರೀತಿ–ಪ್ರೇಮಗಳನ್ನು ಕಾಯಕ ದಾಸೋಹದ ಮಹತ್ವವನ್ನು ವಿಶ್ವಕ್ಕೆ ಬೋಧಿಸಿ ಮಹಾನ್ ಸಮಾಜ ಸುಧಾರಕರಾಗಿದ್ದಾರೆ. ಇಲ್ಲಿ ವಚನ ಎಂದರೆ ಬರೀ ಮಾತಲ್ಲ, ಪ್ರತಿಭಾ ಪೂರ್ವಕವಾದ, ಆತ್ಮಾವಲೋಕನದ, ಆತ್ಮ ಸಂಸ್ಕಾರದ ಮಾತು.

ಅಣ್ಣನವರು ಜಗತ್ತಿಗೆ ನೀಡಿದ ಎರಡು ಪ್ರಮುಖ ಸೂತ್ರಗಳೆಂದರೆ (1) ಕಾಯಕ (2) ದಾಸೋಹ.

ಕಾಯಕವೆಂದರೆ ಮದ ಮೂಲಕ ಗಳಿಕೆ, ದಾಸೋಹವೆಂದರೆ ಉದಾರತೆಯಿಂದ ವಿತರಣೆ. ಈ ಎರಡು ಸೂತ್ರಗಳ ಮೂಲಕ ಕಲ್ಯಾಣ ರಾಜ್ಯವನ್ನು ಕಟ್ಟಿದ ಮಹಾ ವಿಶ್ವ ವಿಭೂತಿ ಬಸವಣ್ಣನವರು. ಇವರು ಇಬ್ಬರನ್ನು ಪ್ರೀತಿಸಿದರು. ಒಂದು ಭಗವಂತನನನ್ನು, ಅಂದರೆ ಕೂಡಲ ಸಂಗಮನಾಥನನ್ನು, ಎರಡು ದೇವರು ಸೃಷ್ಟಿಸಿದ ಸಮಸ್ತ ಜೀವ ಜಂತುಗಳನ್ನು. ಬಸವಣ್ಣನವರ ಬದುಕು, ಸಾಧನೆ, ಸಿದ್ಧಿಗಳನ್ನು ಗಮನಿಸಿದರೆ ಅವರು ಒಬ್ಬ ಮಹಾಚಿಂತಕ, ವಿಮರ್ಶಕ, ಭೂಲೋಕವನ್ನು ಕೈಲಾಸವನ್ನಾಗಿ ಮಾಡಿದ ಅಪ್ರತಿಮ ಸಾಧಕ, ವಿಶ್ವಕ್ಕೆ ಕಾಯಕ ದಾಸೋಹದ ಮಹತ್ವವನ್ನು ತೋರಿಸಿದ ಮಹಾ ಕ್ರಾಂತಿದರ್ಶಿ. ಬಸವಣ್ಣನವರು ತತ್ವಕ್ಕಾಗಿ ಮಾಡಿದ ಮೊದಲ ಕ್ರಾಂತಿ ಮಾನವ ಕುಲಕ್ಕೆ ದಾರಿದೀಪವಾಯಿತು. ಆಧ್ಯಾತ್ಮಿಕ ಚರಿತ್ರೆಯಲ್ಲೊಂದು ಹೊಸ ಅಧ್ಯಾಯಕ್ಕೆ ನಾಂದಿಯಾಯಿತು.

ಹೀಗಾಗಿಯೇ ಅವರು ಬದುಕಿನ ಕಾಲ ಅಲ್ಪವಾದರೂ ಅವರು ಸಾಧಿಸಿದ ಸಾಧನೆ ಅಧಿಕ. ಕನ್ನಡ ಭಾಷೆಯಲ್ಲಿ ಅವರು ರಚಿಸಿದ ವಚನಗಳು ಮಾನವ ಕುಲಕ್ಕೆ ನೆಮ್ಮದಿ, ಸ್ಫೂರ್ತಿ ನೀಡುವ ಚಿಂತನ ಚಿಲುಮೆಗಳಾದವು. ಬಸಣ್ಣನವರ ತತ್ವಗಳು, ಸಿದ್ಧಾಂತಗಳು ಅಂದಿಗಿಂತ ಇಂದು ಹೆಚ್ಚು ಪ್ರಸ್ತುತವೆನಿಸುತ್ತವೆ. ಭಕ್ತಿಯಿಲ್ಲದ ಬಡವ ನಾನಯ್ಯ ಎಂದು ತಮ್ಮ ನಿಮ್ಮ ಸದ್ಭಕ್ತರ ಪಾದವನರಿದಪ್ಪ ಮಹಾ ಪದವಿಯ ಕರುಣಿಸಯ್ಯ ಎಂದು ತಮ್ಮ ವಿನಮ್ರ ಭಾವನೆಯನ್ನು ವ್ಯಕ್ತಪಡಿಸುತ್ತಾರೆ. ಬದುಕು ಮೊದಲು, ನಂತರ ಮಾತು.

ಆದ್ದರಿಂದ ಇವರ ಕಾಲದ ಸಮಾಜದ ಜೀವನವನ್ನು ಮೊದಲಿಗೆ ಅರಿಯಬೇಕು. ನಂತರ ಜೀವನದ ಫಲವಾದ ವಚನಗಳಲ್ಲಿ ಅಭಿವ್ಯಕ್ತವಾಗಿರುವ ಮಾನವ ಸಂಸ್ಕೃತಿಯನ್ನು ಗಮನಿಸಬೇಕು. ವ್ಯಕ್ತಿ ಶುದ್ಧನಾಗದೆ ಸಮಾಜ ಶುದ್ಧವಾಗದು ಎಂದು ನಂಬಿದ್ದ ಬಸವಣ್ಣನವರು, ಅಂತರಂಗ–ಬಹಿರಂಗ ಶುದ್ಧಿಯನ್ನೇ ತಮ್ಮ ಧರ್ಮದ ಜೀವಾಳವನ್ನಾಗಿ ಮಾಡಿಕೊಂಡು ವಚನಗಳನ್ನು ರಚಿಸಿದರು. ಇಂಥ ವಚನ ಸಾಹಿತ್ಯ ಒಂದು ಧರ್ಮದ ಸಾಹಿತ್ಯವಾಗದೆ, ಇಡೀ ಮಾನವ ಕುಲದ ಉದ್ಧಾರ ಬಯಸುವ ಒಂದು ಧರ್ಮದ ಸಾಹಿತ್ಯವಾಗದೇ, ಇಡೀ ಮಾನವ ಕುಲದ ಉದ್ಧಾರ ಬಯಸುವ ಸಾಹಿತ್ಯ ಕೃಷಿಯಾಗಿದೆ.

ಭೋಗ ಬದುಕಿನ ಸರಕು, ಸಂಸ್ಕೃತಿಯ ಸ್ವಾರ್ಥ, ಭ್ರಷ್ಟತೆಗಳೇ ಪ್ರಗತಿಯ ಆಭಾಸವಾಗಿರುವ ಈ ವೇಗದ ಜಗತ್ತಿನಲ್ಲಿ ಮನುಷ್ಯ ಒಳ–ಹೊರಗೆ ನೋಡಿಕೊಳ್ಳದ ಹೊರತು ಮನಸ್ಸಿನ ನೆಮ್ಮದಿ–ಶಾಂತಿಯನ್ನು ಪಡೆಯಲಾರ. ಈ ಹಿನ್ನೆಲೆಯಲ್ಲಿ ಬಸವಣ್ಣನವರ ವಚನಗಳು ತಮ್ಮ ವಕ್ರತೆಗಳನ್ನು ತಿದ್ದುವ, ನೀಗುವ, ಓದುತ್ತಿರುವಾಗಲೇ ಹೃದಯವನ್ನು ಸೂರೆಗೊಂಡು, ಅರಿವಿಗೆ ಹಚ್ಚುವ, ಅನುಭಾವಕ್ಕೆ ಹಚ್ಚುವ ನುಡಿಮುತ್ತುಗಳಾಗಿವೆ.

ಮಕ್ಕಳ ಚಿತ್ರಕಥೆ
ಯೋಗ್ಯ ಮಂತ್ರಿಯ ಆಯ್ಕೆಮಾಡಿದ್ದು ಹೀಗೆ..!


■ ಹೆಚ್.ಜಿ.ಎನ್.ಪ್ರಸಾದ್



ರಾಮಾಪುರವೆಂಬ ರಾಜ್ಯದಲ್ಲಿ ಚಂದ್ರಸೇನ ಎಂಬ ರಾಜನಿದ್ದ. ಅವನ ಆಸ್ಥಾನದಲ್ಲಿ ಅಸಾಧಾರಣ ಬುದ್ಧಿವಂತನೂ, ಪ್ರಾಮಾಣಿಕನೂ ಆದ ಮಂತ್ರಿಯೊಬ್ಬನಿದ್ದ. ರಾಜ ಅವನ ಕೆಲಸ–ಕಾರ್ಯ, ನಿಷ್ಠೆಗಳನ್ನು ಮೆಚ್ಚಿಕೊಂಡಿದ್ದ.




ಒಮ್ಮೆ ಆ ಮಂತ್ರಿಯು ಅನಾರೋಗ್ಯಪೀಡಿತನಾಗಿ ಮರಣಹೊಂದಿದ. ಇದರಿಂದ ತೀವ್ರ ಬೇಸರಗೊಂಡ ರಾಜನು ರಾಜ್ಯದ ಹಿತಕ್ಕಾಗಿ ಯಾರಾದರು ಯೋಗ್ಯ ವ್ಯಕ್ತಿಯನ್ನು ಮಂತ್ರಿಯನ್ನಾಗಿ ಮಾಡಲು ನಿರ್ಧರಿಸಿದ.



ರಾಜನು ಮಂತ್ರಿಪದವಿಯ ಆಕಾಂಕ್ಷಿಗಳನ್ನು ರಾಜ್ಯದೆಲ್ಲೆಡೆಯಿಂದ ಕರೆಸಿ ಹಲವಾರು ರೀತಿಯಲ್ಲಿ ಪ್ರಶ್ನಿಸಿ ಪರೀಕ್ಷಿಸತೊಡಗಿದ. ಹೀಗೆ ಬಂದ ಆಕಾಂಕ್ಷಿಗಳಲ್ಲಿ ಕಡೆಗೆ ಕೇವಲ ಇಬ್ಬರು ಮಾತ್ರ ರಾಜ ನೀಡಿದ ಪರೀಕ್ಷೆ ಹಾಗೂ ಪ್ರಶ್ನೆಗಳಲ್ಲಿ ತೇರ್ಗಡೆಯಾಗಿದ್ದರು.



ರಾಜನು ಅಂತಿಮವಾಗಿ ಒಬ್ಬರನ್ನು ಮಾತ್ರ ಆಯ್ಕೆ ಮಾಡಬೇಕಾಗಿತ್ತಾದ್ದರಿಂದ ಕಡೆಯ ಪರೀಕ್ಷೆ ಮಾಡಹೊರಟನು. ಇಬ್ಬರನ್ನೂ ಪ್ರತ್ಯೇಕ ಕೊಠಡಿಗಳಲ್ಲಿ ಕುಳ್ಳಿರಿಸಿ, ಮೃಷ್ಟಾನ್ನ ಭೋಜನವನ್ನು ಹಾಕಿಸಿದನು. ಊಟದ ನಂತರ ರಾಜನು ಮೊದಲನೆಯವನ ಬಳಿ ಹೋಗಿ, "ನೀವು ಸ್ವೀಕರಿಸಿದ ಅಡುಗೆ ನಾನೇ ತಯಾರಿಸಿದ್ದು....ಹೇಗಿತ್ತು...?" ಎಂದು ಪ್ರಶ್ನಿಸಿದ. ಅದಕ್ಕುತ್ತರವಾಗಿ ಆತ ನಿಜ ಹೇಳಿದರೆ ಎಲ್ಲಿ ತನ್ನ ಮಂತ್ರಿಪದವಿ ಕೈ ತಪ್ಪುವುದೊ ಎಂಬ ಕುಯುಕ್ತಿಯಿಂದ "ಅಡುಗೆ ಬಹಳ ಸೊಗಸಾಗಿತ್ತು...!!!" ಎಂದ.



ಎರಡನೆಯವನ ಬಳಿಗೂ ರಾಜನು ಹೋಗಿ, "ಅಡುಗೆ ನಾನೇ ತಯಾರಿಸಿದ್ದು...ಹೇಗಿತ್ತು...?" ಎಂದು ಪ್ರಶ್ನಿಸಿದ. ಅದಕ್ಕೆ ಆತ ನಿರ್ಭೀತನಾಗಿ ಮಂತ್ರಿ ಸ್ಥಾನದ ಆಕಾಂಕ್ಷೆ ಇಲ್ಲದೆ "ತಾವು ತಯಾರಿಸಿದ ಅಡುಗೆ ಸ್ವಲ್ಪವೂ ಸರಿಯಿರಲಿಲ್ಲ. ಎಲ್ಲವೂ ಉಪ್ಪಿನ ಮಯ, ಸಿಹಿ ತಿಂಡಿಗಳು ಸಪ್ಪೆಯಾಗಿದ್ದವು. ಯಾವುದೂ ರುಚಿಕರವಾಗಿರಲಿಲ್ಲ. ಇನ್ನುಮುಂದೆ ಅಡುಗೆ ತಯಾರಿಸಲೇಬೇಡಿ" ಎಂದುಬಿಟ್ಟ.



ಎರಡನೆಯವ ನೀಡಿದ ಉತ್ತರದಿಂದ ರಾಜನು ತೀವ್ರ ಸಂತೋಷಗೊಂಡು ಯಾವುದೇ ಅಳುಕು, ಅಂಜಿಕೆ ಇಲ್ಲದೇ ಮಂತ್ರಿ ಸ್ಥಾನದ ಆಕಾಂಕ್ಷೆ ಬಲಿಕೊಟ್ಟು ಸತ್ಯವನ್ನೇ ನುಡಿದ ಈತನೇ ಮಂತ್ರಿ ಸ್ಥಾನಕ್ಕೆ ಯೋಗ್ಯನೆಂದು ತೀರ್ಮಾನಿಸಿ ಮಂತ್ರಿಯನ್ನಾಗಿ ನೇಮಿಸಿಕೊಂಡ.



ವಾರಭವಿಷ್ಯ

9.6.2024 ರಿಂದ 15.6.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ– ರವಿ–ವೃಷಭ, ಮಿಥುನ, ಚಂದ್ರ–ಮಿಥುನ, ಕಟಕ, ಸಿಂಹ, ಕನ್ಯಾ, ಕುಜ–ಮೇಷ, ಬುಧ–ವೃಷಭ, ಮಿಥುನ, ಗುರು–ವೃಷಭ, ಶುಕ್ರ, ವೃಷಭ, ಮಿಥುನ, ಶನಿ–ಕುಂಭ, ರಾಹು–ಮೀನ ಮತ್ತು ಕೇತು–ಕನ್ಯಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
೧ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ನಿಮ್ಮ ರಾಶಿಯಿಂದ ಹನ್ನೆರಡನೇ ಮನೆಯಲ್ಲಿರುವ ರಾಹುವು ವೈಯಕ್ತಿಕ ಒತ್ತಡ ಹೆಚ್ಚಿಸಲು ಕಾರಣೀಭೂತನಾಗಿದ್ದಾನೆ. ನಂಬಿಕಸ್ಥ ಹಿರಿಯ ವ್ಯಕ್ತಿಯಿಂದ ನಿಮ್ಮ ಮಹತ್ವದ ಯೋಜನೆಗೆ ಅಡ್ಡಿಯಾದೀತು. ಕೆಲವರಿಗೆ ವಿದೇಶದಲ್ಲಿ ಉದ್ಯೋಗ ದೊರೆಯುವ ಸಾಧ್ಯತೆ. ಸಾಮಾಜಿಕ ಸ್ತರದಲ್ಲಿ ನಿಮ್ಮ ಮಾನ, ಪ್ರತಿಷ್ಠೆಗಳು ಹೆಚ್ಚಲಿದೆ. ಸಟ್ಟಾ ಜೂಜುಗಳಿಂದ ಲಾಭವನ್ನು ಎಣಿಸದಿರಿ.

ಶ್ರೀಸುಬ್ರಮಣ್ಯ ಸ್ತುತಿ. ಶುಭ ಸಂಖ್ಯೆ–5.

ವೃಷಭ (ಇ.ಉ.ಎ.ಓ.ವ.ವಿ.ವು.ವೆ.ವೊ)

ವಾರದಾರಂಭಕ್ಕೆ ಸ್ಥಾನ ಲಾಭ, ಸೇವಕರು ಆಜ್ಞಾನುವರ್ತಿಗಳಾಗಿರುತ್ತಾರೆ. ಪಶು ಸಂಪತ್ತಿನಿಂದ ಧನಲಾಭ. ಕ್ಷೀರ ಜನ್ಯ ವಸ್ತು ವ್ಯಾಪಾರಿಗಳಿಗೆ ಹೇರಳ ಧನ ಲಾಭ. ರೋಗ ವಿಮುಕ್ತತೆ ಹಾಗೂ ದವಾಖಾನೆಯಿಂದ ಬಿಡುಗಡೆ. ಸ್ವಪ್ರಯತ್ನದಿಂದ ಧನಲಾಭದ ಮಾರ್ಗಗಳು ತೆರೆದುಕೊಳ್ಳಲಿದೆ. ಐಹಿಕ ಸುಖ ಭೋಗಗಳನ್ನು ಅನುಭವಿಸುವಿರಿ. ಯಾವುದೇ ನಿರ್ಧಾರಕ್ಕೆ ಮುನ್ನ ನಿಧಾನಿಸಿ.

ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ–1

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಏರಿಳಿತವಿಲ್ಲದೆ ಬದುಕುಂಟೆ? ಯಾವುದೇ ಮಹತ್ವದ ಕೆಲಸಕ್ಕೆ ಗುರುವಿನ ಮಾರ್ಗದರ್ಶನ ಬೇಕಾಗುತ್ತದೆ. ತುಳಿಯುವವರು ಎಷ್ಟು ಜನವಿದ್ದರೂ ಕಾಪಾಡಲು ಒಬ್ಬ ದೇವರಿದ್ದಾನೆ. ಸಾಧು–ಸಜ್ಜನರ ಸಮಾಗಮ ಉಂಟಾಗುತ್ತದೆ. ಸರ್ಕಾರಿ ನೌಕರರಿಗೆ ತನಿಖಾ ಸಂಸ್ಥೆಗಳ ಬಿಸಿ ತಟ್ಟುವುದು. ಶತ್ರುಗಳು ಪ್ರಬಲರೆನಿಸುವರು. ಶಿರೋಬಾಧೆ ಕಾಡಿಸುವುದು.

ಶ್ರೀ ವಿಷ್ಣು ದರ್ಶನ. ಶುಭ ಸಂಖ್ಯೆ–3

ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)

ವಾರದಾರಂಭಕ್ಕೆ ಕೆಲಸ ಕಾರ್ಯಗಳು ಕುಂಟುತ್ತಾ ಸಾಗಿದರೂ ದಿನ ಕಳೆದಂತೆ ನಿಮ್ಮ ಅದ್ಭುತ ಕ್ರಿಯಾಶಕ್ತಿ ಪರಿಣಾಮ ಚುರುಕು ಪಡೆದುಕೊಳ್ಳುವುದು. ಅಮೂಲ್ಯ ಸಂಪತ್ತುಗಳಿಗೆ ಗುರುಕೃಪೆಯಿದೆ. ಸಾಲ ಸೌಲಭ್ಯವೂ ದೊರೆಯಲಿದೆ. ಮನೆಯಲ್ಲಿ ದೇವತಾ ಕಾರ್ಯ, ಪೂಜೆ, ಪುನಸ್ಕಾರಗಳು ನಡೆಯಲಿದೆ. ಅಷ್ಟಮ ಶನಿದೇವನ ಕಾರಣ ಖಯಾಲಿ ಪ್ರವಾಸಗಳು ತೊಂದರೆ ತರಬಹುದು.

ಶ್ರೀ ರಾಜರಾಜೇಶ್ವರಿ ಸ್ತುತಿ. ಶುಭ ಸಂಖ್ಯೆ–9

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಸಪ್ತಾಹದ ಆರಂಭಕ್ಕೆ ಶುಭ ಚಂದ್ರನ ಪರಿಣಾಮ ಮನಸ್ಸಿಗೆ ಉಂಟಾಗಿದ್ದ ವ್ಯಾಕುಲತೆಗಳು ನಿವಾರಣೆ ಆಗುವುದು. ಹೊಸ ಮಿತ್ರರ ಪರಿಚಯದಿಂದ ಪುಳಕಿತರಾಗುವಿರಿ. ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆಯನ್ನು ಕಾಣುವಿರಿ. ವಾಕ್‌ಸ್ಥಾನದಲ್ಲಿ ಕೇತುವಿದ್ದು ಅಚಾತುರ್ಯದ ಮಾತುಗಳಿಂದ ಕಲಹ ಉಂಟಾಗುವುದು. ವಾರ ಮಧ್ಯೆ ಆರೋಗ್ಯದಲ್ಲಿ ವ್ಯತ್ಯಾಸ ಉಂಟಾಗಬಹುದು. ಶತ್ರು ಭಯವೂ ಕಾಡಿಸುತ್ತದೆ.

ಶ್ರೀ ಸೂರ್ಯನಾರಾಯಣ ಉಪಾಸನೆ. ಶುಭ ಸಂಖ್ಯೆ–8

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ನೆರೆಹೊರೆಯಲ್ಲಿ ಸೌಜನ್ಯದ ಮಾತಿನಿಂದ ಮನಸ್ಸು ಗೆಲ್ಲುವಿರಿ. ನೀವು ಹರಸಿಕೊಂಡಿದ್ದ ಬಯಕೆಗಳು ಈಡೇರಲು ದೈವಾನುಕೂಲವಿದೆ. ನಿಮ್ಮ ಕಾರ್ಯಕುಶಲತೆಯಿಂದ ಯತ್ನ ಕಾರ್ಯಗಳು ಯಶಸ್ವಿಯಾಗುವುದು. ಪುಸ್ತಕ ಪ್ರಕಾಶಕರಿಗೆ ಉತಮ ಆದಾಯ ದೊರೆಯುವುದು. ಕಚೇರಿಯಲ್ಲಿ ಸಹೋದ್ಯೋಗಿಗಳ ಸಹಕಾರ ದೊರೆಯುವುದು. ಯಾವುದೇ ಮುಖ್ಯ ಕೆಲಸವಿದ್ದರೂ ಅನುಭವಿಗಳ ಸಲಹೆ ಪಡೆಯಿರಿ.

ಶ್ರೀದಕ್ಷಿಣಾಮೂರ್ತಿ ಸ್ತುತಿ. ಶುಭ ಸಂಖ್ಯೆ–4

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ವಾರದ ಆದಿಗೆ ವಸ್ತ್ರಾಭರಣ, ನೂತನ ವಾಹನ ಖರೀದಿಸುವ ಯೋಗವಿದೆ. ಉದ್ಯೋಗ, ವ್ಯಾಪಾರ ನಿಮಿತ್ತವಾಗಿ ದೂರ ಪ್ರಯಾಣ ಮಾಡುವ ಸನ್ನಿವೇಶ ಬರುವುದು. ಕೆಲವು ಕೆಲಸಗಳನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ನಿಮ್ಮ ಸಹೋದರ–ಸಹೋದರಿಯರ ಸಹಾಯವನ್ನು ನಿರೀಕ್ಷಿಸಬಹುದು. ನ್ಯಾಯಾಲಯ ಪ್ರಕರಣಗಳು ನಿಮಗೆ ಅನುಕೂಲಕರವಾಗಿ ಇರುವುದಿಲ್ಲ. ಆರೋಗ್ಯದ ಬಗ್ಗೆ ಅಸಡ್ಡೆ ಸಲ್ಲದು.

ಶ್ರೀ ದೇವೀ ಖಡ್ಗಮಾಲ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–6

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು

ಗುರುಬಲದ ಪ್ರಯೋಜನ ಪಡೆಯಬೇಕೆಂದರೆ ನಿಮ್ಮ ಪ್ರಯತ್ನಶೀಲತೆಯೂ ಪ್ರಾಮಾಣಿಕವಾಗಿರಲಿ. ಯತ್ನ ಕಾರ್ಯಗಳಿಗೆ ಸ್ನೇಹಿತರ ಸಹಾಯವೂ ದೊರಕುವುದು. ಅಧಿಕಾರಿಗಳ ಅನುಗ್ರಹದಿಂದ ಕಾರ್ಯ ಸಾಧನೆ. ಕುಟುಂಬದಲ್ಲಿ ನೆಮ್ಮದಿ, ಸೌಖ್ಯಗಳನ್ನು ಅನುಭವಿಸುವಿರಿ. ವಿವಾಹ ಯೋಗ್ಯರಿಗೆ ಸೂಕ್ತ ಬಾಳ ಸಂಗಾತಿ ದೊರೆಯುವ ಸಂಭವವಿದೆ. ಮನೆ ದೇವರ ದರ್ಶನದಿಂದ ಇಚ್ಛಾಪೂರ್ತಿ.

ಶ್ರೀ ನರಸಿಂಹ ಪೂಜನ. ಶುಭ ಸಂಖ್ಯೆ–7

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದ ಪೂರ್ವಾರ್ಧದಲ್ಲಿ ಕೃಷಿಕರಿಗೆ ಉತ್ತಮ ಫಸಲು ಹಾಗೂ ಬೆಲೆ ದೊರೆಯುವುದು. ತಾಮ್ರ, ರಜತ ಪದಾರ್ಥ ಖರೀದಿಸುವಿರಿ. ವನಿತಾಮಣಿಯರು ಅಲಂಕಾರಿಕ ವಸ್ತುಗಳಿಗೆ ಹೆಚ್ಚಿನ ಹಣ ವ್ಯಯಿಸುವರು. ವಿದ್ಯಾರ್ಥಿಗಳು ಆಲಸಿಗರಾಗುವಿರಿ. ಕೈ ಹಿಡಿದು ತಪ್ಪು ಹಾದಿ ತುಳಿಸುವವರಿಂದ ಎಚ್ಚರವಾಗಿರಿ. ವಾರದ ಉತ್ತರಾರ್ಧಕ್ಕೆ ನಿಮ್ಮ ಕಾರ್ಯಗಳನ್ನು ಅಂತಿಮಗೊಳಿಸಲು ನಿಮ್ಮ ನೌಕರರು ಸಹಕರಿಸುವರು.

ಶ್ರೀ ದತ್ತ ಗುರುದರ್ಶನ. ಶುಭ ಸಂಖ್ಯೆ–2

ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)

ನಿಮ್ಮ ಯೋಜನೆಗಳು ಹಿಂದೆಂದಿಗಿಂತ ವೇಗವನ್ನು ಪಡೆದುಕೊಳ್ಳಲಿದೆ. ನಿಮ್ಮ ಕಾರ್ಯಗಳನ್ನು ಉತ್ಸಾಹದಿಂದ ನಿರ್ವಹಿಸುವಿರಿ. ನಿವೇಶನ, ಮನೆ ಕೊಳ್ಳುವ ವಿಷಯಕ್ಕೆ ಚಾಲನೆ ದೊರೆಯುವುದು. ಕ್ರೀಡಾಪಟುಗಳಿಗೆ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಅವಕಾಶಗಳು ಬರುವುದು. ಪಂಚಮ ಸ್ಥಾನದಲ್ಲಿ ಚತುರ್‌ಗ್ರಹ ಯುದ್ಧವಿರುವ ಕಾರಣ ಇಲ್ಲಸಲ್ಲದ ಅಪವಾದಗಳೂ ನೆರೆಹೊರೆಯಲ್ಲಿ ಮನಸ್ತಾಪಗಳೂ ಉಂಟಾಗುವುದು.

ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ–4

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಜೀವನ ಮಟ್ಟ ಉತ್ತಮಗೊಳ್ಳಲಿದೆ. ಕೈಗಾರಿಕಾ ಯಂತ್ರ ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರ ಹಾಗೂ ಆರ್ಡರ್‌ಗಳು ದೊರೆಯುತ್ತದೆ. ಸರ್ಕಾರಿ ನೌಕರರು ಜವಾಬ್ದಾರಿಗಳನ್ನು ಸರಿಯಾಗಿ ನಿಭಾಯಿಸಿದರೂ ನಿಂದನೆಗೆ ಗುರಿಯಾಗುವರು. ಭೂ ವ್ಯಾಜ್ಯಗಳಲ್ಲಿ ಪ್ರತಿಕೂಲ ಫಲಿತಾಂಶದಿಂದ ಬೇಸರ. ಜನ್ಮ ಶನಿಯ ಕಾರಣ ರಾಜಕಾರಣಿಗಳಿಗೆ ಶತ್ರುಗಳ ಉಪಟಳ ಹೆಚ್ಚಲಿದೆ. ಆರೋಗ್ಯದಲ್ಲಿ ಪ್ರತಿಕೂಲ ಪರಿಸ್ಥಿತಿ ಉಂಟಾದೀತು.

ಶ್ರೀ ಶನಿ ಮೂಲಮಂತ್ರ ಪಠಿಸಿ. ಶುಭ ಸಂಖ್ಯೆ–3

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಈ ಸಪ್ತಾಹದಲ್ಲಿ ಚಂದ್ರಗ್ರಹ ಒಂದನ್ನು ಹೊರತುಪಡಿಸಿ ಹೆಚ್ಚಿನ ಗ್ರಹಗಳು ನಿಮ್ಮ ಅನುಕೂಲಕ್ಕೆ ಇಲ್ಲದ ಕಾರಣ ತಾಳ್ಮೆಯಿಂದಲೂ, ಜಾಣ್ಮೆಯಿಂದಲೂ ಮುಂದಿನ ಹೆಜ್ಜೆ ಇಡಬೇಕಿದೆ. ಸುಖದ ಬದುಕು ತನ್ನಿಂದ ತಾನೇ ಸೃಷ್ಟಿ ಆಗುವುದಿಲ್ಲ. ಅದಕ್ಕೆ ದೈವ ಕೃಪೆಯೂ ಅಗತ್ಯವಿದೆ. ವಾರದ ಕಡೆಗೆ ಸಂಪಾದನೆಯ ಹೊಸ ಮಾರ್ಗ ತೆರೆಯಲಿದೆ. ಪ್ರಯಾಣ ಸಮಯದಲ್ಲಿ ಜಾಗರೂಕರಾಗಿರಿ.

ಶ್ರೀ ಗುರುರಾಯರ ಆರಾಧನೆ. ಶುಭ ಸಂಖ್ಯೆ–7

ಮೈಸೂರು ಮಿತ್ರ ಭಾನುವಾರ 9 ಜೂನ್ 2024

ಧಾರಾಕಾರ ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಿಗೆ

ಅಧಿಕಾರಿಗಳೊಂದಿಗೆ ಶಾಸಕ ಅನಿಲ್ ಭೇಟಿ, ಪರಿಶೀಲನೆ

ಪರಿಹಾರ, ಮೂಲಸೌಕರ್ಯ ಕಲ್ಪಿಸುವಂತೆ ಸೂಚನೆ

ಹೆಚ್.ಡಿ.ಕೋಟೆ, ಜೂ.8– ಪಟ್ಟಣದಲ್ಲಿ ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಿಗೆ ಶಾಸಕ ಅನಿಲ್ ಕುಮಾರ್ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಶನಿವಾರ ಪರಿಶೀಲನೆ ನಡೆಸಿದರು.

ಗುರುವಾರ ಸುರಿದ ಧಾರಾಕಾರ ಮಳೆಗೆ ಪಟ್ಟಣದ ಮುಸ್ಲಿಂ ಬ್ಲಾಕ್, ಸ್ಟೇಡಿಯಂ ಬಡಾವಣೆ, ವಿಶ್ವಾಥಯ್ಯ ಕಾಲೋನಿಯ ಮನೆಗಳಿಗೆ ಮಳೆ ಸೇರಿದಂತೆ ಚರಂಡಿ ನೀರು ನುಗ್ಗಿ ಸಾಕಷ್ಟು ಹಾನಿ ಸಂಭವಿಸಿತ್ತು. ಅಲ್ಲದೇ ಹಲವು ಮನೆಗಳು ಕುಸಿದಿದ್ದವು. ಈ ಹಿನ್ನೆಲೆಯಲ್ಲಿ ಶಾಸಕ ಅನಿಲ್ ಕುಮಾರ್ ಅವರು ಅಧಿಕಾರಿಗಳೊಂದಿಗೆ ಹಾನಿಗೊಳಗಾದ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಿ ಕೂಡಲೆ ಮಳೆ ಸಂತ್ರಸ್ತರಿಗೆ ಸರ್ಕಾರದಿಂದ ಪರಿಹಾರ ಕೊಡಿಸುವ ಜೊತೆಗೆ ಮಳೆ ನೀರು ನುಗ್ಗಿರುವ ಮನೆಗಳಿಗೆ ಮೂಲಸೌಕರ್ಯ ಕಲ್ಪಿಸುವಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ನಂತರ ಮಾತನಾಡಿದ ಶಾಸಕ ಅನಿಲ್ ಕುಮಾರ್, ಈ ವರ್ಷ ಇದೇ ಮೊದಲ ಬಾರಿಗೆ ಧಾರಾಕಾರ ಮಳೆಯಾಗಿ ಪಟ್ಟಣದಲ್ಲಿ ಸಾಕಷ್ಟು ಹಾನಿ ಸಂಭವಿಸಿರುವ ಹಿನ್ನಲೆಯಲ್ಲಿ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ್ದೇನೆ. ಮಳೆಗೆ ಸಾಕಷ್ಟು ಮನೆಗಳು ಕುಸಿದಿದ್ದು, ಪರಿಹಾರ ನೀಡಲು ಸೂಚಿಸಲಾಗಿದೆ. ಎಲ್ಲೆಲ್ಲಿ ರಸ್ತೆ, ಚರಂಡಿ ನಿರ್ಮಾಣ ಮಾಡಬೇಕು ಅಲ್ಲಿ ನಿರ್ಮಿಸುವಂತೆಯೂ ತಿಳಿಸಿದ್ದೇನೆ ಎಂದರು.

ಸ್ಟೇಡಿಯಂ ಬಡಾವಣೆಯಲ್ಲಿ ಪ್ಲಾನಿಂಗ್ ಪ್ರಕಾರ ಮನೆಗಳನ್ನು ನಿರ್ಮಿಸಿಲ್ಲ. ಆದ್ದರಿಂದ ಆ ಬಡಾವಣೆಯಲ್ಲಿ ರಸ್ತೆ, ಚರಂಡಿ ನಿರ್ಮಿಸಲು ಸ್ವಲ್ಪ ಸಮಸ್ಯೆಯಾಗುತ್ತಿದೆ ಸದ್ಯದಲ್ಲೇ ಅಧಿಕಾರಿಗಳು ಸಂಪೂರ್ಣ ಸ್ಟೇಡಿಯಂ ಬಡಾವಣೆ ವೀಕ್ಷಿಸಿ ಅವಶ್ಯಕತೆ ಇರುವ ಕಡೆ ರಸ್ತೆ, ಚರಂಡಿ ನಿರ್ಮಿಸಲಿದ್ದಾರೆ ಎಂದರು.

ಪುರಸಭಾ ಮುಖ್ಯಾಧಿಕಾರಿ ಸುರೇಶ್ ಮಾತನಾಡಿ, ಸ್ಟೇಡಿಯಂ ಬಡಾವಣೆ, ಮುಸ್ಲಿಂ ಬ್ಲಾಕ್, ವಿಶ್ವಾಥಯ್ಯ ಕಾಲೋನಿ, ಸರ್ವಿಸ್ ಸ್ಟೇಷನ್ ರಸ್ತೆ, ಗದ್ದಿಗೆ ರಸ್ತೆ ಸೇರಿದಂತೆ ವಿವಿಧೆಡೆ ಭಾರಿ ಮಳೆಯಿಂದ ಮನೆಗಳಿಗೆ ನೀರು ನುಗ್ಗಿದೆ. ಮುಂದಿನ ದಿನಗಳಲ್ಲಿ ಅವಶ್ಯಕತೆ ಇರುವ ಕಡೆ ಚರಂಡಿ, ರಸ್ತೆ ನಿರ್ಮಾಣ ಮಾಡಿ ಮಳೆ ನೀರಿನಿಂದ ಯಾವುದೇ ಹಾನಿಗಳಾಗದ ರೀತಿ ಮುಂಜಾಗ್ರತ ಕ್ರಮ ವಹಿಸುತ್ತೇವೆ ಎಂದರು.

ಈ ವೇಳೆ ತಹಸೀಲ್ದಾರ್ ಶ್ರೀನಿವಾಸ್, ಆರ್‌ಐ ವಿಶ್ವನಾಥ್, ವಿಎ ರಾಜೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷಾ, ಪುರಸಭಾ ಸದಸ್ಯರಾದ ಹೆಚ್.ಸಿ. ನರಸಿಂಹಮೂರ್ತಿ, ರಾಜು, ಪ್ರೇಮ್ ಸಾಗರ್, ಆಸೀಫ್, ಮೈಮುಲ್ ನಿರ್ದೇಶಕ ಈರೇಗೌಡ, ಯೂತ್ ಕಾಂಗ್ರೆಸ್ ಅಧ್ಯಕ್ಷ ಹೊಂಡಾ ನಯಾಜ್, ಮುಖಂಡರಾದ ರವಿ, ಮೀನ್ ನಜೀರ್, ಶಷಿ ಪ್ರಕಾಶ, ಶಿವಯ್ಯ, ಅನ್ಸ್, ಅಶೋಕ್, ಐಟಿಸಿ ನಯಾಜ್, ನವಾಬ್ ಇತರರಿದ್ದರು.



ಧಾರಾಕಾರ ಮಳೆಯಿಂದ ಹಾನಿಗೊಳಗಾದ ಪ್ರದೇಶವನ್ನು ಶಾಸಕ ಅನಿಲ್ ಪರಿಶೀಲನೆ ನಡೆಸಿದರು.

> ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣದ ಅಭಿವೃದ್ಧಿ ಅಡಿ ಈಗಾಗಲೇ ಎಂಟೂವರೆ ಕೋಟಿ ಅನುದಾನದಲ್ಲಿ ಪಟ್ಟಣದಲ್ಲಿ ಚರಂಡಿ, ರಸ್ತೆ, ಹೈಮಾಸ್ಟ್ ಲೈಟ್, ಡಾಂಬರ್, ಕಾಂಕ್ರೀಟ್ ರಸ್ತೆ, ಪೌರಕಾರ್ಮಿಕರ ಭವನ ಸೇರಿದಂತೆ ಹಲವು ಕಾಮಗಾರಿ ಪೂರ್ಣಗೊಂಡಿದ್ದು, ಇನ್ನೂ ಹಲವು ಕಾಮಗಾರಿ ಪ್ರಗತಿಯಲ್ಲಿವೆ. ಪಟ್ಟಣದ ಮತ್ತಷ್ಟು ಅಭಿವೃದ್ಧಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಹೆಚ್ಚಿನ ಅನುದಾನ ನೀಡುವಂತೆ ಮನವಿ ಮಾಡಿದ್ದೇನೆ.
> – ಅನಿಲ್ ಚಿಕ್ಕಮಾದು, ಶಾಸಕ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಭಜೆ ವಾಯುವೇಗಂ (ತೆ)	2 ಪ್ರದರ್ಶನಗಳು
ಘಜಿನಿ (ತ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವೆಪನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಡೆವಿಲ್ ಹಂಟರ್ (ತ)	4 ಪ್ರದರ್ಶನಗಳು
ಗಾಯಿತ್ರಿ	
ಜಡ್ಜ್‌ಮೆಂಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಇಂಡಿಯನ್ 1 (ತ)	4 ಪ್ರದರ್ಶನಗಳು
ಸಂಗಂ	
ಗರುಡನ್ (ತ)	4 ಪ್ರದರ್ಶನಗಳು
ಲಿಡೋ	
ರಾಬರ್ಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಘಜಿನಿ (ತ)	4 ಪ್ರದರ್ಶನಗಳು
ಪ್ರಭಾ	
ಎ (ಕ)	2 ಪ್ರದರ್ಶನಗಳು
ಡೆವಿಲ್ ಹಂಟರ್ (ತ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಬ್ಯಾಡ್ ಬಾಯ್ಸ್ ರೈಡ್ or ಡೈ (ಇ): ಬೆ.11.15ಕ್ಕೆ, ಮ.1.40ಕ್ಕೆ, ರಾ.7.25ಕ್ಕೆ, ರಾ.9.55ಕ್ಕೆ, ಘಜಿನಿ (ತ): ಸಂ.4ಕ್ಕೆ
ಸ್ಕ್ರೀನ್ 2	ಯಂಗ್‌ಮ್ಯಾನ್ (ಕ): ಬೆ.10.40ಕ್ಕೆ, ವೆಪನ್ (ತ): ಮ.1.50ಕ್ಕೆ, ಗರುಡನ್ (ತ): ಸಂ.4.20ಕ್ಕೆ, ಮಿಸ್ಟರ್ ಅಂಡ್ ಮಿಸಸ್ ಮಹಿ (ಹಿಂ): ರಾ.7.05ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ದಿ ಜಡ್ಜ್‌ಮೆಂಟ್ (ಕ): ಬೆ.10.40ಕ್ಕೆ, ಕಂಡೋರ್ ಮನೆ ಕಥೆ (ಕ): ಮ.1.45ಕ್ಕೆ, ಸಹರ (ಕ): ಸಂ.4.10ಕ್ಕೆ, ಸತ್ಯಭಾಮ (ತೆ): ರಾ.7.10ಕ್ಕೆ, ಗೋಲಂ (ಮ): ರಾ.9.55ಕ್ಕೆ.
ಸ್ಕ್ರೀನ್ 4	ಮುಂಜ್ಯಾ (ಹಿಂ): ಬೆ.10.30ಕ್ಕೆ, ರಾ.10.05ಕ್ಕೆ, ಇಂಡಿಯನ್ (ತ): ಸಂ.4.05ಕ್ಕೆ, ರಾ.7.05ಕ್ಕೆ, ಮನಮೆ (ತೆ): ಸಂ.4.05ಕ್ಕೆ, ರಾ.9.50ಕ್ಕೆ

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಮುಂಜ್ಯಾ (ಇಂ): ಬೆ.11ಕ್ಕೆ, ಮ.1.45ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಬ್ಯಾಡ್ ಬಾಯ್ಸ್ ರೈಡ್ or ಡೈ (ಇ): ಬೆ.11.50ಕ್ಕೆ, ಮ.2.30ಕ್ಕೆ, ಸಂ.5.10ಕ್ಕೆ, ರಾ.7.50ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ಮನಮೆ (ತೆ): ಮ.12.45ಕ್ಕೆ, ರಾ.7ಕ್ಕೆ, ಮಿಸ್ಟರ್ ಅಂಡ್ ಮಿಸಸ್ ಮಹಿ (ಹಿಂ): ಸಂ.4ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 4	ರಾಬರ್ಟ್ (ಕ): ಮ.3.10ಕ್ಕೆ, ಸಹರಾ (ಕ): ಸಂ.6.35ಕ್ಕೆ, ಗರುಡನ್ (ತ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಅರನ್‌ಮನೈ 4 (ತ): ಮ.1.30ಕ್ಕೆ, ರಾ.7.30ಕ್ಕೆ, ಸಹರ (ಕ): ಸಂ.4.30ಕ್ಕೆ.
ಸ್ಕ್ರೀನ್ 2	ಅನರ್ಥ (ಕ): ಸಂ.4.15ಕ್ಕೆ.
ಸ್ಕ್ರೀನ್ 3	ಕಂಡೋರ್ ಮನೆ ಕಥೆ (ಕ): ಮ.1.30ಕ್ಕೆ.
ಸ್ಕ್ರೀನ್ 4	

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1.15ಕ್ಕೆ, ಮ.3.40ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.05ಕ್ಕೆ, ಮ.12ಕ್ಕೆ, ಮ.3.10ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಸ್ಟಾರ್ (ತ): ಮ.1ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, 4N6 (ಕ): ಮ.1.05ಕ್ಕೆ, ಅಂಜನೀಪುತ್ರ (ಕ): ಸಂ.4.15ಕ್ಕೆ, ಕೃಷ್ಣಮ್ಮ (ತೆ): ಸಂ.4.20ಕ್ಕೆ, ರಾ.10.15ಕ್ಕೆ, ಪವರ್ (ಕ): ಸಂ.6.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಹುಣಸೂರಲ್ಲಿ ಪುಸ್ತಕ ಬಿಡುಗಡೆ



ಹುಣಸೂರಿನ ರೋಟರಿ ಸಂಸ್ಥೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಲೇಖಕ ಕುಮಾರ್ ಹೊನ್ನೇನಹಳ್ಳಿ ಅವರು ಬರೆದಿರುವ 'ಮೊಗ್ಗುಗಳ ತೋಟದಲ್ಲಿ ನಡೆದಷ್ಟು ಬಯಲು' ಪುಸ್ತಕವನ್ನು ಧಾರವಾಡ ಕನ್ನಡ ಸಾಹಿತ್ಯ ಅಕಾಡೆಮಿ ಪುರಸ್ಕೃತ ವಿಜಯೇಂದ್ರ ಪಾಟೀಲ್ ಬಿಡುಗಡೆಗೊಳಿಸಿದರು. ಈ ವೇಳೆ ರೇವಣ್ಣ, ವಿನೋದ್ ಚಂದ್ರ ಮಂಜುನಾಥ್, ಡಾ.ತ್ರಿವೇಣಿ, ಮಂಜುನಾಥ್, ರೋಟರಿ ಆನಂದ್, ಸಂತೋಷ್ ಕುಮಾರ್, ಮಹೇಶಾರಾಧ್ಯ ಇತರರಿದ್ದರು.

ವಿಶೇಷ ಶಾಲಾ ದಾಖಲಾತಿ ಆಂದೋಲನ



ಕಂಪಲಾಪುರ ಹಾಗೂ ಬೋರೆಹೊಸಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸಹಭಾಗಿತ್ವದಲ್ಲಿ ವಿಶೇಷ ಶಾಲಾ ದಾಖಲಾತಿ ಆಂದೋಲನ ಹಮ್ಮಿಕೊಳ್ಳಲಾಗಿತ್ತು. ಸಿಆರ್‌ಪಿ ಸುದರ್ಶನ್, ಮುಖ್ಯ ಶಿಕ್ಷಕ ಕೃಷ್ಣಕುಮಾರ್, ದಯಾನಂದ್, ಸುರೇಂದ್ರ, ಸುಷ್ಮಾ ಮತ್ತಿತರರಿದ್ದರು.

ಬಸವಣ್ಣನವರ ವಚನಗಳು ಇಂದಿಗೂ ಮಾದರಿ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶ ಡಿ.ಕಮಲಾಕ್ಷ

ನಂಜನಗೂಡು, ಜೂ.8– ನಗರದ ವಕೀಲರ ಸಂಘದ ಕಚೇರಿಯಲ್ಲಿ ಬಸವ ಜಯಂತಿಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶ ಡಿ.ಕಮಲಾಕ್ಷ, ಜಗಜ್ಯೋತಿ ಬಸವಣ್ಣನವರು 12ನೇ ಶತಮಾನದಲ್ಲಿ ಮಾಡಿದ ಕ್ರಾಂತಿ ಈಗಲೂ ನಮ್ಮ ಜೀವನಕ್ಕೆ ಪ್ರಸ್ತುತವಾಗಿವೆ. ಕಾಯಕವೇ ಕೈಲಾಸ ಎಂಬ ವಚನದಿಂದ ಕೈಲಾಸವನ್ನು ನಮ್ಮ ಕೆಲಸದಿಂದಲೇ ಕಾಣಬಹುದು ಎಂದ ಅವರು ವಚನಗಳು ಎಲ್ಲಾ ಕಾಲಕ್ಕೂ ಎಲ್ಲಾ ಸಂದರ್ಭದಲ್ಲೂ ಜೀವನದಲ್ಲಿ ನಡೆಯುವ ಪ್ರತಿಯೊಂದು ಘಟನೆಗಳಿಗೂ ಮಾದರಿಯಾಗಿವೆ. ಸ್ತ್ರೀಯರಿಗೆ ಸಮಾನತೆ ನೀಡಿ, ಸಮಾಜದ ಮುಖ್ಯವಾಹಿನಿಗೆ ಬರುವಂತೆ ಮಾಡಿದರು. ಬಸವತತ್ವ ಪ್ರತಿಯೊಬ್ಬರೂ ಒಪ್ಪುವಂತಹ ತತ್ವವಾಗಿದೆ. ಹೀಗಾಗಿ ಪ್ರತಿಯೊಬ್ಬರೂ ಬಸವಣ್ಣನವರ ತತ್ವಾದರ್ಶವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಮನವಿ ಮಾಡಿದರು.

ಪ್ರಧಾನ ಸಿವಿಲ್ ನ್ಯಾಯಾಧೀಶ ರಘುರಾಂ ಮಾತನಾಡಿ, 12ನೇ ಶತಮಾನದಲ್ಲಿ ಜಗಜ್ಯೋತಿ ಬಸವಣ್ಣನವರು ಹೇಳಿದ ಮಾತುಗಳು ಈಗ ಕಾನೂನಾಗಿ ಮಾರ್ಪಟ್ಟಿವೆ. ಅಂದು ಕಡಿಮೆ ಪ್ರಮಾಣದಲ್ಲಿ ಅಪರಾಧಗಳಿದ್ದರೆ ಇಂದು ಹೆಚ್ಚಿನ ಪ್ರಮಾಣದಲ್ಲಿ ಅಪರಾಧಗಳು ನಡೆಯುತ್ತಿವೆ. ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಅಂದು ಬಸವಣ್ಣನವರು ವಚನ ರೂಪದಲ್ಲಿ ಹೇಳಿದ್ದು ಅದನ್ನೇ ಇಂದು ಕಾನೂನಾಗಿ ರಚನೆ ಮಾಡಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸಿವಿಲ್ ನ್ಯಾಯಾಧೀಶ ಕಿಶೋರ್ ಕುಮಾರ್, ಪ್ರೊಸದಾಶಿವ, ವಕೀಲರ ಸಂಘದ ಅಧ್ಯಕ್ಷ ಸುರೇಶ್, ವಕೀಲರಾದ ನಂಜುಂಡಸ್ವಾಮಿ, ಹೆಜ್ಜಿಗೆ ನಾಗೇಂದ್ರಪ್ಪ, ರೇಣುಕಾ ಪ್ರಸಾದ್ ಉಪಸ್ಥಿತರಿದ್ದರು.



ವಕೀಲರ ಸಂಘದ ಕಚೇರಿಯಲ್ಲಿ ಬಸವ ಜಯಂತಿ ಆಚರಿಸಲಾಯಿತು.

ಪ್ರಕೃತಿ ಇದ್ದರೆ ಮಾತ್ರ ಮನುಷ್ಯನ ಉಳಿವು ಸಾಧ್ಯ

ನೂತನ ಸಂಸದ ಸುನೀಲ್ ಬೋಸ್



ತಿ.ನರಸೀಪುರ ಜೂ.8– ಪ್ರಕೃತಿ ಇದ್ದರೆ ಮಾತ್ರ ಮನುಷ್ಯನ ಉಳಿವು ಸಾಧ್ಯ ಎಂದು ಚಾಮರಾಜನಗರ ನೂತನ ಸಂಸದ ಸುನೀಲ್ ಬೋಸ್ ತಿಳಿಸಿದರು. ಸಂಸದರಾದ ಬಳಿಕ ದೆಹಲಿಗೆ ತೆರಳುವ ವೇಳೆ ಪುರಸಭೆ ಮಾಜಿ ಉಪಾಧ್ಯಕ್ಷ ರೇಣುಕಾ ರಾಮು ಬೆಂಬಲಿಗರಿಂದ ಅಭಿನಂದನೆ ಸ್ವೀಕರಿಸಿ ಪರಿಸರ ದಿನಾಚರಣೆ ಅಂಗವಾಗಿ ಗಿಡ ಪಡೆದು ನಂತರ ಮಾತನಾಡಿದ ಅವರು, ಕಲುಷಿತಗೊಳ್ಳುತ್ತಿರುವ ಪ್ರಕೃತಿಯನ್ನು ಕಾಪಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಎಲ್ಲಡೆ ಪರಿಸರ ಹಗದಗೆಡುತ್ತಿದೆ. ಶುದ್ಧ ಕುಡಿಯುವ ನೀರು, ಗಾಳಿ ಇಲ್ಲವಾಗಿದೆ. ಇದರಿಂದ ಮಾನವನ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರಿ ಅನಾರೋಗ್ಯಕ್ಕೆ ಕಾರಣವಾಗುತ್ತದೆ. ನಿಸರ್ಗದಿಂದ ಎಲ್ಲವನ್ನು ಪಡೆಯುವ ನಾವು ಅದಕ್ಕಾಗಿ ಮರಳಿ ಕೊಡುಗೆ ನೀಡಲು ಗಿಡ, ಮರಗಳನ್ನು ಬೆಳೆಸಿ ಉತ್ತಮ ಪರಿಸರ ಕಾಪಾಡಲು ಮುಂದಾಗಬೇಕೆಂದು ಕರೆ ನೀಡಿದರು.

ಮಾನವ, ಇತರೆ ಪ್ರಾಣಿ, ಪಕ್ಷಿಗಳು ಸೇರಿದಂತೆ ಪ್ರತಿಯೊಂದು ಜೀವ ಸಂಕುಲ ಆಹಾರ, ಗಾಳಿ, ನೀರು ಇತರೆ ಅಗತ್ಯತೆಗಳಿಗಾಗಿ ಪರಿಸರವನ್ನು ಅವಲಂಬಿಸಿವೆ ಎಂದರೆ ತಪ್ಪಾಗಲಾರದು. ಆದರೆ ಇತ್ತೀಚಿನ ದಿನಗಳಲ್ಲಿ ಮಾನವ ಆಧುನಿಕ ಬದುಕಿನ ಗೀಳಿಗೆ ಬಿದ್ದು ಪರಿಸರ ನಾಶ ಮಾಡುತ್ತಿದ್ದಾನೆ. ಮಾನವನ ದುರಾಸೆಯಿಂದ ಗಾಳಿ, ನೀರು, ಮಣ್ಣು ಮುಂತಾದ ಪರಿಸರದ ಪ್ರತಿಯೊಂದು ಅಂಶವೂ ಕಲುಷಿತಗೊಂಡಿದೆ. ಮನುಷ್ಯ ತನ್ನ ಅಭಿವೃದ್ಧಿಗಾಗಿ ತನಗೆ ಅರಿವಿಲ್ಲದಂತೆ ಪರಿಸರ ಹಾಳು ಮಾಡುತ್ತಿದ್ದಾನೆ. ಹೀಗಾಗಿ ಪ್ರತಿಯೊಬ್ಬರಲ್ಲೂ ಪರಿಸರದ ಬಗ್ಗೆ ಕಾಳಜಿ ಮೂಡಿಸುವ ಸಲುವಾಗಿ ಪ್ರತಿವರ್ಷ ಜೂ.5 ರಂದು ವಿಶ್ವ ಪರಿಸರ ದಿನ ಆಚರಿಸಲಾಗುತ್ತದೆ. ಪ್ರತಿ ವರ್ಷ ಬೇರೆ ಬೇರೆ ಧ್ಯೇಯವಾಕ್ಯದೊಂದಿಗೆ ಪರಿಸರ ದಿನ ಆಚರಿಸಲಾಗುತ್ತದೆ. ಇದರ ಮುಖ್ಯ ಉದ್ದೇಶ ಪರಿಸರದ ಬಗ್ಗೆ ಪ್ರತಿಯೊಬ್ಬರಲ್ಲೂ ಜಾಗೃತಿ ಮೂಡಿಸುವುದು ಮತ್ತು ಪರಿಸರ ಕಾಪಾಡುವುದು ಎಂದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಚೈತ್ರ, ಮೇಘನಾ ರಾಜ್, ಮೋಹನ್ ಮತ್ತಿತರರಿದ್ದರು.

ತಾಪಮಾನ ಏರಿಕೆಗೆ ಜನಸಂಖ್ಯಾ ಸ್ಫೋಟ ಕಾರಣ

ನಿವೃತ್ತ ಉಪ ಅರಣ್ಯ ಸಂರಕ್ಷಣಾಧಿಕಾರಿ ಹುಚ್ಚಯ್ಯ



ವಿಶ್ವ ಪರಿಸರ ದಿನಾಚರಣೆಯನ್ನು ನಿವೃತ್ತ ಉಪ ಅರಣ್ಯಸಂರಕ್ಷಣಾಧಿಕಾರಿ ಹುಚ್ಚಯ್ಯ ಉದ್ಘಾಟಿಸಿದರು.

ಬನ್ನೂರು, ಜೂ.8– ಪರಿಸರದಲ್ಲಿ ತಾಪಮಾನ ಏರಿಕೆಗೆ ಜಗತ್ತಿನ ಜನಸಂಖ್ಯಾ ಸ್ಫೋಟವೇ ಪ್ರಮುಖ ಕಾರಣ ಎಂದು ನಿವೃತ್ತ ಉಪ ಅರಣ್ಯ ಸಂರಕ್ಷಣಾಧಿಕಾರಿ ಹುಚ್ಚಯ್ಯ ತಿಳಿಸಿದರು.

ಪಟ್ಟಣದ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ಜಿಪಂ ಮತ್ತು ಸಾಮಾಜಿಕ ಅರಣ್ಯ ವಲಯ ಹಾಗೂ ಕರ್ನಾಟಕ ರಾಜ್ಯ ರೈತ ಸಂಘ ಸಹಯೋಗದಲ್ಲಿ ನಡೆದ ವಿಶ್ವ ಪರಿಸರ ದಿನಾಚರಣೆ ಮತ್ತು ಅಂತರರಾಷ್ಟ್ರೀಯ ಜೀವ ವೈವಿಧ್ಯ ದಿನಾಚರಣೆಯನ್ನು ಸಸಿಗಳಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಪರಿಸರ ನಾಶದಿಂದ ತಾಪಮಾನ ಏರಿಕೆಯಾಗಿದೆ. ಇದಕ್ಕೆಲ್ಲಾ ಅಭಿವೃದ್ಧಿ ಹೆಸರಿನಲ್ಲಿ ಹೆಚ್ಚುತ್ತಿರುವ ಕೈಗಾರೀಕರಣ, ಜನಸ್ಫೋಟ ಪ್ರಮುಖ ಕಾರಣ ಎಂದರು.

ಇಂದು ಪ್ರತಿಯೊಬ್ಬರೂ ಶೀತಲೀಕರಣ ಯಂತ್ರ ಬಳಸುತ್ತಿದ್ದು, ಅದರಿಂದ ಬಿಡುಗಡೆಯಾಗುವ ಕಾರ್ಬನ್ ಮೋನಾಕ್ಸೈಡ್ ಪರಿಸರದ ಓಜೋನ್ ಪದರವನ್ನು ಹಾಳು ಮಾಡುತ್ತಿದೆ ಎಂದ ಅವರು, ವಿದ್ಯಾರ್ಥಿಗಳು ಪರಿಸರ ರಕ್ಷಣೆಗೆ ಮುಂದಾಗಬೇಕು ಎಂದರು.

ರೈತ ಸಂಘದ ಅಧ್ಯಕ್ಷ ಕರೋಹಟ್ಟಿ ಕುಮಾರಸ್ವಾಮಿ, ರೈತ ಸಂಘದ ಹೋಬಳಿ ಅಧ್ಯಕ್ಷ ಹುಚ್ಚೇಗೌಡ ಮಾತನಾಡಿದರು. ಈ ವೇಳೆ ಆರಕ್ಷಕ ನಿರೀಕ್ಷಕ ಮನೀತ್, ಕೃಷಿ ಅಧಿಕಾರಿ ವಿಶಾಲ್, ಪ್ರಾಂಶುಪಾಲ ರವೀಶ್, ಉಪವಲಯ ಅರಣ್ಯಾಧಿಕಾರಿ ಆಂತೋನಿ ಸ್ವಾಮಿ, ವಲಯ ಅರಣ್ಯಾಧಿಕಾರಿ ಎಸ್.ಡಿ.ರಾಜೇಶ್, ಆರ್.ವಿನಯ ಕುಮಾರ್, ಎಂ.ಮಹದೇವಸ್ವಾಮಿ, ಶಂಕರ್, ರಾಜು, ದಿನೇಶ್, ನಾರಾಯಣಿ, ಚಂದ್ರು, ಶಿವಣ್ಣ, ಕೇಶವಮೂರ್ತಿ, ಮಹದೇವು, ರಮೇಶ್, ಕಂಪೇಗೌಡ, ಮಹೇಶ್, ರವಿ, ಹೂವಯ್ಯ ಕುಮಾರ್, ಶಿವಮಲ್ಲಪ್ಪ ಶಿವರುದ್ರಪ್ಪ ರಮೇಶ್ ಸೇರಿದಂತೆ ಹಲವರಿದ್ದರು.


ವಿದ್ಯುತ್ ತಂತಿ ತುಂಡಾಗಿ ಬಿದ್ದು ಹಸು ಸಾವು

ಹಿರೀಕ್ಯಾತನಹಳ್ಳಿ, ಜೂ.8– ವಿದ್ಯುತ್ ತಂತಿ ತುಂಡಾಗಿ ಬಿದ್ದ ಪರಿಣಾಮ ಹಸು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಇಲ್ಲಿಗೆ ಸಮೀಪದ ಮಂಚಬಾಯನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಸಂತೋಷ್ ಅವರು ತಮ್ಮ ಜಮೀನಿನಲ್ಲಿ ಹಸುವನ್ನು ಮೇಯಲು ಕಟ್ಟಿ ಹಾಕಿದ್ದ ವೇಳೆ ವಿದ್ಯುತ್ ತಂತಿ ತುಂಡಾಗಿ ಬಿದ್ದು ಹಸು ಸಾವನ್ನಪ್ಪಿದೆ. ಗಾವಡಗೆರೆ ಮುಖ್ಯ ಪಶು ವೈದ್ಯಾಧಿಕಾರಿ ರಾಜಶೇಖರಪ್ಪ ಮೃತ ಪಶುವನ್ನು ಶವ ಪರೀಕ್ಷೆ ನಡೆಸಿದರು.



ಎಂಎಲ್‌ಸಿ ಡಾ.ಯತೀಂದ್ರಗೆ ಅಭಿನಂದನೆ...



ವಿಧಾನಪರಿಷತ್ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾದ ಡಾ.ಯತೀಂದ್ರ ಅವರನ್ನು ತಿ.ನರಸೀಪುರ ತಾಲೂಕು ಕುರುಬರ ಸಂಘದ ನಿರ್ದೇಶಕರಾದ ಹೆಳವರಹುಂಡಿ ಅರುಣ್‌ಗೌಡ, ಲೋಹಿತ್, ಬಣ್ಣ ಮಹೇಶ್, ಯುವ ಮುಖಂಡರಾದ ಮೂಗೂರು ಹರೀಶ್, ಕಾರ್ಮಿಕ ವಿಭಾಗದ ಜಿಲ್ಲಾ ಕಾರ್ಯದರ್ಶಿ ಗರ್ಗೇಶ್ವರಿ ಗೋಪಾಲರಾಜ್, ಕನ್ನಾಯಕನಹಳ್ಳಿ ಕುಮಾರ್ ಸೇರಿದಂತೆ ಇತರರು ಅಭಿನಂದಿಸಿದರು.

ಮರ ಗಿಡ ಬೆಳೆಸಿ ಪರಿಸರ ರಕ್ಷಣೆಗೆ ಮುಂದಾಗಿ

ವಿದ್ಯಾವರ್ಧಕ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ರಾಜೇಂದ್ರ ಪ್ರಸಾದ್



ಹಿರೀಕ್ಯಾತನಹಳ್ಳಿ, ಜೂ.8– ಬೇಸಿಗೆಯಲ್ಲಿ ತಾಪಮಾನ ಹೆಚ್ಚಿಸಿ ಪರಿಸರ ಮಾನವನಿಗೆ ಎಚ್ಚರಿಕೆ ನೀಡಿದೆ ಎಂದು ಮೈಸೂರಿನ ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ರಾಜೇಂದ್ರ ಪ್ರಸಾದ್ ತಿಳಿಸಿದರು.

ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಕಾಲೇಜಿನ ಎನ್‌ಎಸ್‌ಎಸ್ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಗಿಡ ನೆಡುವ ಕಾರ್ಯಕ್ರಮದಲ್ಲಿ ಗಿಡನೆಟ್ಟು ಮಾತನಾಡಿದ ಅವರು, ಇದುವರೆಗೆ ಯಾವ ವರ್ಷವೂ ಕಾಣದಂತಹ ತಾಪಮಾನವನ್ನು ಈ ಬಾರಿ ನೋಡಿದ್ದೇವೆ. ಇದಕ್ಕೆ ಪರಿಸರ ನಾಶವೇ ಕಾರಣ. ಹೀಗಾಗಿ ಬುದ್ಧಿಜೀವಿಗಳಾದ ನಾವು ಹೆಚ್ಚಾಗಿ ಮರ ಗಿಡಗಳನ್ನು ಬೆಳೆಸುವ ಮೂಲಕ ಪರಿಸರ ಸಂರಕ್ಷಣೆ ಮುಂದಾಗಬೇಕು. ಅಲ್ಲದೇ ಗಿಡ ಮರಗಳನ್ನು ಹೆಚ್ಚಾಗಿ ಬೆಳೆಸುವುದರಿಂದ ಹೆಚ್ಚುತ್ತಿರುವ ತಾಪಮಾನವನ್ನು ನಿಯಂತ್ರಿಸಬಹುದು ಎಂದರು.

ಶಾಲಾ ಮುಖ್ಯ ಶಿಕ್ಷಕಿ ಸರಳ ಮಾತನಾಡಿ, ಪ್ರತಿಯೊಬ್ಬರೂ ಗಿಡ ನೆಟ್ಟು ಪ್ಲಾಸ್ಟಿಕ್ ಮುಕ್ತ ವಾತಾವರಣ ಮಾಡುವ ಶಪಥ ಮಾಡಬೇಕಿದೆ. ವಿದ್ಯಾರ್ಥಿ ದಿಸೆಯಲ್ಲಿ ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವ ಪ್ರವೃತ್ತಿಯನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕಾಗಿದೆ ಎಂದರು.

ಇದೇ ವೇಳೆ ಪ್ರೇಕ್ಷ ಎಸ್.ಗೌಡ ವಿದ್ಯಾರ್ಥಿಗಳಿಗೆ ಪ್ಲಾಸ್ಟಿಕ್ ತ್ಯಜಿಸುವ ಪ್ರತಿಜ್ಞಾ ವಿಧಿ ಬೋಧಿಸಿದರು. ನಂತರ ಶಾಲಾ ಆವರಣದಲ್ಲಿ 500ಕ್ಕೂ ಹೆಚ್ಚು ಗಿಡಗಳನ್ನು ನೆಡಲಾಯಿತು. ಶಾಲಾವರಣ, ಗ್ರಾಮದ ಪ್ರಮುಖ ಬೀದಿಗಳಲ್ಲಿ ಪ್ಲಾಸ್ಟಿಕ್ ಸಂಗ್ರಹಣೆ ಮಾಡಿ ನಂತರ ಮನೆ ಮನೆಗೆ ತೆರಳಿದ ವಿದ್ಯಾರ್ಥಿಗಳು ಪ್ಲಾಸ್ಟಿಕ್ ಕವರ್ ಪಡೆದು ಬಟ್ಟೆ ಬ್ಯಾಗ ಅನ್ನು ವಿತರಿಸಿ ಪ್ಲಾಸ್ಟಿಕ್ ಮುಕ್ತವಾಗಿ ಗ್ರಾಮ ಮಾಡೋಣ ಎಂದು ಅರಿವು ಮಾಡಿಕೊಟ್ಟರು.

ಈ ವೇಳೆ ವಿದ್ಯುತ್ ವಿಭಾಗದ ಮುಖ್ಯಸ್ಥ ಡಾ.ಗೋಪಾಲರೆಡ್ಡಿ, ಸಹಾಯಕ ಉಪನ್ಯಾಸಕ ಗೌತಮ್ ಬಿ., ತಾಂತ್ರಿಕ ವಿಭಾಗದ ಬೋಧಕೇತರ ವರ್ಗದ ವಸಂತ, ಚಿನ್ನಸ್ವಾಮಿ, ಅನಿಲ್, ನಾಗೇಶ್ ಹಾಗೂ ಪ್ರೌಢಶಾಲೆ ಅಭಿವೃದ್ಧಿ ಸಮಿತಿ ಅಧ್ಯಕ್ಷ ಹರೀಶ್, ಸಹ ಶಿಕ್ಷಕರು, ವಿದ್ಯಾರ್ಥಿಗಳು ಹಾಜರಿದ್ದರು.

ಧನಸಹಾಯ ವಿತರಣೆ



ಇತ್ತೀಚಿಗೆ ಸಾವನ್ನಪ್ಪಿದ ಹೆಚ್.ಡಿ.ಕೋಟೆ ತಾಲೂಕಿನ ಹ್ಯಾಂಡ್‌ಪೋಸ್ಟ್ ನಿವಾಸಿ ಟೈಲರ್ ಸಹದೇವನ್ ಕುಟುಂಬಕ್ಕೆ ಮೈಸೂರು ಮತ್ತು ಮಂಡ್ಯ ಜಿಲ್ಲೆ ನೆರವು ನಿಧಿ ಸಮಿತಿಯಿಂದ 30 ಸಾವಿರ ಧನಸಹಾಯ ವಿತರಿಸಲಾಯಿತು. ಈ ವೇಳೆ ಸಮಿತಿ ಅಧ್ಯಕ್ಷ ಎಸ್.ಪರಮೇಶ್, ಪ್ರಧಾನ ಕಾರ್ಯದರ್ಶಿ ಗೋವಿಂದ ನಾಯಕ, ಖಜಾಂಚಿ ಕಮಲ, ಸಂಚಾಲಕಿ ಉಮಾ, ಹೆಚ್.ಡಿ.ಕೋಟೆ ತಾಲೂಕು ಟೈಲರಿಂಗ್ ಅಧ್ಯಕ್ಷ ರಂಗಸ್ವಾಮಿ, ಗೌರವಾಧ್ಯಕ್ಷ ಟಿ.ಸಿ. ಜಗದೀಶ್, ಉಪಾಧ್ಯಕ್ಷ ಪ್ರವೀಣ್, ನಿರ್ದೇಶಕರಾದ ಸೈಯದ್ ಇನಾಯತ್, ಪರಮೇಶ್ವರ ಚಾರ್, ಸರಗೂರು ತಾಲೂಕು ಟೈಲರಿಂಗ್ ಅಧ್ಯಕ್ಷ ಪ್ರಕಾಶ್, ಸದಸ್ಯರಾದ ಮಂಜು, ದೇಶಲಿಂಗಯ್ಯ, ಪ್ರಭುಸ್ವಾಮಿ, ನೀಲಕಂಠಯ್ಯ, ಎಂ.ನಾಗರಾಜು, ಪ್ರಕಾಶ್ ಇನ್ನಿತರರಿದ್ದರು.

SHUBHAYATRA HOLIDAYS
Mysore Branch
AMARNATH YATRA with VAISHNOVDEVI & KASHMIR by Flight
(9 nights, 10 days)
BOOKINGS OPEN
Date: July 9th & July 25th
Mob: 74833-73991

MUDA APPROVED SITES
• 30x40 - 46 L | 30x50 - 56 L
60x40 - 85 L
PRAGATHI DREAMS
KBL SILICON CITY NEAR INFOSYS, L&T MYSURU
• 2 BHK House for rent, Vijaya Bank Circle, Kuvempunagar (Commercial / Residential)
Call : 90356 96961

WANTED
FRONT OFFICE EXECUTIVE
(Female Only)
Candidates with 2 years of work experience in International Travel office may apply.
Salary : Rs. 15000/-
DREAM WORLD TRAVELS
Vijayanagar 1st Stage, Mysore
Contact : 99452 42427

HOUSE FOR SALE
House No. 1060, Sathagalli 'B' Zone
DIMENSION : 20x30
WEST FACING
(North Facing Door)
MUDA allotted Property
BRAND NEW HOUSE
Ground floor 2BHK and First floor 2BHK Furnished.
Contact Lokesh
96116 89777

WANTED
Teachers fluent in English for an English Medium Christian High School in Mandya
B.Sc, B.Ed (CBZ)
Salary Rs. 25000/- plus P.F
Contact Principal
6360801993
6360011505

LOANS | ಸಾಲಗಳು
[From 34 + Nationalised & Private Banks]
Processing fee* Fore closer fee* '0' Hidden Charges Brokerage fee
PERSONAL LOAN - 10.50%*
BUSINESS LOAN - 14%*
DOCTORS LOAN - 10.75%*
HOME LOAN - 8.60%*
MORTGAGE LOAN - 9.50%*
Contact for more details :
9880013358 | 9663153537
Kanti Complex, #2927, 1st Main, 5th Cross, Next to Allen Institution, Saraswathipuram, Mysuru
LOAN | LOAN | LOAN | LOAN | LOAN | LOAN | LOAN

ವಿಲ್ಲಾ ಸೈಟ್–ಹುಣಸೂರು
20x30, 20x40, 30x40, 30x50
4 Kms ಬಸ್ ಸ್ಟಾಂಡ್ ನಿಂದ
Entrance Arch, DC Approved, Huda Approved, Water Tank
40 ಅಡಿ ರಸ್ತೆ, 75% ಬ್ಯಾಂಕ್ ಲೋನ್
Rs. 675/ Sft.
9900201234

NKF Public School
Kollegal Main road, T.Narasipura
B.Sc B.Ed - Science
C.PEd / B.PEd - PE Teacher & Drawing Teacher
ಮೇಲ್ಕಂಡ ವಿಷಯಕ್ಕೆ ಮಹಿಳಾ ಶಿಕ್ಷಕಿಯರು ಬೇಕಾಗಿದ್ದು ಕೂಡಲೇ ಸಂಪರ್ಕಿಸಿ ದಾಖಲೆ ಸಲ್ಲಿಸತಕ್ಕದ್ದು.
ಸಂದರ್ಶನ ದಿ: 10.06.2024
ಬೆಳಗ್ಗೆ 10.30 ಗಂಟೆಗೆ
08227-295990, 8861565645

SITES NEAR YELWALA
Dtcp Approved, RERA Approved
20x30, 30x40, 30x50
attached to Kushal Nagara Express way,
Ready to Construction
Surrounded by Houses
Call or Whatspp
96325 22332

2.5 BHK HOME INTERIORS
Starts @ 2.5 LAC*
Home Space Mart
Home Interiors ★ Office Interiors
✆ 91089 23123

SITES FOR SALE
DTCP sites near Kellahally 2Nos
Gravity -1, (Divya Green)
Properties (30x40) - 21 lakhs
MUDA Site Near Dadadahalli - 1 Nos
Gravity - (Prashanth Premium)
Properties (30x40) - 31 Lakhs
9845949841
(PRICE NEGOTIABLE)

WANTED
Computer Billing Operator (Boy or Girls)
Sri Veerabhadreshwara Traders
No.35, Near KSRTC Extension, Ishwarya Layout, J.P.Nagar, Mysuru-31
9901210062

SITE FOR SALE IN
Developed Residential Area
■ 30×40 EAST FACING
■ Silver Springs Layout
■ Bogadi Road Martikayathanahalli
Mob: 9035379769

ಕಾರ್ಯಕ್ರಮಗಳು ಹಾಗೂ ಸಭೆಗಳಿಗೆ
ವೈದ್ಯರ ಸಮುದಾಯ ಭವನ



ಆಲನಹಳ್ಳಿ, ಟಿ.ನರಸೀಪುರ ರಸ್ತೆ, ರಿಂಗ್ ರಸ್ತೆ ಜಂಕ್ಷನ್, ಮೈಸೂರು
ಸುಸಜ್ಜಿತ ಸಭಾಂಗಣ, ಡೈನಿಂಗ್ ಹಾಲ್, ಜನರೇಟರ್, ಪಾರ್ಕಿಂಗ್ ಸ್ಥಳ, ಇತ್ಯಾದಿ.
Call : 96111 72148, 94495 61722, 98451 29002
Office time 11 am to 6.00 pm on all days

MUDA APPROVED
₹20 Lakhs Only
(20 x 30 Site)
HERITAGE CITY
Uttanahalli, Mysuru
PRM/KA/RERA/1268/PR/160124/006555
READY FOR REGISTRATION
Available Plots 20x30 & 30x40
✆ 86188 03878 / 63645 32526





HP
DTCP APPROVAL
ನಿಸರ್ಗ ಇಕೋ ಪ್ಯಾರಡೈಸ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
ನಿಮ್ಮ ಕನಸಿನ ನಿವೇಶನ ಮೈಸೂರಿನಲ್ಲಿ
ಸುಲಭ 4 ಕಂತುಗಳ ಸೌಲಭ್ಯವಿದೆ
ಕೇವಲ ₹650/ ಪ್ರತಿ ಚದರ ಅಡಿ
30x40 | 30x50
40x60 | 50x80
ಅಚತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಕೆಲವೇ ಸೈಟ್‌ಗಳು ಮಾತ್ರ ಲಭ್ಯ
ಹೈಲ್ಯಾಂಡ್ ಪ್ರಾಪರ್ಟೀಸ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
74060 01386
90713 86615

ವಿವೇಕಾನಂದ ಶಿಕ್ಷಣ ಸಂಸ್ಥೆ – ಬನ್ನೂರು
ತಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ
ಶಿಕ್ಷಕರು ಬೇಕಾಗಿದ್ದಾರೆ

1	ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರು (ಆಂಗ್ಲ ಮಾಧ್ಯಮ)	ಡಿ.ಇಡಿ, ಬಿ.ಎ, ಬಿ.ಇಡಿ, ಇಂಗ್ಲಿಷ್, ಹಿಂದಿ, ಬಿ.ಎಸ್ಸಿ, ಎಂ.ಎಸ್ಸಿ, ಬಿ.ಇಡಿ ಗಣಿತ (PCM), ವಿಜ್ಞಾನ (CBZ)
2	ವಾರ್ಡನ್‌ಗಳು /ಗುಮಾಸ್ತರು	ಪಿಯುಸಿ, ಬಿ.ಎ, ಬಿಎಸ್ಸಿ, ಎಂ.ಎ, ಬಿ.ಇಡಿ
3	ದೈಹಿಕ ಶಿಕ್ಷಕರು	ಬಿ.ಪಿ.ಇಡಿ, ಎಂ.ಪಿ.ಇಡಿ
4	ಕಾಲೇಜು ಉಪನ್ಯಾಸಕರು	ಇಂಗ್ಲೀಷ್, ಅರ್ಥಶಾಸ್ತ್ರ, ಇತಿಹಾಸ
5	ಶಾಲಾ ವಾಹನ ಚಾಲಕರು	ಡಿ.ಎಲ್. ಹೊಂದಿರಬೇಕು

ಸಂಪರ್ಕಿಸಿ: 96320 38206
78294 45993, 93413 88404

WE ARE HIRING
WISDOM
English | Mathematics | Science
Pre- Primary | Computer
Kollegal



REQUIREMENTS :
- Excellent written and spoken english
- Passinotate educator and ability to deliver inquiry based learning
- Up to date in teaching methods

What we Offer:
- Starts from Rs 15,000/- per month (Depending on your experience and communication skills)

SEND YOUR CV :
+91 9886429913
workatwisdom2024@gmail.com

HOUSE FOR LEASE
20 X 30 EAST FACING
INDEPENDENT HOUSE
RAMAKRISHNA NAGAR, I BLOCK
84316 03681

NEW HOUSE FOR SALE
30x40, G.Floor - 1 BHK + 2 SUV car parking. F.Floor - 4 BHK Duplex, Vijayanagar 4th Stage, 2nd Phase, Next to Park.
Rs. 2.15 Cr. Negotiable.
Mob: 9611115254

